ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ ೧೨ ಸಂಚಿಕೆ ೬ | ಫೆಬ್ರುವರಿ ೧೧, ೧೯೯೦ | ರೂ ೧.೫೦

ಬಿಳಿಯರ ಸರ್ಕಾರದ ಶರಣಾಗತಿಯ ಮೊದಲ ಹೆಜ್ಜೆ

ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್ ನಿಷೇಧ ರದ್ದು

ಮಂಡೇಲಾ ಬಿಡುಗಡೆಯ ಘೋಷಣೆ



ವಿಶ್ವದ ಶೋಷಕರೆಲ್ಲರ ಕ್ರೌರ್ಯ ಹಿಂಸೆಗಳು ಒಟ್ಟುಗೂಡಿದಂತೆ, ಭೂಮಿಯ ಮೇಲಿನ ಎಲ್ಲಾ ಅಸುರೀ ಶಕ್ತಿಗಳು ಮೂರ್ತಿವೆತ್ತಂತೆ ತನ್ನ ದಬ್ಬಾಳಿಕೆಯನ್ನು ಸಾಗಿಸಿದ್ದ ದಕ್ಷಿಣ ಆಫ್ರಿಕಾದ ಬಿಳಿಯರ ಪೈಶಾಚಿಕ ಪ್ರಭುತ್ವ ಮಣಿಯಬೇಕಾಗಿ ಬಂದಿದೆ. ದಕ್ಷಿಣ ಆಫ್ರಿಕಾದ ಕಪ್ಪು ಸೋದರರ ಅವಿರತ ಹೋರಾಟ, ಎಣೆಯಿಲ್ಲದ ಬಲಿದಾನಗಳು ವಿಶ್ವದ ಎಲ್ಲಾ ಜನತೆಯ ಏಕಾಭಿಪ್ರಾಯ, ಇದರ ಫಲವಾಗಿ ವಿಶ್ವದ ಬಹುತೇಕ ಸರ್ಕಾರಗಳ ಆರ್ಥಿಕ ನಿಷೇಧ, ಕೊನೆಗೆ ದಕ್ಷಿಣ ಆಫ್ರಿಕಾದ ಸಂಪತ್ತಿನ ದರೋಡೆಕಾರರಲ್ಲಿ ಪ್ರಮುಖರಾದ ಅಮೇರಿಕಾ, ಫ್ರಾನ್ಸ್‌ಗಳೂ ಆರ್ಥಿಕ ದಿಗ್ಬಂಧನ ಹೇರಬೇಕಾದ ಅನಿವಾರ್ಯತೆ, ಇವೆಲ್ಲವೂ ಏನಾದರೊಂದು ಮಾಡಲೇಬೇಕಾದ ಒತ್ತಡವನ್ನು ಬಿಳಿಯರ ಸರ್ಕಾರದ ಮೇಲೆ ಹೇರಿತು. ಜಗತ್ತಿನೆಲ್ಲಾ ಜನತೆಯ ಏಕಾಭಿಪ್ರಾಯವನ್ನು ಇಷ್ಟುಕಾಲ ಧಿಕ್ಕರಿಸಿದ ಬಿಳಿಯರ ಸರ್ಕಾರ ಈ ಸಂಘರ್ಷ ದಿನ ಕಳೆದಂತೆ ಕಿಚ್ಚಾಗಿ, ದಾವಾನಲವಾಗಿ ಕೊನೆಗೆ ಅಗ್ನಿಪರ್ವತವಾಗಿ ನುಗ್ಗಿ ಬರುತ್ತಿರುವುದನ್ನು ನೋಡಿ ತನ್ನ ಕಾಲಕೆಳಗಿನ ನೆಲವೇ ಕುಸಿಯುತ್ತಿರುವ ಅನುಭವವಾಗಿ ನೆಲ್ಸನ್ ಮಂಡೇಲಾರೊಡನೆ ಮಾತುಕತೆ ಆರಂಭಿಸಿತು. ಅವರಿಂದ ಹೋರಾಟವನ್ನು ಬಿಡುವ, ಹಿಂಸೆಯನ್ನು ಪ್ರತಿಹಿಂಸೆಯಿಂದ ಎದುರಿಸುವ ಹಕ್ಕನ್ನು ತ್ಯಜಿಸುವ, ಕೊನೆಗೆ ಮಾರ್ಕ್ಸ್‌ವಾದ–ಲೆನಿನ್‌ವಾದವನ್ನು ಬಿಡುವ ಆಶ್ವಾಸನೆಯನ್ನು ಪಡೆದು ಬಿಡುಗಡೆ ಮಾಡಿ ತನ್ನ ಜೀವವುಳಿಸಿಕೊಳ್ಳ ಬಯಸಿತು. ಈ ಉಪಾಯಗಳಾವುವೂ ಸಫಲವಾಗದಿದ್ದಾಗ ಮತ್ತೆ ಮಾತುಕತೆ ಆರಂಭಿಸಿತು. ಅದಕ್ಕಾಗಿ ಸಂಧಾನ ನಡೆಸಲೆಂದೇ ಡಿಕ್ಲರ್ಕ್ ಎಂಬ ಹೊಸಮುಖವೊಂದನ್ನು ಆರಿಸಿತು. ಪೈಶಾಚಿಕ ದಮನದಿಂದ ಸಾಧ್ಯವಾಗದ್ದನ್ನು ಸಂಧಾನದ ಮೂಲಕ ಉಳಿಸಿಕೊಳ್ಳುವ ಪ್ರಯತ್ನ ಈಗ್ಗೆ ಎರಡು ಮೂರು ತಿಂಗಳುಗಳಿಂದ

ಪುಟ 6 ಕ್ಕೆ.

ಸಂಪಾದಕೀಯ

ರೈತರ ಸಾಲ ಮನ್ನಾ ವೀರೇಂದ್ರ ಪಾಟೀಲ್ ಸರಕಾರಕ್ಕೆ ಯಾಕೆಷ್ಟು ಕಸಿವಿಸಿ?

ರಾಜ್ಯದಲ್ಲಿ ಶ್ರೀ ವೀರೇಂದ್ರ ಪಾಟೀಲ್ ನೇತೃತ್ವದ ಕಾಂಗ್ರೆಸ್(ಐ) ಸರಕಾರ ತೀ[illegible] ಪ್ರತಿಗಾಮಿ, ಸಂಪ್ರದಾಯ ಸರಕಾರವಾಗಿ ವರ್ತಿಸುತ್ತಿದೆ.

ಕಾಂಗ್ರೆಸ್(ಐ) ಮಂತ್ರಿಮಂಡಳ ಅಧಿಕಾರ ವಹಿಸಿಕೊಂಡ ನಂತರ ರಾಜ್ಯದ ಪೋಲೀಸು ಅಧಿಕಾರಿಗಳು ನಡೆದುಕೊಳ್ಳುತ್ತಿರುವ ರೀತಿ-ನೀತಿ ಒಂ[illegible] ಉದಾಹರಣೆಗೆಯಾದರೆ ಜಿಲ್ಲಾ ಪರಿಷತ್ತುಗಳು ನೇಮಕ ಮಾಡಿದ ಸಾವಿರಾ[illegible] ಅಧ್ಯಾಪಕರನ್ನು ವಜಾ ಮಾಡಲು ಹೊರಟ ರಾಜ್ಯ ಸರ್ಕಾರದ ಕ್ರಮ ಇನ್ನೊಂ[illegible] ಉದಾಹರಣೆ "ಬಲಾತ್ಕಾರವಾಗಿ ರಾಜ್ಯ ಸರಕಾರಿ ನೌಕರರನ್ನು ನಿವೃತ್ತಿಗೊಳಿಸ[illegible] ಸಲುವಾಗಿ ಒಂದು ಸಮಿತಿ ಮಾಡಲಾಗುವುದು" ಎಂದು ವೀರೇಂದ್ರ ಪಾಟೀಲ[illegible] ಹೇಳಿಕೆ ನೀಡಿದರೆ, ಬಸವಲಿಂಗಪ್ಪನವರು "ರಾಜ್ಯ ಸರಕಾರಿ ನೌಕರರ ಅರಬ್ಬಿ ಕಡ[illegible] ಹಾಕುತ್ತೇವೆ" ಎಂದು ಬೀದರಿನಲ್ಲಿ ಕೊಟ್ಟ ಹೇಳಿಕೆ ಮತ್ತೊಂದು ಉದಾಹರಣೆ.

ಎಲ್ಲಕ್ಕೂ ಮಿಗಿಲಾಗಿ ರೈತರ ರೂ. 10 ಸಾವಿರದಷ್ಟು ಸಾಲವನ್ನು ಮ[illegible] ಮಾಡುವ ವಿಷಯದಲ್ಲಿ ಶ್ರೀ ವೀರೇಂದ್ರ ಪಾಟೀಲರ ನಡವಳಿಕೆ ಮತ್ತು 'ಜಾ[illegible] ಹೇಳಿಕೆಗಳು ಈ ಸರಕಾರದ ಪ್ರತಿಗಾಮಿತ್ವಕ್ಕೆ ಅತ್ಯುತ್ತಮ ಉದಾಹರಣೆ.

ಇತ್ತೀಚೆಗೆ ನಡೆದ ಲೋಕಸಭಾ ಚುನಾವಣೆ ಮತ್ತು ರಾಜ್ಯ ವಿಧಾನಸ[illegible] ಚುನಾವಣೆಯ ಕಾಲದಲ್ಲಿ ಕೇಂದ್ರದಲ್ಲೂ, ರಾಜ್ಯದಲ್ಲೂ ಅಧಿಕಾರಕ್ಕಾಗಿ ಹೋರಾ[illegible] ಪಕ್ಷಗಳು- ಪ್ರಮುಖವಾಗಿ ಕಾಂಗ್ರೆಸ್(ಐ) ಮತ್ತು ಜನತಾದಳ- ರೈತರ ಸಾಲವ[illegible] ರೂ. 10,000 ದಷ್ಟು ಮನ್ನಾ ಮಾಡುತ್ತೇವೆ ಎಂದು ಮತದಾರರಿಗೆ ಆಶ್ವಾ[illegible] ಕೊಟ್ಟಿದ್ದವನ್ನು. ಈಗ ಕೇಂದ್ರದಲ್ಲಿ ಜನತಾ ದಳ ಅಧಿಕಾರಕ್ಕೆ ಬಂದಿದೆ. ಕರ್ನಾಟಕದ[illegible] ಕಾಂಗ್ರೆಸ್(ಐ) ಅಧಿಕಾರಕ್ಕೆ ಬಂದಿದೆ.

ಕೇಂದ್ರದ ಜನತಾದಳ ಹಾಗೂ ರಾಷ್ಟ್ರೀಯ ರಂಗದ ವಕ್ತಾರರು ವಿ.ಪಿ.ಸಿಂ[illegible] ಅಥವಾ ದೇವಿಲಾಲ್ ನಾವು ರೈತರಿಗೆ ಕೊಟ್ಟ ಸಾಲ ಮನ್ನಾದ ಭರವಸೆಯ[illegible] ಈಡೇರಿಸಲು ಕ್ರಮ ತೆಗೆದುಕೊಳ್ಳುತ್ತೇವೆ. ಬಜೆಟ್ ಅಧಿವೇಶನದ ಒಳಗೆ ರೂ[illegible] ರೇಷೆಗಳನ್ನು ತಯಾರಿಸಿ ದೇಶದ ಮುಂದಿಡುತ್ತೇವೆ ಎಂದಿದ್ದಾರೆ.

ಎಂಟು ರಾಜ್ಯಗಳಲ್ಲಿ ಈಗ ವಿಧಾನಸಭಾ ಚುನಾವಣೆಗಳನ್ನು ಎದುರಿಸುವ[illegible] ಜನತಾದಳ 10 ಸಾವಿರ ರೂ. ಸಾಲ ಮನ್ನಾ ಮಾಡಿದರೆ, ನಾವು 12 ಸಾವಿರ ರೂ. ಸಾ[illegible] ಮನ್ನಾ ಮಾಡುತ್ತೇವೆ ಎಂದು ಕಾಂಗ್ರೆಸ್(ಐ) ಸರಕಾರಗಳು ಸಾರಿವೆ. ಈ ದಿಸೆಯ[illegible] ಕೆಲವೊಂದು ಕ್ರಮಗಳನ್ನು ಈ ಕೆಲವು ಕಾಂಗ್ರೆಸ್(ಐ) ಸರಕಾರಗಳು ಕೈಗೊಂಡಿವೆ.

ಆದರೆ ವಿಧಾನ ಸಭಾ ಚುನಾವಣೆಯನ್ನು (ಲೋಕ ಸಭಾ ಚುನಾವಣೆಯನ್ನ[illegible] ಪೂರೈಸಿಕೊಂಡ ಕರ್ನಾಟಕದ ಕಾಂಗ್ರೆಸ್(ಐ) ಸರಕಾರ ರೈತರ ಸಾಲ ಮನ್ನಾ ಮಾಡ[illegible] ವಿಷಯದಲ್ಲಿ ಸಂಪೂರ್ಣ ಹಿಂದೇಟು ಹಾಕುತ್ತಿದೆ!

ರೈತರ ಸಾಲ ಮನ್ನಾ ಮಾಡುವ ವಿಷಯದಲ್ಲಾಗಲಿ, ರೈತರ ಸಾಲದ ಮೇ[illegible] ಬಡ್ಡಿಯನ್ನು ಮನ್ನಾ ಮಾಡುವ ವಿಷಯದಲ್ಲಾಗಲೀ ರಾಜ್ಯ ಸರಕಾರಕ್ಕೆ ಏನೇ[illegible] ಜವಾಬ್ದಾರಿ ಇಲ್ಲವೆಂಬಂತೆ ಹೇಳಿಕೆಗಳನ್ನು ಕೊಡುತ್ತಿದೆ: ಅಷ್ಟೇ ಗಳ[illegible] ಹೊರಡಿಸುತ್ತಿದೆ.

ಪುಟ 6 ಕ್ಕೆ

ಪಾಕಿಸ್ತಾನ ಮೂಗು ತೂರುವುದು ನಿಲ್ಲಬೇಕು

ಪುಟ 8 ನೋಡಿ

ಕೇರಳದಲ್ಲಿ ಕಮ್ಯುನಿಸ್ಟ್ ಆಂದೋಲನಕ್ಕೆ ಐವತ್ತು ವರ್ಷಗಳು

(ಇ.ಎಂ.ಎಸ್. ನಂಬೂದರಿಪಾಡ್)

> ಜನರೊಡನೆ ಇದ್ದು ಅವರ ನೇತೃತ್ವ ವಹಿಸುವ ಪ್ರಕ್ರಿಯೆ ಕೇರಳದಲ್ಲಿ ಕಮ್ಯುನಿಸ್ಟ್ ಇದೇ ಆಂದೋಲನದ ಐವತ್ತು ವರ್ಷಗಳ ಪ್ರಧಾನ ಅಂಶ.

50 ವರ್ಷಗಳ ಹಿಂದೆ ಡಿಸೆಂಬರ್ 1939 ರ ಕೊನೆಯ ದಿನಗಳು ಅಥವಾ ಜನವರಿ 1940 ರ ಮೊದಲ ದಿನಗಳಿರಬಹುದು (ಸರಿಯಾದ ದಿನಾಂಕ ಈಗ ಯಾರಿಗೂ ನೆನಪಿಲ್ಲ). ತೆಲ್ಲಿಚೇರಿಯಿಂದ ಕೆಲವು ಕಿಲೋ ಮೀಟರ್ ದೂರದ ಒಂದು ಗ್ರಾಮೀಣ ವಾಚನಾಲಯದಲ್ಲಿ, ಆಗಿನ ಕಾಂಗ್ರೆಸ್ ಸಮಾಜವಾದಿ ಪಕ್ಷ (ಸಿ.ಎಸ್.ಪಿ.) ದ ಕೇರಳ ಘಟಕದ 100 ಸಕ್ರಿಯ ಕಾರ್ಯಕರ್ತರು ಸಭೆ ಸೇರಿದ್ದರು. ಗಂಟೆಗಳ ಚರ್ಚೆಯ ನಂತರ ತಾವು ಇಡೀ ಘಟಕವಾಗಿ ಭಾರತ ಕಮ್ಯುನಿಸ್ಟ್ ಪಕ್ಷದ ಕೇರಳ ಘಟಕವಾಗಿ ಬದಲಿಸಿಕೊಳ್ಳಬೇಕೆಂದು ನಿರ್ಧರಿಸಿದರು.

ಈ ಸಭೆಯ 50 ನೇ ವಾರ್ಷಿಕೋತ್ಸವವನ್ನು ಸಪ್ಟೆಂಬರ್ 19 ರಿಂದ ಐದು ತಿಂಗಳು ಕಣ್ಣಾನೂರು ಜಿಲ್ಲೆಯಾದ್ಯಂತ ಆಚರಿಸಲಾಯಿತು. ಸಮ್ಮೇಳನಗಳು, ವಿಚಾರ ಸಂಕಿರಣಗಳು, ಚರ್ಚೆಗಳ ಮೂಲಕ ಕೇರಳದಲ್ಲಿ ಸಿ.ಎಸ್.ಪಿ. ಸಿ.ಪಿ.ಐ. ಯಾಗಿ ಪರಿವರ್ತನೆಗೊಂಡುದರ ಮಹತ್ವವನ್ನು ವಿವರಿಸಲಾಯಿತು. 50 ವರ್ಷಗಳ ಹಿಂದೆ ಚಾರಿತ್ರಿಕ ಸಭೆ ನಡೆದ ಸ್ಥಳದಲ್ಲೇ ಈ ಆಚರಣೆಯ ಸಮಾರೋಪ ಕಾರ್ಯಕ್ರಮ ಜನವರಿ 19, 1990 ರಂದು ನಡೆಯಿತು. ಈ ಘಟನೆಯ ಚಾರಿತ್ರಿಕ ಮಹತ್ವ ನಿರೂಪಿಸುವ ಎರಡು ಸ್ಮಾರಕಗಳಿಗೆ ಅಡಿಗಲ್ಲು ಅದೇ ದಿನ ಹಾಕಲಾಯಿತು.

50 ವರ್ಷಗಳ ಹಿಂದಿನ ಈ ತೆಲ್ಲಿಚೇರಿ ಸಮ್ಮೇಳನ ಸುಮಾರು ಅರ್ಧ ದಶಕವನ್ನೂ ಮೀರಿದ ಪ್ರಕ್ರಿಯೆಯ ಅಂತಿಮಘಟ್ಟವಾಗಿತ್ತು. 1934 ರಲ್ಲಿ ಸಿಎಸ್.ಪಿ. ಸ್ಥಾಪನೆಯೊಂದಿಗೆ, ಅದರಲ್ಲಿದ್ದ ಭವಿಷ್ಯದ ಕಮ್ಯುನಿಸ್ಟರ ದುಡಿಮೆಯಿಂದಾಗಿ ದುಡಿಯುವ ಜನಗಳೊಂದಿಗೆ ಒಂದು ರಾಜಕೀಯ ಪಕ್ಷ ಮೊದಲ ಬಾರಿಗೆ ರಾಜ್ಯದಲ್ಲಿ ಗಟ್ಟಿ ಸಂಪರ್ಕ ಹೊಂದುವಂತಾಗಿತ್ತು. ಈ ಸಮ್ಮೇಳನದ ಎರಡೂವರೆ ವರ್ಷಗಳ ಮೊದಲು ಸಿ.ಎಸ್.ಪಿ.ಯ ಕೇರಳದ ನಾಲ್ಕು ಪ್ರಮುಖ ಮುಂದಾಳುಗಳು ಸಿ.ಪಿ.ಐ. ಕೇಂದ್ರ ಸಮಿತಿ ಸದಸ್ಯ ಘಾಟೆಯವರೆದುರು ಸಿ.ಪಿ.ಐ.ನ ಕೇರಳ ಘಟಕ ಆರಂಭಿಸಿದ್ದರು. ಆದರೂ ಕಾಂಗ್ರೆಸ್‌ನಲ್ಲಿ ಇವರು ಸಿ.ಎಸ್.ಪಿ. ಮುಖಂಡರಾಗಿಯೇ ಪ್ರಮುಖ ಸ್ಥಾನಗಳಲ್ಲಿ ದುಡಿಯುತ್ತಿದ್ದರು. ಜತೆಗೆ ಕಾರ್ಮಿಕರು, ರೈತರು, ಅಧ್ಯಾಪಕರು ಮುಂತಾದ ವಿವಿಧ ವಿಭಾಗಗಳ ಸಂಘಟನೆಯಲ್ಲಿ ತೊಡಗಿದ್ದರು. ಹೀಗೆ ಈ ಸಮ್ಮೇಳನ ಕೇರಳದಲ್ಲಿ ಸಿಎಸ್.ಪಿ. ಇಡಿಯಾಗಿ ಸಿ.ಪಿ.ಐ. ಆಗಿ ಪರಿವರ್ತನೆಗೊಳ್ಳುತ್ತಿದ್ದ ವಾಸ್ತವಿಕತೆಯನ್ನು ಅಧಿಕೃತವಾಗಿ ದಾಖಲು ಮಾಡಿದ ಘಟನೆಯಾಗಿತ್ತು.

ವಾಸ್ತವವಾಗಿ ಪಕ್ಷವನ್ನು ಸ್ವತಂತ್ರವಾಗಿ ಸಂಘಟಿಸುವುದಲ್ಲದೆ ಬೇರೆ ದಾರಿಯೂ ಇರಲಿಲ್ಲ. ಯಾಕೆಂದರೆ ಕಾಂಗ್ರೆಸ್ಸಿನೊಳಗೆ ಎಡ ಮತ್ತು ಬಲ ಪಂಥೀಯರ ನಡುವೆ ಹೋರಾಟ ಹೆಚ್ಚೆಚ್ಚು ತೀವ್ರಗೊಳ್ಳುತ್ತಿತ್ತು. ಅಧ್ಯಕ್ಷೀಯ ಚುನಾವಣೆಯಲ್ಲಿ ಬಲಪಂಥಿಯ ಅಭ್ಯರ್ಥಿ (ಪಟ್ಟಾಭಿ ಸೀತಾರಾಮಯ್ಯನವರು) ಯನ್ನು ಸೋಲಿಸಿ ಗೆದ್ದ ಅಭ್ಯರ್ಥಿ (ಸುಭಾಸ್ ಚಂದ್ರ ಬೋಸ್) ಯನ್ನು ಕಾಂಗ್ರೆಸ್ಸಿನಿಂದ ಹೊರಹಾಕಿ ಎಡಪಂಥಿಯರಿಗೆ ಸ್ಪಷ್ಟ ಎಚ್ಚರಿಕೆ ನೀಡಲಾಗಿತ್ತು. ತೆಲ್ಲಿಚೇರಿ ಸಮ್ಮೇಳನ ನಡೆದ ಒಂದು ವರ್ಷದೊಳಗೆ ಎಡನೇತೃತ್ವದ ಕೇರಳ ಪ್ರದೇಶ ಕಾಂಗ್ರೆಸ್ ಸಮಿತಿಯನ್ನು ಎ.ಐ.ಸಿ.ಸಿ. ಬರ್ಖಾಸ್ತು ಮಾಡಿತು.

ಆಗ ಕಮ್ಯುನಿಸ್ಟ್ ಪಕ್ಷ ಕಾನೂನು ಬಾಹಿರ ಸಂಘಟನೆಯಾದ್ದರಿಂದ ತಲೆ ಮರೆಸಿಕೊಂಡು ಮೇಲಿಂದ ಕೆಳಗಿನವರೆಗೂ ಪಕ್ಷ ಸಂಘಟಿಸಬೇಕಾಗಿತ್ತು. ಎರಡು ವರ್ಷಕ್ಕೂ ಹೆಚ್ಚಿನ ಗುಪ್ತ ಚಟುವಟಿಕೆಗಳು ಪಕ್ಷಕ್ಕೂ ಜನತೆಗೂ ಒಂದು ಹೊಸ ಅನುಭವವಾಗಿತ್ತು. ಜನತೆಯ ನಡುವೆ ಇದ್ದು ಬ್ರಿಟಿಷ ಆಳರಸರ ತೀಕ್ಷ್ಣ ಕಣ್ಣುಗಳಿಂದ ತಪ್ಪಿಸಿಕೊಳ್ಳುವುದು ಪಕ್ಷಕ್ಕೆ ಸಾಧ್ಯ ಎಂದು ಆ ಅನುಭವ ತೋರಿಸಿಕೊಟ್ಟಿತ್ತು.

ಒಂದು ದಶಕದೊಳಗೆ ಮೂಲ ಸಿ.ಎಸ್.ಪಿ.ಯ ಸಮಸ್ತ ಕಾರ್ಯಕರ್ತರು, ಮುಂದಾಳುತ್ವ, ಕಾನೂನು ಬದ್ಧವಾಗಿ ಕಾರ್ಯನಿರ್ವಹಿಸುವ ಭಾರತ ಕಮ್ಯುನಿಸ್ಟ್ ಪಕ್ಷದ ಕೇರಳ ಘಟಕವಾಗಿ ಪರಿವರ್ತನೆ ಗೊಂಡಿತು. ತನ್ನದೇ ಪತ್ರಿಕೆ ಕರಪತ್ರಗಳನ್ನು, ಪುಸ್ತಕಗಳನ್ನು ಪ್ರಕಟಿಸಲಾರಂಭಿಸಿತ್ತು. ಕಾಂಗ್ರೆಸ್‌ಅನ್ನು ಅವಲಂಬಿಸದೆ, ಸ್ವತಂತ್ರವಾಗಿ, ಅದರ 'ಕ್ವಿಟ್ ಇಂಡಿಯಾ' ಧೋರಣೆ ವಿರೋಧಿಸಿ ತೀವ್ರ ಪ್ರತಿಕ್ರಿಯೆಯಲ್ಲಿ ತೊಡಗಿತು. ಮೂರು ವರ್ಷಗಳ ಕಾಲ ಕಾಂಗ್ರೆಸ್ ಮುಂದಾಳುತ್ವದಲ್ಲಿದ್ದ ಸಾಮ್ರಾಜ್ಯಶಾಹಿ - ವಿರೋಧಿ ಆಂದೋಲನದಿಂದ ದೂರ ಸರಿಸಲ್ಪಟ್ಟರೂ ಸಂಘಟನಾತ್ಮಕವಾಗಿ, ರಾಜಕೀಯವಾಗಿ ಕ್ರೋಢೀಕರಣಗೊಳ್ಳುತ್ತಾ ಹೋಯಿತು.

1946 ಕೇರಳದಲ್ಲಿ ಪಕ್ಷದ ಇತಿಹಾಸದಲ್ಲಿ ಒಂದು ಸ್ಮರಣೀಯ ದಿನ. ಸಾಮ್ರಾಜ್ಯಶಾಹಿ - ವಿರೋಧಿ ಜನಸಮೂಹಗಳು ಮತ್ತು ಪಕ್ಷದ ನಡುವೆ ಉಂಟಾಗಿದ್ದ ಅಂತರ ಕಳೆದು ಯುದ್ಧಾನಂತರ ಭುಗಿಲೆದ್ದ ದುಡಿಯುವ ಜನಗಳ ಹೋರಾಟಗಳಲ್ಲಿ ಮತ್ತೆ ನೇತೃತ್ವ ವಹಿಸಲಾರಂಭಿಸಿತು. ಪುನ್ನಪ್ರ ವಯಲಾರ್ ಹೋರಾಟ, ಮತ್ತಿತರ ರೈತರ, ಕಾರ್ಮಿಕರ, ವಿದ್ಯಾರ್ಥಿಗಳ ಹೋರಾಟಗಳ ಮಂಚೂಣಿಯಲ್ಲಿ ನಿಂತಿತು.

ಜನರೊಡನೆ ಇದುದ್ದೇ, ಅವರ ನೇತೃತ್ವ ವಹಿಸುವ ಈ ಸತತ ಪ್ರಕ್ರಿಯೆಯಿಂದಾಗಿ 1952 ರಲ್ಲಿ, ಸಾರ್ವತ್ರಿಕ ಚುನಾವಣೆ ನಡೆಯುವ ವೇಳೆಗೆ ಪಕ್ಷ ಒಂದು ಮಹತ್ವದ ಚುನಾವಣಾ ಶಕ್ತಿಯಾಯಿತು. 1957 ರಲ್ಲಿ ಮೊದಲ ಕಮ್ಯುನಿಸ್ಟ್ ಸರಕಾರದ ರಚನೆ ಈ ಪ್ರಕ್ರಿಯೆಯ ಮುಂದಿನ ಬೆಳವಣಿಗೆ. ಪಡೆದ ಮತಗಳ ದೃಷ್ಟಿಯಿಂದ ಅಲ್ಪ ಮತದಲ್ಲಿದ್ದರೂ ರಾಜ್ಯದಲ್ಲಿ ಪಕ್ಷ ಎಂತಹ ಪ್ರಮುಖ ಚುನಾವಣಾ ರಾಜಕೀಯ ಶಕ್ತಿಯಾಗಿ ಮೂಡಿ ಬಂತೆಂದರೆ, ಅದರ ವರ್ಗವೈರಿ (ಕಾಂಗ್ರೆಸ್ ಪಕ್ಷ) ಜಾತ್ಯತೀತತೆಯ ನೀತಿ ತ್ಯಜಿಸಿ ರಾಜ್ಯದ ಪ್ರಮುಖ ಕೋಮುವಾದಿ ಶಕ್ತಿಗಳೊಂದಿಗೆ ಒಂದು ರಾಜಕೀಯ, ಚುನಾವಣಾ ಮೈತ್ರಿ ಮಾಡಿಕೊಳ್ಳುವುದು ಅಗತ್ಯ ಎಂದು ಯೋಚಿಸಿತು.

ಅಂದಿನಿಂದ ಕಾಲು ಶತಮಾನ ಮುಸ್ಲಿಂ, ಕ್ರಿಶ್ಚಿಯನ್ನರ ಕೋಮುವಾದಿ ಸಂಘಟನೆಗಳು, ಹಿಂದೂ ಜಾತಿವಾದಿ ಸಂಘಟನೆಗಳು ಒಂದೋ ಕಾಂಗ್ರೆಸ್‌ನೊಂದಿಗೆ ಅಥವಾ ಕಮ್ಯುನಿಸ್ಟ್ ಪಕ್ಷದೊಂದಿಗೆ ಮಿತ್ರತ್ವ ನಡೆಸಿಕೊಂಡು ಬಂದಿದ್ದಾರೆ. ರಾಜ್ಯದಲ್ಲಿ ಕೋಮುವಾದಿ ಜಾತಿವಾದಿ ಶಕ್ತಿಗಳ ನೆರವಿಲ್ಲದೆ ಕಾಂಗ್ರೆಸ್ಸಾಗಲಿ, ಕಮ್ಯುನಿಸ್ಟರಾಗಲಿ ಅಧಿಕಾರಕ್ಕೆ ಬರಲು ಸಾಧ್ಯವಿಲ್ಲ ಎಂಬ ಭಾವನೆ ಸೃಷ್ಟಿಸಲಾಯಿತು' ಘೋಷಿಸಲಾಯಿತು.

ಆದರೆ ಈ ಗಾಳಿಗುಳ್ಳೆ 1987 ರಲ್ಲಿ ಒಡೆದು ಹೋಯಿತು. ಎಡ, ಜಾತ್ಯತೀತ ಶಕ್ತಿಗಳ ನೆರವಿನಿಂದ ಕಮ್ಯುನಿಸ್ಟರು ಕಾಂಗ್ರೆಸ್ ನೇತೃತ್ವದ ಈ ಶಕ್ತಿಗಳಿಗೆ ದೊಡ್ಡ ಸೋಲುಂಟು ಮಾಡಿದರು. ಈಗಲೂ ರಾಜ್ಯದ ರಾಜಕೀಯ ಕಾಂಗ್ರೆಸ್(ಐ) ನೇತೃತ್ವದ ಕೋಮುವಾದಿ, ಜಾತಿವಾದಿ ಸಂಘಟನೆಗಳು ಮತ್ತು ಪಕ್ಷಗಳು ಹಾಗೂ ಕಮ್ಯುನಿಸ್ಟ್ ನೇತೃತ್ವದ ಜಾತ್ಯತೀತ ಶಕ್ತಿಗಳು ಇವೆರಡರ ನಡುವೆ ತೀವ್ರವಾಗಿ ವಿಭಜನೆಗೊಂಡಿದೆ. ಇವೆರಡರ ಬಲಾಬಲ ಸುಮಾರಾಗಿ ಸಮವಾಗಿದೆ.

1989 ರಲ್ಲಿ ಎಡ ಪ್ರಜಾಪ್ರಭುತ್ವ ರಂಗಕ್ಕೆ ಒಂದು ಗಂಭೀರ ಸೋಲಾಯಿತು ನಿಜ.. ಇದರೊಡನೆ ಎರಡು ಮಹತ್ವದ ಸಂಗತಿಗಳನ್ನು ಗಮನಿಸಬೇಕು. ಎಲ್.ಡಿ.ಎಫ್. 44% ಮತಗಳಿಸಿತು. ಯು.ಡಿ.ಎಫ್.ನ 49% ರಾಜ್ಯದ ಎಲ್ಲಾ ಕೋಮುವಾದಿ, ಜಾತಿವಾದಿ ಶಕ್ತಿಗಳ ಕ್ರೋಢೀಕೃತ ಮತ. 1987 ರ ಚುನಾವಣೆ ಎಲ್ಲಾ ಕೋಮುವಾದಿ, ಜಾತಿವಾದಿ ಸಂಘಟನೆಗಳ ಬೆಂಬಲವಿದ್ದರೂ ಕಾಂಗ್ರೆಸನ್ನು ಸೋಲಿಸಲು ಸಾಧ್ಯ ಎಂದು ತೋರಿಸಿಕೊಟ್ಟಿರೆ. ಎಲ್.ಡಿ.ಎಫ್. ಕಾಂಗ್ರೆಸ್(ಐ) ನೇತೃತ್ವದ ಯು.ಡಿ.ಎಫ್.ಗಿಂತ ಬಲವಾದ ಚುನಾವಣಾ ಶಕ್ತಿಯಾಗಿದ್ದರೂ ಯು.ಡಿ.ಎಫ್.ಗೆ ಈ ಎರಡು ರಂಗಗಳ ನಡುವಿನ ಗುಂಪುಗಳ ಬೆಂಬಲವಿದ್ದರೆ ಅದನ್ನು ಸೋಲಿಸುವಷ್ಟು ಬಲ ಎಲ್.ಡಿ.ಎಫ್.ಗಿಲ್ಲ ಎಂದು 1989 ರ ಚುನಾವಣೆ ತೋರಿಸಿಕೊಟ್ಟಿದೆ.

1957 ರ ನಂತರ ಒಂದೇ ಬಾರಿ ಕಾಂಗ್ರೆಸ್ ಪಕ್ಷ ರಾಜ್ಯದಲ್ಲಿ ಒಂಟಿಯಾಗಿ, ಕೂಟಗಳಿಲ್ಲದೆ ಚುನಾವಣೆಗೆ ಸ್ಪರ್ಧಿಸಿತು. 1967 ರಲ್ಲಿ. ಆಗ ಅದು ಪಡೆದ ಸೀಟುಗಳು 133 ರಲ್ಲಿ 9. ಮುಸ್ಲಿಂ ಲೀಗ್, ಕೇರಳ ಕಾಂಗ್ರೆಸ್ ಮತ್ತಿತರ ಕೋಮುವಾದಿ, ಜಾತಿವಾದಿ ಸಂಘಟನೆಗಳಿಂದ ತನ್ನನ್ನು ದೂರವಿರಿಸಿಕೊಂಡರೆ ಈಗಿನ ಸ್ಥಿತಿ ಇನ್ನೂ ಶೋಚನೀಯ. ಆದ್ದರಿಂದಲೇ 1989 ರ ಚುನಾವಣೆಯ ನಂತರವೂ ನಾಯರ್ ಸರ್ವಿಸ್ ಸೊಸೈಟಿಯ ಜ್ಯುಬಿಲಿ ಆಚರಣೆಯಲ್ಲಿ ಸ್ವತಃ ಬಂದು ಭಾಗವಹಿಸುವುದು ಅಗತ್ಯ ಎಂದು ರಾಜೀವ್ ಗಾಂಧಿ ಬಗೆದರು.

1959 ರ ಕುಪ್ರಸಿದ್ಧ "ವಿಮೋಚನಾ ಸಮರ"ದ ನಂತರದ ಮೂರು ದಶಕ ಕಮ್ಯುನಿಸ್ಟ್ ವಿರೋಧವೆಂಬುದು ಒಂದು ದಿವಾಳಿಯೆದ್ದ ರಾಜಕೀಯ ಸಿದ್ಧಾಂತವೆಂಬುದನ್ನು ತೋರಿಸಿಕೊಟ್ಟಿದೆ. ಕಮ್ಯುನಿಸ್ಟ್ ಪಕ್ಷವನ್ನು ಅಳಿಸಿಹಾಕುವ ಬದಲು ಅದು ಶಕ್ತಿಗೂಡಿಸುತ್ತಾ ಬಂದು ಮೂರು ರಾಜ್ಯಗಳಲ್ಲಿ ಪ್ರಮುಖ ರಾಜಕೀಯ ಪಕ್ಷವಾಗಿದೆ ಮಾತ್ರವಲ್ಲ. ರಾಷ್ಟ್ರೀಯ ರಾಜಕೀಯದಲ್ಲಿ ಪ್ರಮುಖ ಪಾತ್ರವಹಿಸುತ್ತಿದೆ. ರಾಜೀವ್ ಗಾಂಧಿ, ಕಾಂಗ್ರೆಸ್(ಐ)ನ್ನು ಅಧಿಕಾರದಿಂದ ಇಳಿಸುವಲ್ಲಿ ಮತ್ತು ಕೇಂದ್ರದಲ್ಲಿ ಬಿ.ಜೆ.ಪಿ.ಯನ್ನು ಅಧಿಕಾರದಿಂದ ದೂರವಿಡುವಲ್ಲಿ ಅದರ ಕೊಡುಗೆಯನ್ನು ಯು.ಡಿ.ಎಫ್.ನ ಘಟಕಗಳ ಅನುಯಾಯಿಗಳೂ ಮೆಚ್ಚಿಕೊಳ್ಳುತ್ತಿದ್ದಾರೆ. ಆದ್ದರಿಂದ ಯು.ಡಿ.ಎಫ್. ದುರ್ಬಲಗೊಳ್ಳುತ್ತಾ ಹೋಗುತ್ತದೆ, ಅದಕ್ಕನುಗುಣವಾಗಿ ಎಲ್.ಡಿ.ಎಫ್. ಬಲಗೊಳ್ಳುತ್ತಾ ಹೋಗುತ್ತದೆ ಎಂದು ನಿರೀಕ್ಷಿಸುವುದು ತಪ್ಪಾಗಲಾರದು.

ಇದೊಂದು ಸುಲಭದ ಕೆಲಸವಲ್ಲ ನಿಜ. ಕಾಂಗ್ರೆಸ್(ಐ), ಮುಸ್ಲಿಂ ಲೀಗ್, ಕ್ರಿಶ್ಚಿಯನ್ ಚರ್ಚ್‌ನ, ಜಾತಿವಾದಿ ಸಂಘಟನೆಗಳ ಮುಖಂಡರು ಕಮ್ಯುನಿಸ್ಟ್ ವಿರೋಧಿ ಶಕ್ತಿಗಳ ಕ್ರೋಢೀಕರಣಕ್ಕೆ ಸರ್ವಪ್ರಯತ್ನ ನಡೆಸುತ್ತಾರೆ. ಗುತ್ತೇದಾರಿ ಪತ್ರಿಕಾ ರಂಗದ ಶಕ್ತಿಶಾಲಿ ಮುಖವಾಣಿಗಳು, ಇಲೆಕ್ಟ್ರಾನಿಕ್ ಮಾಧ್ಯಮ ಎಲ್.ಡಿ.ಎಫ್.ನ ನೇತೃತ್ವ ವಹಿಸಿರುವ ಕಮ್ಯುನಿಸ್ಟ್ ಆಂದೋಲನದ ಹೆಸರಿಗೆ ಮಸಿ ಬಳಿಯಲು, ಸುಳ್ಳು ಮಾಹಿತಿ ಪಸರಿಸುವ ಯತ್ನ ನಡೆಸುತ್ತವೆ. ಕಮ್ಯುನಿಸ್ಟ್ ಪತ್ರಿಕಾ ರಂಗ ಮತ್ತು ಪ್ರಚಾರ ಮಾಧ್ಯಮ ಈ ಸುರಿಮಳೆಯನ್ನು ಎದುರಿಸಿ ಪಕ್ಷದ ಸಂದೇಶವನ್ನು ಜನತೆಯ ನಡುವೆ ಒಯ್ಯುವಲ್ಲಿ ಯಶಸ್ವಿಯಾಗುತ್ತವೆಯೇ ಎಂಬುದೇ ಈಗಿನ ಪ್ರಶ್ನೆ. ತೆಲ್ಲಿಚೇರಿ ಸಮ್ಮೇಳನದ 50 ನೇ ವಾರ್ಷಿಕೋತ್ಸವದ ಆಚರಣೆ ನೋಡಿದರೆ ಇದು ಸಾಧ್ಯ ಎಂದೆನಿಸುತ್ತದೆ.

ಭೋಪಾಲ್ ಅನಿಲ ದುರಂತ: ಕೇಂದ್ರದ ಘೋಷಣೆಗೆ ಸ್ವಾಗತ.

ರಾಷ್ಟ್ರೀಯ ರಂಗ ಸರ್ಕಾರ ಜನವರಿ 12 ರಂದು ಒಂದು ಹೇಳಿಕೆ ಹೊರಡಿಸಿ ಭೋಪಾಲ ಅನಿಲ ಸೋರಿಕೆ ದಾವೆಯಲ್ಲಿ ಯೂನಿಯನ್ ಕಾರ್ಬೈಡ್‌ನೊಂದಿಗೆ ಇತ್ಯರ್ಥವನ್ನು ಪ್ರಶ್ನಿಸುವ ಅರ್ಜಿಗಳನ್ನು ಬೆಂಬಲಿಸುವುದಾಗಿ ತಿಳಿಸಿದೆ. ವಿಷಾನಿಲ ತಟ್ಟಿದ 36 ಮುನಿಸಿಪಲ್ ವಾರ್ಡುಗಳ ಎಲ್ಲರಿಗೂ ಪರಿಹಾರ ಒದಗಿಸಲಾಗುವುದು ಎಂದೂ ಹೇಳಿಕೆ ತಿಳಿಸಿದೆ. ಇವು ಭೂಪಾಲದ ಅನಿಲ ಪೀಡಿತರ ಹಾಗೂ ಅವರನ್ನು ಬೆಂಬಲಿಸುವ ಎಲ್ಲಾ ಗುಂಪುಗಳ ಪ್ರಮುಖ ಬೇಡಿಕೆಗಳಾಗಿದ್ದವು.

ಈ ಹೇಳಿಕೆ ನೀಡಿದ ಕೇಂದ್ರ ಕಾನೂನು ಮಂತ್ರಿ ದಿನೇಶ್ ಗೋಸ್ವಾಮಿಯವರು 715 ಕೋಟಿ ರೂ. ಗಳ ಇತ್ಯರ್ಥ ಅಸಮರ್ಪಕ ಎಂದೂ ತಿಳಿಸಿದ್ದಾರೆ. ಮಧ್ಯಂತರ ಪರಿಹಾರದ ಮೊತ್ತ ಹಾಗೂ ವಿಧಾನವನ್ನು ಈ ಬಗ್ಗೆ ಸಕ್ರಿಯವಾಗಿರುವ ಗುಂಪುಗಳೊಡನೆ ಸಮಾಲೋಚಿಸಿ ನಿರ್ಧರಿಸಲಾಗುವುದು ಎಂದೂ ಮಂತ್ರಿಗಳು ಹೇಳಿದ್ದಾರೆ. ಈ ಘೋಷಣೆಗಳನ್ನು ಸಿ.ಪಿ.ಐ.(ಎಂ) ಹಾರ್ದಿಕವಾಗಿ ಸ್ವಾಗತಿಸಿದೆ.

ಫೆಬ್ರುವರಿ 14/15, 1989 ರಲ್ಲಿ ನಡೆದ ಕಾಂಗ್ರೆಸ್ ಕೇಂದ್ರ ಸರ್ಕಾರ ಮತ್ತು ಯೂನಿಯನ್ ಕಾರ್ಬೈಡ್ ನಡುವಿನ ಖಂಡನೀಯ ಇತ್ಯರ್ಥದ ಆಧಾರವನ್ನೇ ದುರಂತ ಪೀಡಿತರು ಹಾಗೂ ಅವರ ಬೆಂಬಲಿಗರು ಪ್ರಶ್ನಿಸಿದರು. ರಾಷ್ಟ್ರೀಯ ರಂಗ ಸರ್ಕಾರ ಅಧಿಕಾರಕ್ಕೆ ಬಂದ ಕೂಡಲೇ ಭೋಪಾಲ ಅನಿಲ ಪೀಡಿತ ಮಹಿಳಾ ಉದ್ಯೋಗ ಸಂಘಟನೆ ಮತ್ತು ದೆಹಲಿಯಲ್ಲಿರುವ ಭೋಪಾಲ ಗ್ಯಾಸ್ ಪೀಡಿತ ಸಂಘರ್ಷ ಸಹಯೋಗ ಸಮಿತಿ ಕೇಂದ್ರ ಪೆಟ್ರೋಲಿಯಂ, ರಾಸಾಯನಿಕ ಮಂತ್ರಿ ಗುರುಪಾದಸ್ವಾಮಿಯವರನ್ನು, ಹಣಕಾಸು ಮಂತ್ರಿ ದಂಡವತೆಯವರನ್ನು, ಕಾನೂನು ಮಂತ್ರಿ ದಿನೇಶ್ ಗೋಸ್ವಾಮಿಯವರನ್ನು ಹಾಗೂ ಜನವರಿ 10 ರಂದು ಪ್ರಧಾನ ಮಂತ್ರಿಗಳನ್ನು ಭೇಟಿಯಾಗಿದ್ದರು.

ಸರಕಾರಕ್ಕೆ ಅವರು ಸಲ್ಲಿಸಿದ ಮನವಿಯಲ್ಲಿ ತಕ್ಷಣ ನಾಲ್ಕು ಕ್ರಮಗಳನ್ನು ಕೈಗೊಳ್ಳಬೇಕೆಂದು ಒತ್ತಾಯಿಸಲಾಗಿತ್ತು. 1. ಮಧ್ಯಂತರ ಹಣಕಾಸು ಪರಿಹಾರ ನೀಡಲು ಒಂದು ಸುಗ್ರೀವಾಜ್ಞೆ 2. ಯೂನಿಯನ್ ಕಾರ್ಬೈಡ್ ಅಧಿಕಾರಿಗಳ ವಿರುದ್ಧ ತಕ್ಷಣ ಕ್ರಿಮಿನಲ್ ದಾವೆ ಹಾಕುವ ಘೋಷಣೆ 3. ಭೋಪಾಲ ಇತ್ಯರ್ಥವನ್ನು ತಕ್ಷಣ ರದ್ದುಗೊಳಿಸಲು ಕಾನೂನು ಕ್ರಮ 4. ಭಾರತದಲ್ಲಿ ಯೂನಿಯನ್ ಕಾರ್ಬೈಡ್‌ನ ಎಲ್ಲಾ ಆಸ್ತಿಗಳ ಮುಟ್ಟುಗೋಲು ಹಾಗೂ ಮುಂದೆ ಭಾರತದಲ್ಲಿ ಅದರ ವ್ಯಾಪಾರಿ ಚಟುವಟಿಕೆಗಳ ಮೇಲೆ ನಿರ್ಬಂಧ.

ಭೋಪಾಲ ಇತ್ಯರ್ಥವನ್ನು ಹೇಗೆ ರದ್ದುಗೊಳಿಸಬೇಕೆಂಬ ಬಗ್ಗೆ ಸೂಚನೆಗಳನ್ನು ಮನವಿ ವಿಶದಪಡಿಸಿದೆ. ಹಿಂದಿನ ಕಾಂಗ್ರೆಸ್ ಸರ್ಕಾರ ಮೊದಲು 3900 ಕೋಟಿ ರೂ. ಗಳ ದಾವೆ ಹೂಡಿತ್ತು. ಇದರ ಆಧಾರವೇನು ಹಾಗೂ ನಂತರ ಇದನ್ನು ಏಕೆ ಬಿಟ್ಟು ಕೊಡಲಾಯಿತು ಎಂಬ ಮಾಹಿತಿಯನ್ನು ಒದಗಿಸಬೇಕೆಂದು ಮನವಿ ಕೇಳಿಕೊಳ್ಳುತ್ತಾ ಸ್ವತಂತ್ರ ಲೆಕ್ಕಾಚಾರದ ಪ್ರಕಾರ ನಷ್ಟದ ಮೌಲ್ಯ 5700 ಕೋಟಿ ರೂ. ಗಳಿಂದ ಅದರ ಇಮ್ಮಡಿಯಷ್ಟು ಎಂಬ ಸಂಗತಿಯತ್ತವೂ ಮನವಿ ಸರಕಾರದ ಗಮನ ಸೆಳೆದಿದೆ.

ದೆಹಲಿ: ರಾಜ್ಯದ ಸ್ಥಾನ ಮಾನ ಬೇಕು

ದಿಲ್ಲಿ ನಗರದ ಭವಿಷ್ಯದ ರಚನೆಯ ಬಗ್ಗೆ ಚರ್ಚಿಸಲು ಕೇಂದ್ರ ಗೃಹ ಮಂತ್ರಿ ಮುಫ್ತಿ ಮಹಮ್ಮದ್ ಸೈಯದ್‌ರವರ ಆಹ್ವಾನದ ಮೇರೆಗೆ ಸಿ.ಪಿ.ಐ(ಎಂ) ಹಾಗೂ ಸಿ.ಪಿ.ಐ. ದೆಹಲಿ ರಾಜ್ಯ ಮುಖಂಡರು ಜನವರಿ 10 ರಂದು ಅವರನ್ನು ಭೇಟಿಯಾಗಿದ್ದರು. ವಿದೇಶಾಂಗ ಮಂತ್ರಿ ಐ.ಕೆ. ಗುಜ್ರಾಲ್ ಕೂಡಾ ಈ ಸಭೆಯಲ್ಲಿ ಹಾಜರಿದ್ದರು.

ದೆಹಲಿಗೆ ರಾಜ್ಯದ ಸ್ಥಾನಮಾನ ನೀಡಬೇಕೆಂಬ ತಮ್ಮ ಬೇಡಿಕೆಯನ್ನು ಎರಡೂ ಪಕ್ಷಗಳು ಪುನರುಚ್ಚರಿಸಿದವು. ಕೇಂದ್ರ ಸರಕಾರದ ಅಗತ್ಯಗಳನ್ನು ಗಮನಿಸಿ ಈಗಿನ ಮೆಟ್ರೋಪಾಲಿಟನ್ ಕೌನ್ಸಿಲ್‌ನ ಕೆಲವು ಪ್ರದೇಶಗಳನ್ನು ಕೇಂದ್ರದ ಹತೋಟಿಯಲ್ಲಿ ಮುಂದುವರಿಸಬಹುದೆಂದೂ ಅವು ಸೂಚನೆ ನೀಡಿದವು. ಈಗಿನ ಮಹಾನಗರ ಪಾಲಿಕೆಯನ್ನು ವಿಕೇಂದ್ರೀಕರಿಸಿ ಜಿಲ್ಲಾ ಮುನಿಸಿಪಾಲಿಟಿಗಳನ್ನು ರಚಿಸುವ ಸೂಚನೆಯ ಬಗ್ಗೆ ಮಾತನಾಡುತ್ತಾ ಇವು ಒಂದು ಪೂರ್ಣ ಪ್ರಮಾಣದ ರಾಜ್ಯ ವಿಧಾನ ಸಭೆಯ ವ್ಯಾಪ್ತಿಯಲ್ಲಿ ಕೆಲಸ ಮಾಡುವುದಾದರೆ ನಮ್ಮ ಅಭ್ಯಂತರವಿಲ್ಲವೆಂದು ತಿಳಿಸಿದರು.

ದೆಹಲಿಯಲ್ಲಿ ಹೊಸ ಚುನಾವಣೆಗಳ ಬಗ್ಗೆ ಚರ್ಚಿಸುತ್ತಾ ಚುನಾವಣಾ ಕ್ಷೇತ್ರಗಳ ಪುನರ್ವಿಂಗಡಣೆ ಮತ್ತು ಚುನಾವಣಾ ಕ್ಷೇತ್ರಗಳ ಸಂಖ್ಯೆಗೂ ಜನಸಂಖ್ಯೆಗೂ ಇರುವ ಅಸಮಾನತೆ ಸರಿಪಡಿಸಿದ ಮೇಲೆನೇ ಇದನ್ನು ನಡೆಸಬೇಕೆಂದು ಎರಡೂ ಪಕ್ಷಗಳು ಮತ್ತೆ ಒತ್ತಿ ಹೇಳಿದವು. ಕಾಂಗ್ರೆಸ್(ಐ) ತದ್ವಿರುದ್ಧವಾಗಿ ಇವನ್ನೇನೂ ಮಾಡದೆ ತಕ್ಷಣ ಚುನಾವಣೆ ನಡೆಸಬೇಕೆಂದು ಒತ್ತಾಯಿಸುತ್ತಿರುವುದನ್ನು ಗೃಹಮಂತ್ರಿಗಳೂ ಖಂಡಿಸಿದರು.

ಫೆಬ್ರುವರಿ ವಿಧಾನ ಸಭಾ ಚುನಾವಣೆಗಳು

ರಾಜ್ಯ	ಸ್ಥಾನಗಳು
ಬಿಹಾರ	324
ಮಧ್ಯಪ್ರದೇಶ	320
ಮಹಾರಾಷ್ಟ್ರ	288
ರಾಜಸ್ತಾನ	200
ಗುಜರಾತ	182
ಒರಿಸ್ಸಾ	147
ಹಿಮಾಚಲ ಪ್ರದೇಶ	68
ಮಣಿಪುರ (ಫೆಬ್ರುವರಿ 12)	60
ಪಾಂಡಿಚೇರಿ	30
ಅರುಣಾಚಲ ಪ್ರದೇಶ	30

ಸಾರಿಗೆ ಹಾಗೂ ಪೋಲಿಸ್ ಇಲಾಖೆಯ ನಿರ್ಲಕ್ಷ್ಯಕ್ಕೆ ಖಂಡನೆ

ಮಂಗಳೂರು ನಗರದಲ್ಲಿ ವಾಹನ ಸಂಚಾರ ವ್ಯವಸ್ಥೆಯು ದಿನೇ ದಿನೇ ಹದಗೆಡುತ್ತಿದ್ದು, ನಗರದಲ್ಲಿ ವಾಹನ ಚಾಲಕರಿಗೆ ಹಾಗೂ ಸಾರ್ವಜನಿಕರಿಗೆ ಉಸಿರು ಕಟ್ಟುವ ವಾತಾವರಣ ನಿರ್ಮಾಣವಾಗಿದೆ. ಸಾರಿಗೆ ಇಲಾಖೆ ಹಾಗೂ ಪೋಲೀಸ್ ಇಲಾಖೆಗಳ ನಡುವೆ ಸಮನ್ವಯ ಅಭಾವ ಹಾಗೂ ಸರಕಾರಕ್ಕೆ ನಗರದ ಬೆಳವಣಿಗೆಯ ಬಗ್ಗೆ ಒಂದು ದೂರದೃಷ್ಟಿಯ ಕೊರತೆಯೇ ಇದಕ್ಕೆ ಕಾರಣವೆಂದು ಮೋಟರ್ ಟ್ರಾನ್ಸ್‌ಪೋರ್ಟ್ ಎಂಡ್ ಇಂಜಿನಿಯರಿಂಗ್ ವರ್ಕರ್ಸ್ ಯೂನಿಯನ್ (ಸಿಐಟಿಯು) ಅಭಿಪ್ರಾಯ ಪಟ್ಟಿದೆ. ಸಾರ್ವಜನಿಕ ವಾಹನಗಳಿಗೆ ಪರ್ಮಿಟು ನೀಡುವಾಗ ಪೋಲೀಸ್ ಇಲಾಖೆಯೊಂದಿಗೆ, ಸಾರಿಗೆ ನೌಕರರ ಸಂಘಗಳೊಂದಿಗೆ ಹಾಗೂ ಸಾರ್ವಜನಿಕರೊಂದಿಗೆ ಸಮಾಲೋಚಿಸದೆ ಪ್ರಾದೇಶಿಕ ಸಾರಿಗೆ ಪ್ರಾಧಿಕಾರವು ಮುಂದುವರಿಯುತ್ತಿರುವುದರಿಂದ ಪರಿಸ್ಥಿತಿ ಇನ್ನಷ್ಟು ಹದಗೆಡುವ ಸಾಧ್ಯತೆಯಿದೆ. ನಗರದಲ್ಲಿ ಆಟೋರಿಕ್ಷಾಗಳಿಗೆ ಮುಕ್ತ ಪರವಾನಿಗಿ ನೀಡುವಾಗಲೇ ಉತ್ತಮ ಸಂಚಾರ ವ್ಯವಸ್ಥೆಯನ್ನು ಬಯಸಿದ ಎಲ್ಲಾ ಸಂಘ ಸಂಸ್ಥೆಗಳು ಆಕ್ಷೇಪಿಸಿದ್ದರು. ಸಾರಿಗೆ ಪ್ರಾಧಿಕಾರವು ಈ ರೀತಿಯ ಆಕ್ಷೇಪಗಳನ್ನು ಕಿವಿಗೆ ಹಾಕಿಕೊಳ್ಳದೆ ಈಗ ಬಸ್ ಪರ್ಮಿಟ್ ನೀಡುವಲ್ಲಿಯೂ ಅದೇ ಧೋರಣೆ ತಳೆದಿದೆ. ಈಗಾಗಲೇ ಒಂದು ರೂಟಿನಲ್ಲಿ ಅರ್ಧ ನಿಮಿಷಕ್ಕೊಂದು ಬಸ್ ಸಂಚಾರವಿದ್ದು ಇದರಿಂದ ಈಗಾಗಲೇ ಅನಾರೋಗ್ಯಕರ ಸ್ಪರ್ಧೆಯಿಂದ ಬಸ್ ಸಿಬ್ಬಂದಿಗಳಿಗೆ ಹೊಡೆದಾಟವಾಗುತ್ತಿದೆ. ಅಲ್ಲದೆ ಹಂಪನಕಟ್ಟೆ ಪ್ರದೇಶದಲ್ಲಿ ವಾಹನಗಳ ಒತ್ತಡದಿಂದ ಗಂಟೆಗಟ್ಲೆ ರಸ್ತೆ ಬ್ಲಾಕ್ ಆಗುತ್ತಿದ್ದು, ಚಾಲಕರು ಹಾಗೂ ಪ್ರಯಾಣಿಕರು ಮಾನಸಿಕ ಕಿರುಕುಳ ಅನುಭವಿಸುತ್ತಿದ್ದಾರೆ. ಕಳೆದ ಆರ್.ಟಿ.ಎ. ಸಭೆಯಲ್ಲಿ ಚಾಲಕರ ಹಾಗೂ ಸಾರ್ವಜನಿಕರ ವಿರೋಧದ ಹೊರತಾಗಿಯೂ ಅನೇಕ ಹೊಸ ಬಸ್ ಪರ್ಮಿಟ್‌ಗಳನ್ನು ನೀಡುತಿದ್ದು, ಇದರ ವಿರುದ್ಧ ಸಾರ್ವಜನಿಕರು ಹಾಗೂ ಬಸ್ ನೌಕರರು ಹೋರಾಟಕ್ಕೆ ಇಳಿಯುವುದು ಅನಿವಾರ್ಯವಾಗಿದೆ ಎಂದು ಯೂನಿಯನ್ ನೀಡಿರುವ ಹೇಳಿಕೆಯೊಂದರಲ್ಲಿ ತಿಳಿಸಿದೆ.

ದಿನದಿಂದ ದಿನಕ್ಕೆ ಬೆಳೆಯುವ ನಗರದಲ್ಲಿ ವಾಹನಗಳ ಪಾರ್ಕಿಂಗ್‌ಗೆ ಸರಿಯಾದ ವ್ಯವಸ್ಥೆ ಮಾಡದೆ, ಸಂಚಾರ ನಿಯಂತ್ರಣಕ್ಕೆ ಹೆಚ್ಚುವರಿ ಟ್ರಾಫಿಕ್ ಪೋಲೀಸರನ್ನು ನೇಮಿಸದೆ ಕೆಲವು ಬಸ್ ಮಾಲಿಕರನ್ನು ತೃಪ್ತಿಪಡಿಸಲು ಪ್ರಯತ್ನಿಸುತ್ತಿರುವ ನೀತಿಯನ್ನು ಯೂನಿಯನ್ ಖಂಡಿಸಿದೆ.

ಬೀಡಿ ಕಾರ್ಮಿಕರಿಗೆ ಫಾಲ್‌ಬ್ಯಾಕ್ ವೇಜ್ ಸಿ.ಐ.ಟಿ.ಯು. ಒತ್ತಾಯ

ಸಿ.ಐ.ಟಿ.ಯು. ಕರ್ನಾಟಕ ರಾಜ್ಯ ಸಮಿತಿಯ ಪದಾಧಿಕಾರಿಗಳ ಸಭೆಯು ಬೆಂಗಳೂರಿನಲ್ಲಿ ಜನವರಿ 25 ರಂದು ನಡೆದು ರಾಜ್ಯದ ಪರಿಸ್ಥಿತಿಯನ್ನು ಅವಲೋಕಿಸಿ ಕೆಲವು ತೀರ್ಮಾನಗಳನ್ನು ಕೈಗೊಂಡಿತು.

ಬೀಡಿ ಕೈಗಾರಿಕೆಯಲ್ಲಿ ಮಾಲೀಕರು ಬೀಡಿ ಕಾರ್ಮಿಕರಿಗೆ ವಾರದಲ್ಲಿ ಎರಡು ದಿವಸ ಮಾತ್ರ ಕೆಲಸ ಕೊಡುತ್ತಿದ್ದಾರೆ. ಇದರಿಂದ ಬೀಡಿ ಕಾರ್ಮಿಕರು ಬಹಳ ತೊಂದರೆಯನ್ನು ಅನುಭವಿಸುತ್ತಿ ದ್ದಾರೆ. ಸರ್ಕಾರದ ಕಾರ್ಮಿಕ ಇಲಾಖೆಯ ಕಛೇರಿಗಳ ಮುಂದೆ ಫೆಬ್ರವರಿ 8 ರಂದು ಧರಣಿ, ಪ್ರದರ್ಶನಗಳನ್ನು ನಡೆಸಿ ಉಳಿದ ದಿವಸಗಳಿಗೆ 'ಫಾಲ್ ಬ್ಯಾಕ್ ವೇಜ್' ಕೊಡಿಸಬೇಕೆಂದು ಕರ್ನಾಟಕ ಸರ್ಕಾರವನ್ನು ಒತ್ತಾಯಿಸ ಬೇಕೆಂದು ಸಭೆಯು ಕರೆ ಕೊಟ್ಟಿದೆ.

ಬೆಂಕಿಯ ಆಕಸ್ಮಿಕಕ್ಕೆ ಗುರಿಯಾದ ರಾಜಾ ಮಿಲ್ಲನ್ನು ಮುಚ್ಚಬೇಕೆಂದಿರುವ ಸನ್ನಾಹವನ್ನು ಸಭೆಯು ಖಂಡಿಸಿ, ಬೆಂಕಿ ಬೀಳದೆ ಇರುವ ನೇಯ್ಗೆ ವಿಭಾಗವನ್ನು ಕೂಡಲೇ ನಡೆಸಬೇಕೆಂದು ಒತ್ತಾಯಿಸಿ ಈ ವಿಚಾರದಲ್ಲಿ ಸಿ.ಐ.ಟಿ.ಯು. ಬೆಂಗಳೂರು ಜಿಲ್ಲಾ ಸಮಿತಿ ಮಾಡಿರುವ ತೀರ್ಮಾನಗಳನ್ನು ಸಭೆಯು ಅನುಮೋದಿಸಿತು.

ಫೆಬ್ರವರಿ 13 ರಂದು ಬೆಂಗಳೂರಲ್ಲಿ ಸಾರ್ವಜನಿಕ ಕ್ಷೇತ್ರದ ಕಾರ್ಮಿಕರ ರಾಜ್ಯ ಮಟ್ಟದ ಸಮಾವೇಶವನ್ನು ನಡೆಸಲು ಸಭೆಯು ತೀರ್ಮಾನಿಸಿತು. ಡಾ॥ ಎಂ.ಕೆ. ಪಂಧೆ ಈ ಸಮಾವೇಶದ ಮುಖ್ಯ ಅತಿಥಿಯಾಗಿರುತ್ತಾರೆ. ಸಂಜೆ 4 ಗಂಟೆಗೆ ನಗರದ ಟೌನ್‌ಹಾಲಿನಲ್ಲಿ ಏರ್ಪಡಿಸಲಾಗಿದೆ.

ಮಂಗಳೂರಿನಲ್ಲಿ ಕಳೆದ ಅಕ್ಟೋಬರಿನಲ್ಲಿ ಜರುಗಿದ ಸಿ.ಐ.ಟಿ.ಯು. ರಾಜ್ಯಮಂಡಳಿಯ ಸಭೆಯು ತೀರ್ಮಾನಿಸಿದ ಪ್ರಕಾರ ದುಡಿಯುವ ಮಹಿಳೆಯರ ರಾಜ್ಯ ಸಮಾವೇಶವನ್ನು ಮಾರ್ಚ್ 11 ರಂದು ಬೆಂಗಳೂರಲ್ಲಿ ನಡೆಸುವುದೆಂದಾಯಿತು.

ವರಮಾನ ತೆರಿಗೆಯನ್ನು ಕುರಿತು ನೌಕರರ ರಾಜ್ಯ ಸಮ್ಮೇಳನವನ್ನು ನಡೆಸಲು ತೀರ್ಮಾನಿಸಲಾಯಿತು.

ಕಾಂಗ್ರೆಸ್(ಐ) ರಾಜ್ಯದಲ್ಲಿ ಅಧಿಕಾರ ವಹಿಸಿಕೊಂಡ ಕೇವಲ ಆರುವಾರಗಳಲ್ಲಿ, ಬಳ್ಳಾರಿ, ಷಹಬಾದ್, ಗುಲ್ಬರ್ಗಗಳಲ್ಲಿ, ಪೋಲೀಸು ಲಾಕಪ್ಪುಗಳಲ್ಲಿ ಆದ ಸಾವುಗಳು, ಬೆಂಗಳೂರಲ್ಲಿ ಇಂಜನಿಯರಿಂಗ್ ವಿದ್ಯಾರ್ಥಿಗಳ ಮೇಲೆ ನಡೆದ ಚಿತ್ರಪ್ರಹಾರ, ಗುಲ್ಬರ್ಗದಲ್ಲಿ ನಡೆದ ಗೋಲೀಬಾರ್, ಚಿಂತಾಮಣಿಯಲ್ಲಿ ನಡೆದ ಪೋಲಿಸು ದಬ್ಬಾಳಿಕೆ, ಭದ್ರಾವತಿ-ತರೀಕೆರೆಗಳಲ್ಲಿ ಬಗರ್ ಹುಕುಂ ಸಾಗುವಳಿ ಮಾಡಲು ಹೊರಟ ಬಡ ರೈತರ ಮೇಲೆ ನಡೆದ ಪೋಲಿಸು ದಬ್ಬಾಳಿಕೆಗಳನ್ನು ಖಂಡಿಸಿದ ಸಭೆಯು ರಾಜ್ಯ ಸರ್ಕಾರವು ರೈತರ ಸಾಲ ಮರುಪಾವತಿಯ ಕುರಿತು ತಳೆದ ಧೋರಣೆಯನ್ನು ಸಿ.ಐ.ಟಿ.ಯು. ಟೀಕಿಸಿತು.

ಮಹಾನಗರ ಪಾಲಿಕೆ, ನಗರ ಪಾಲಿಕೆ, ಪುರಸಭೆ, ಮಂಡಲ ಪಂಚಾಯತಿಗಳಿಗೆ ಫೆಬ್ರವರಿ ಕೊನೆಯಲ್ಲಿ ನಡೆಯುವ ಚುನಾವಣೆಯಲ್ಲಿ ಎಡ, ಜಾತ್ಯತೀತ ಪ್ರಜಾಪ್ರಭುತ್ವವಾದಿ ಉಮೇದುವಾರರನ್ನು ಗೆಲ್ಲಿಸಬೇಕೆಂದು ಸಿ.ಐ.ಟಿ.ಯು ರಾಜ್ಯದ ಕಾರ್ಮಿಕ ವರ್ಗಕ್ಕೆ ಮನವಿ ಮಾಡಿಕೊಳ್ಳುತ್ತದೆ.

ಸಿ.ಐ.ಟಿ.ಯು. ಕರ್ನಾಟಕ ರಾಜ್ಯ ಸಮಿತಿಯ ಸಭೆಯನ್ನು ಮುಂದಿನ ಮಾರ್ಚ್ 17,18ರಂದು, ಕೆ.ಜಿ.ಎಫ್.ನಲ್ಲಿ ನಡೆಸಲು ಸಭೆಯು ತೀರ್ಮಾನಿಸಿತು.

ಸಾಗರದಲ್ಲಿ ಸಾರಿಗೆ ನೌಕರರ ಸಭೆ

ನೌಕರರಿಗೆ ಕಾನೂನು ಸವಲತ್ತಿನ ಜ್ಯಾರಿಗೆ ಒತ್ತಾಯ

ಶಿವಮೊಗ್ಗ ಜಿಲ್ಲಾ ಇ.ಎಸ್.ಐ. ಇಲಾಖೆಯಲ್ಲಿ ಆಗುತ್ತಿರುವ ಅನ್ಯಾಯಗಳನ್ನು ಸರಿಪಡಿಸಬೇಕು ಹಾಗೂ ಸಾಗರದ ಗಜಾನನ ಟ್ರಾನ್ಸ್‌ಪೋರ್ಟ್ ಕಂಪೆನಿಯ ಕೆಲಸಗಾರರಿಗೂ ಇ.ಎಸ್‌ಐ. ಸವಲತ್ತನ್ನು ವಿಸ್ತರಿಸಬೇಕೆಂದು ಸಿ.ಐ.ಟಿ.ಯು. ರಾಜ್ಯ ಸಮಿತಿಯ ಉಪಾಧ್ಯಕ್ಷರಾದ ಶ್ರೀ ಕೆ. ಮೂಸಬ್ಬ ಸರಕಾರವನ್ನು ಒತ್ತಾಯಿಸಿದ್ದಾರೆ. ಅವರು ತಾ. 23.1.90 ರಂದು ಸಾಗರದಲ್ಲಿ ನಡೆದ ಶಿವಮೊಗ್ಗ ಜಿಲ್ಲಾ ಸಾರಿಗೆ ನೌಕರರ ಸಭೆಯನ್ನುದ್ದೇಶಿಸಿ ಮಾತನಾಡುತ್ತಿದ್ದರು. ಸಭೆಯ ಅಧ್ಯಕ್ಷತೆಯನ್ನು ಶಿವಮೊಗ್ಗ ಜಿಲ್ಲೆಯ ರೈತ-ಕಾರ್ಮಿಕ ಮುಖಂಡ ಶ್ರೀ ಬಿ.ಎಸ್. ಶಿವಶಂಕರ್ ವಹಿಸಿದ್ದರು. ಸಭೆಯನ್ನುದ್ದೇಶಿಸಿ ಮಾತನಾಡಿದ ಮೋಟರ್ ಟ್ರಾನ್ಸ್‌ಪೋರ್ಟ್ ಎಂಡ್ ಇಂಜಿನಿಯರಿಂಗ್ ವರ್ಕರ್ಸ್ ಯೂನಿಯನಿನ ಪ್ರಧಾನ ಕಾರ್ಯದರ್ಶಿ ಶ್ರೀ ಪಿ. ಉಮೇಶ್ ಭಂಡಾರಿ ಸಾಗರದಲ್ಲಿ ನೂರಾರು ಬಸ್ಸು ಮಾಲಕರ ಕೈಕೆಳಗೆ ಸಾವಿರಾರು ಬಸ್ ನೌಕರರು ಕೆಲಸ ಮಾಡುತ್ತಿದ್ದು ಅವರಿಗೆ ಯಾವುದೇ ಕಾರ್ಮಿಕ ಕಾನೂನನ್ನು ಜ್ಯಾರಿಗೊಳಿಸಲು ಕಾರ್ಮಿಕ ಇಲಾಖೆಯು ವಿಫಲವಾಗಿರುವುದನ್ನು ಖಂಡಿಸಿದರು. ಗಜಾನನ ಟ್ರಾನ್ಸ್‌ಪೋರ್ಟ್ ಕಂಪೆನಿಯ ಸಾಗರ ಗ್ಯಾರೇಜಿನಲ್ಲಿ ಈಗ ಬಲಿಷ್ಠವಾಗಿರುವ ಸಿ.ಐ.ಟಿ.ಯು. ಸಂಘಟನೆಯನ್ನು ಮುರಿಯಲು ಕೆಲವು ಸ್ಥಾಪಿತ ಹಿತಾಸಕ್ತಿಗಳು ಪ್ರಯತ್ನಿಸುವುದನ್ನು ಖಂಡಿಸಿದ ಸಭೆಯು ಇದರ ವಿರುದ್ಧ ಪ್ರತಿಭಟನಾ ಪ್ರದರ್ಶನವನ್ನು ನಡೆಸಲು ನಿರ್ಧರಿಸಲಾಯಿತು.

ಭದ್ರಾವತಿಯ ಕಾರೇಹಳ್ಳಿಯಲ್ಲಿ ಮುಗ್ಧ ರೈತ ಕೃಷಿ ಕೂಲಿಗಾರರ ಮೇಲೆ ಪೋಲೀಸರು ನಡೆಸಿದ ಪೈಶಾಚಿಕ ದೌರ್ಜನ್ಯವನ್ನು ಸಭೆಯು ಖಂಡಿಸಿ ಈ ನಿಟ್ಟಿನಲ್ಲಿ ನಡೆಯುವ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ಸಾರಿಗೆ ನೌಕರರಿಗೆ ಕರೆ ನೀಡಲಾಯಿತು.

ಶ್ರೀ ಎಸ್.ಎ.ಗಜೇಂದ್ರ ಸ್ವಾಗತಿಸಿದರು.

ಉಡುಪಿ ತಾಲೂಕು ಬೀಡಿ ಕಾರ್ಮಿಕರ ಸಮಾವೇಶ ವಾರದಲ್ಲಿ ಆರು ದಿವಸ ಕೆಲಸಕ್ಕೆ ಒತ್ತಾಯ

ಸಿಐಟಿಯು ನೇತೃತ್ವದ, ಉಡುಪಿ ವಿಭಾಗದ ಬೀಡಿ ಕಾರ್ಮಿಕರ ಸಂಘಗಳ ಆಶ್ರಯದಲ್ಲಿ ತಾರೀಕು: 25.1.1990 ರಂದು ಸತ್ಯಮೂರ್ತಿ ಸ್ಮಾರಕ ಸಭಾ ಭವನದಲ್ಲಿ ಶ್ರೀಯುತ ಸಾಧು ಪೂಜಾರಿಯವರ ಅಧ್ಯಕ್ಷತೆಯಲ್ಲಿ ಸೇರಿತು. ಆರಂಭದಲ್ಲಿ ಶ್ರೀಯುತ ದೋಗು ಸುವರ್ಣನವರು ಬೀಡಿ ಕಾರ್ಮಿಕರನ್ನು ಸ್ವಾಗತಿಸಿ, ಸೌತ್ ಕೆನರಾ ಬೀಡಿ ವರ್ಕರ್ಸ್ ಫೆಡರೇಷನ್ನಿನ ತೀರ್ಮಾನ ಹಾಗೂ ಇತ್ತೀಚೆಗೆ ಬೀಡಿ ಕಾರ್ಮಿಕರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ವಿವರಿಸಿದರು.

ಬೀಡಿ ಕಾರ್ಮಿಕರಿಗೆ ವಾರದಲ್ಲಿ 6 ದಿವಸ ಕೆಲಸ ಕೊಡಬೇಕು. ಇಲ್ಲವೇ ಕೆಲಸವಿಲ್ಲದ ದಿವಸಗಳಿಗೆ ಪರಿಹಾರ ಕೊಡಬೇಕು ಎಂದು ಜಿಲ್ಲಾಧಿಕಾರಿಯವರನ್ನು ಒತ್ತಾಯಿಸುವ ಚಳವಳಿಯ ಅಂಗವಾಗಿ, ಫೆಬ್ರವರಿ 2 ರಂದು ಮಂಗಳೂರಿನಲ್ಲಿ, ನಡೆಯುವ ಪ್ರತಿಭಟನಾ ಮೆರವಣಿಗೆ ಮತ್ತು ಪ್ರದರ್ಶನವನ್ನು ಯಶಸ್ವಿಗೊಳಿಸಲು ನಿರ್ಣಯವನ್ನು ಕೈಗೊಳ್ಳಲಾಯಿತು. ಬೀಡಿ ಕಾರ್ಮಿಕರ ಬೇಡಿಕೆಗಳಿಗೆ ಸಂಬಂಧಪಟ್ಟು ಮುಂದೆ ಬರುವ ತೀವ್ರ ಹೋರಾಟಗಳಲ್ಲಿ ಎಲ್ಲಾ ಕಾರ್ಮಿಕರು ಸಕ್ರಿಯವಾಗಿ ಪಾಲುಗೊಳ್ಳಲು ಕರೆ ನೀಡಲಾಯಿತು.

ಸಿಐಟಿಯು ಮುಖಂಡರಾದ ಶ್ರೀಯುತ ಡೇವಿಡ್ ಕರ್ಕಡರವರು ಸಭೆಯಲ್ಲಿ ಉಪಸ್ಥಿತರಿದ್ದರು.

ಸಿಐಟಿಯು ದ.ಕ. ಜಿಲ್ಲಾ ಸಮಿತಿಯ ಉಪಾಧ್ಯಾಕ್ಷರಾದ ಶ್ರೀಯುತ ಕೆ.ಶಂಕರ್‌ಅವರು ಸಭೆಯನ್ನುದ್ದೇಶಿಸಿ ಮಾತನಾಡುತ್ತಾ, ಸರಕಾರದ ಅಸಡ್ಡೆಯಿಂದ ಮತ್ತು ಬಂಡವಾಳಗಾರ ನೀತಿಯಿಂದ ಬೀಡಿ ಎಲೆಯ ಅಭಾವವು ಕಂಡು ಬಂದಿದೆ. ಸರಕಾರದ ಈ ನೀತಿಯಿಂದ ಜನ ಸಾಮಾನ್ಯರಿಗೆ ಮತ್ತು ದುಡಿಯುವ ಕಾರ್ಮಿಕರಿಗೆ ಕಷ್ಟವಾಗಿದೆಯೇ ಹೊರತು ಮಾಲಿಕರಿಗೆ ಹಾಗೂ ಮಧ್ಯವರ್ತಿಗಳಿಗೆ ಇದರಿಂದ ಲಾಭವೇ ಆಗಿದೆ. ಒಗ್ಗಟ್ಟಿನಿಂದ ಮಾಲಿಕರ ಮತ್ತು ಸರಕಾರದ ಕಾರ್ಮಿಕ ವಿರೋಧಿ ನೀತಿಯ ವಿರುದ್ಧ, ತೀವ್ರ ಹೋರಾಟಕ್ಕೆ ಸಿದ್ಧತೆ ನಡೆಸಲು ಕರೆ ನೀಡಿರುವರು.

ವಿಜಾಪುರ ಶಿಖಾರಖಾನೆಯಲ್ಲಿ ಡಿ.ವೈ.ಎಫ್.ಐ. ಘಟಕ ಸ್ಥಾಪನೆ

ವಿಜಾಪೂರ ನಗರದ ಶಿಖಾರಖಾನೆಯಲ್ಲಿಯ ಯುವಕರು, ಜನವರಿ 27 ರಂದು ಸಾಯಂಕಾಲ 4 ಗಂಟೆಗೆ ಗೋಳಗುಮ್ಮಟ ಗಾರ್ಡನ್‌ದಲ್ಲಿ ಸಭೆ ಸೇರಿ ಶಿಖಾರಖಾನೆಯ ಡಿ.ವೈ.ಎಫ್.ಐ. ಘಟಕವನ್ನು ಸ್ಥಾಪಿಸಿದರು.

ಕಾರ್ಮಿಕ ಮುಖಂಡರಾದ ಶ್ರೀ ಡಿ.ಎಂ. ಖಲಾಸಿಯವರು ಡಿ.ವೈ.ಎಫ್.ಐ. ಘಟಕವನ್ನು ಉದ್ಘಾಟಿಸಿ ಮಾತನಾಡುತ್ತ ಸಾಮಾಜಿಕ ಅನಿಷ್ಟ ಪದ್ಧತಿಗಳಾದ ವರದಕ್ಷಿಣೆ, ಸತಿ ಪದ್ಧತಿ, ನಿರುದ್ಯೋಗ ಜಾತಿ ಮತಿಯ ಶಕ್ತಿಗಳಿಂದ ದೇಶ ಇಂದು ಗಂಡಾಂತರವನ್ನು ಎದುರಿಸುತ್ತಲಿದೆ. ಆದ್ದರಿಂದ ಯುವಕರು ಒಕ್ಕಟ್ಟಾಗಿ ದೇಶದ ಐಕ್ಯತೆ ಮತ್ತು ಸಮಗ್ರತೆಗಾಗಿ ಹಾಗೂ ಯುವಕರಿಗೆ ಮುಖ್ಯವಾಗಿ ಕಾಡುವ ಮುಖ್ಯ ಸಮಸ್ಯೆಯಾದ ನಿರುದ್ಯೋಗ ವಿರುದ್ಧ ಹೋರಾಟ ಮಾಡಲು ಕರೆ ಕೊಟ್ಟರು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಡಿ.ವೈಎಫ್.ಐ. ಜಿಲ್ಲಾ ಅಧ್ಯಕ್ಷರಾದ ಮನ್ನುಸಾಬ ಕಲಾದಗಿ, ಸಹಕಾರ್ಯದರ್ಶಿ, ದ್ಯಾಮಗೊಂಡ, ಮೋದಿ, ಹಾಗೂ ಹಿರಿಯರಾದ ಆಯ್.ಪಿ. ಲಾಲಾಕೋಟೆ ಇವರು ಮಾತನಾಡುತ್ತಾ ಬರುವ ನಗರ ಸಭಾ ಚುನಾವಣೆಯಲ್ಲಿ ಭ್ರಷ್ಟಾಚಾರಿಗಳನ್ನು ಮತ್ತು ಜಾತೀಯ ಮತಿಯ ಶಕ್ತಿಗಳನ್ನು ಧಿಕ್ಕರಿಸಿ ಯುವಕರ ಸಮಸ್ಯೆಗಳ ವಿರುದ್ಧ ಹೋರಾಟ ಮಾಡುವಂತಹ ಅನುಭವವುಳ್ಳಂತಹ ಒಳ್ಳೆಯ ಅಭ್ಯರ್ಥಿಗಳನ್ನು ನಗರ ಸಭೆಗೆ ಚುನಾಯಿಸಿ ನಗರದ ಏಳಿಗೆಗಾಗಿ ದುಡಿಯಬೇಕೆಂದು ಕರೆ ಕೊಟ್ಟರು.

ಇನ್ನೊಬ್ಬ ಮುಖ್ಯ ಅತಿಥಿಯಾಗಿ ಆಗಮಿಸಿದ ಡಿ.ವೈ.ಎಫ್‌ಐ. ದ ಸದಾನಂದ ಮೋದಿ, (ಕಾರ್ಯದರ್ಶಿ) ಡಿ.ವೈ.ಎಫ್.ಐ. ದ ಧ್ಯೇಯ ಧೋರಣೆಗಳನ್ನು ತಿಳಿಸುತ್ತಾ ಡಿ.ವೈ.ಎಫ್.ಐ ಮಾಡಿದ ಹೋರಾಟಗಳ ಬಗ್ಗೆ ವಿವರಿಸಿದರು.

ಈ ಸಂದರ್ಭದಲ್ಲಿ ನೂತನ ಘಟಕದ ಪದಾಧಿಕಾರಿಗಳು ಮತ್ತು ಕಮೀಟಿಯನ್ನು ಆರಿಸಲಾಯಿತು. ಅಧ್ಯಕ್ಷರಾಗಿ ಸುನೀಲ ಬೀಳ್, ಉಪಾಧ್ಯಾಕ್ಷರಾಗಿ ಶಂಕರ ಭಾರತಿ, ಹಾಗೂ ಸಿದ್ದು ತೊನಶ್ಯಾಳ ಕಾರ್ಯದರ್ಶಿಯಾಗಿ ಶ್ರೀ ಶೈಲ ದೊಡಮನಿ ಸಹ ಕಾರ್ಯದರ್ಶಿಯಾಗಿ, ಬಸವರಾಜ ಬೈಜಬಾಳ ಖಜಾಂಚಿಯಾಗಿ, ನಾಗಪ್ಪಾ ಶಹಾಪೂರ ಇವರನ್ನು ಇವರಲ್ಲದೆ, ಐದು ಜನರನ್ನು ಕಮೀಟಿಯ ಸದಸ್ಯರನ್ನಾಗಿ ಸರ್ವಾನು ಮತದಿಂದ ಆರಿಸಲಾಯಿತು.

ಶಿಖಾರಖಾನ್ ಓಣಿಯ ಕೆಲವು ಮುಖ್ಯ ಸಮಸ್ಯೆಗಳಾದ ಕುಡಿಯುವ ನೀರು ಮತ್ತು ಶೌಚಾಲಯ ವ್ಯವಸ್ಥೆ ಹಾಗೂ ವಿದ್ಯುತ್ ದೀಪಗಳ ಸರಿಪಡಿಸುವ ಬಗ್ಗೆ ಹಾಗೂ ರಸ್ತೆ ರಿಪೇರಿ, ಸಲುವಾಗಿ ಅರ್ಜಿಯೊಂದನ್ನು ತಯಾರಿಸಿ ನಗರ ಸಭೆ ಆಯುಕ್ತರಾದ ಉಪ ವಿಭಾಗಾಧಿಕಾರಿಗಳಿಗೆ ಕೊಡಲು ಈ ಸಂದರ್ಭದಲ್ಲಿ ನಿರ್ಣಯಿಸಲಾಯಿತು.

ನೂತನ ಘಟಕ ಸಭೆಯ ಅಧ್ಯಕ್ಷತೆಯನ್ನು ಸಿದ್ದು ತೊನಶ್ಯಾಳ ಇವರು ವಹಿಸಿದ್ದರು. ಮೊದಲು ಸುನೀಲ ಬೀಳ್ ಸ್ವಾಗತಿಸಿದರು. ಕೊನೆಗೆ ಬಸವರಾಜ ಬೈಜಬಾಳ ವಂದನಾರ್ಪಣೆ ಮಾಡಿದರು. ಎಂದು ಘಟಕದ ಅಧ್ಯಕ್ಷರಾದ ಸುನೀಲ ಬೀಳ್ ಇವರು ಪತ್ರಿಕಾ ಪ್ರಕಟಣೆಯ ಮುಖಾಂತರ ತಿಳಿಸಿರುತ್ತಾರೆ.

ಕೋಣಿ ಮೋತಿ ಡಿಸೋಜ ನಿಧನ

ಕುಂದಾಪುರ ತಾಲೂಕಿನ ಕೋಣಿ ಗ್ರಾಮದ ಶ್ರೀ ಕೆ. ಮೋತಿ ಡಿಸೋಜ ಅವರು ಅಲ್ಪಕಾಲದ ಅಸ್ವಾಸ್ಥ್ಯದಿಂದಾಗಿ ಜನವರಿ 30 ರಂದು ಸ್ವಗೃಹದಲ್ಲಿ ನಿಧನ ಹೊಂದಿದರು.

ಶ್ರೀಯುತರು ಸ್ಥಳೀಯ ರೈತ ಸಂಘದ ಅಧ್ಯಕ್ಷರಾಗಿದ್ದು, ಜನ ಸಾಮಾನ್ಯರ ಪ್ರೀತಿ ವಿಶ್ವಾಸಕ್ಕೆ ಪಾತ್ರರಾಗಿದ್ದರು.

ಮೃತರು ಪತ್ನಿ ಇಬ್ಬರು ಪುತ್ರರು ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು ಬಾಂಧವರನ್ನು ಅಗಲಿದ್ದಾರೆ [illegible]

ಫೀಸ್ ಮಾಫಿಯ ಮಿತಿ ಹೆಚ್ಚಿಸಲು ಒತ್ತಾಯ

ಜನವರಿ 28 ರಂದು ನಡೆದ ಭಾರತದ ವಿದ್ಯಾರ್ಥಿ ಫೆಡರೇಶನ್ (ಎಸ್.ಎಫ್.ಐ.) ಕುಂದಾಪುರ ತಾಲೂಕು ಸಮಿತಿಯ ವಿಸ್ತೃತ ಸಭೆ ವಿದ್ಯಾರ್ಥಿಗಳಿಗಾಗಿ ಇರುವ ಫೀಸ್ ಮಾಫಿಯ ಮಿತಿಯನ್ನು 3600 ರಿಂದ ರೂ 10000 ಕ್ಕೆ ಏರಿಸಬೇಕೆಂದು ಹೈಸ್ಕೂಲು ಹಾಗೂ ಜ್ಯೂನಿಯರ್ ಕಾಲೇಜುಗಳಲ್ಲಿ ಖಾಲಿ ಇರುವ ಶಿಕ್ಷಕರ ಸ್ಥಾನವನ್ನು ಭರ್ತಿಮಾಡಬೇಕೆಂದು ಸರಕಾರವನ್ನು ಒತ್ತಾಯಿಸಿದೆ. ಮುಂಬರುವ ಪುರಸಭಾ ಚುನಾವಣೆಯಲ್ಲಿ, [illegible] ಸಿ.ಪಿ.ಐ.(ಎಂ)ಗೆ ಹಾಗೂ ಬೇರೆಡೆಗಳಲ್ಲಿ ಜನತಾದಳ ಪಕ್ಷಕ್ಕೆ ಬೆಂಬಲ ಸೂಚಿಸಿ, ಹಾಗೂ ಚಿಲ್ಲರೆಯಾದ್ಯಂತ ಬೀಡಿ ಕಾರ್ಮಿಕರು ಕೆಲಸಕ್ಕಾಗಿ ನಡೆಸುತ್ತಿರುವ ಹೋರಾಟಕ್ಕೆ ಬೆಂಬಲ ಸೂಚಿಸಿ ಇನ್ನೊಂದು ನಿರ್ಣಯವನ್ನು ಸಭೆ ಕೈಗೊಂಡಿತು.

ಹೊಸ ತಾಲೂಕು ಸಮಿತಿಯನ್ನು ಚುನಾಯಿಸಲಾಯಿತು. ಅಧ್ಯಕ್ಷರಾಗಿ ಶ್ರೀಧರ ಉಚಾರಿ ಹಾಗೂ ಕಾರ್ಯದರ್ಶಿಯಾಗಿ ಪ್ರಕಾಶ ಕೆ. ಅವರನ್ನು ಆರಿಸಲಾಯಿತು. ಪಿ.ಕೆ.[illegible]ರನ್ನು ಉಪಾಧ್ಯಕ್ಷರನ್ನಾಗಿ [illegible] ಉಪಕಾರ್ಯದರ್ಶಿಯನ್ನಾಗಿ ಚುನಾಯಿಸಲಾಯಿತು. ಜಿಲ್ಲಾ ಸಮಿತಿ ಅಧ್ಯಕ್ಷ ಚಂದ್ರಶೇಖರ ವಿ ಅವರು ಸಭೆಯಲ್ಲಿದ್ದು ನಿರ್ದೇಶನ ನೀಡಿದರು.

ಪ್ರಕಾಶಕ್ಕೆ ಅವರ ಅಧ್ಯಕ್ಷತೆಯಲ್ಲಿ ನಡೆದ ಈ ವಿಸ್ತೃತ ಸಭೆಗೆ ತಾಲೂಕಿನ ಮುಖ್ಯ ಕಾರ್ಯಕರ್ತರನ್ನು ಆಹ್ವಾನಿಸಲಾಗಿತ್ತು. ಡಿ.ವೈ.ಎಫ್.ಐ. ಪರವಾಗಿ ಆರ್. ಜಯಕುಮಾರ್ ಹಾಗೂ ಮಹಿಳಾ ಸಂಘಟನೆ ಪರವಾಗಿ ಉತ್ಪಲಾಕ್ಷಿ ಶುಭ ಕೋರಿದರು.

ಐಕ್ಯರಂಗ

ಚಂದಾದರ

ವಾರ್ಷಿಕ	ರೂ 75.00
ಅರ್ಧವಾರ್ಷಿಕ	ರೂ 38.00
ಮೂರುತಿಂಗಳಿಗೆ	ರೂ 19.00

ಅಧಿಕಾರ ವಿಕೇಂದ್ರೀಕರಣದ ಪ್ರಶ್ನೆ ಮರೆತು ಹೋಯಿತೇ?

ನಗರ - ಪುರಸಭೆ ಚುನಾವಣೆಗಳು

ರಾಜ್ಯಗಳಿಗೆ ಸಂವಿಧಾನದತ್ತವಾದ ಅಧಿಕಾರವನ್ನು ವಿಕೇಂದ್ರೀಕರಿಸಲು ರಾಜ್ಯ ಮಟ್ಟದಲ್ಲಿರುವ ಅಧಿಕಾರಿಶಾಹಿಯಾಗಲಿ, ರಾಜಕಾರಣಿಯಾಗಲಿ ಸಿದ್ಧವಾಗಿಲ್ಲದಿರುವುದಲ್ಲಿ ಆಶ್ಚರ್ಯವಿಲ್ಲ.

—ಕಾಂ. ಇ.ಎಂ.ಎಸ್

ಜಿ.ಎನ್. ನಾಗರಾಜ್

ಸಿಂಧನೂರು, ರಾಯಚೂರು ಜಿಲ್ಲೆಯ ಒಂದು ತಾಲ್ಲೂಕು ಕೇಂದ್ರದ ಪಟ್ಟಣ. ಸುತ್ತಮುತ್ತೆಲ್ಲಾ ತುಂಗಭದ್ರಾ ನೀರಾವರಿಯ ಪ್ರದೇಶ. ಎಲ್ಲಿ ನೋಡಿದಲ್ಲೆಲ್ಲಾ ಕಣ್ಣಿಗೆ ತಂಪೆರೆಯುವ ಹಚ್ಚ ಹಸಿರು ಹೊಲ–ಗದ್ದೆಗಳು. ನೀರಾವರಿಯ ಹಣದ ಬೆಳೆಗಳ ವಹಿವಾಟಿಗಾಗಿ ಶೀಘ್ರವಾಗಿ ಬೆಳೆಯುತ್ತಿರುವ ಕೇಂದ್ರ. ಊರ ಹೊರವಲಯದಲ್ಲಿರುವ ಸೇತುವೆಯ ಮೇಲಿಂದ ಹಾದು ಊರೊಳಕ್ಕೆ ಬರುವಾಗ ಈ ಪಟ್ಟಣದ ನಾಗರೀಕರು ಈ ಸೇತುವೆಯ ಕೆಳಗಿನ ಹೊಳೆಯನ್ನು ತೋರಿಸುತ್ತಾ ಇದೇ ನಮ್ಮ ಜೀವದಾತೆ, ಊರಿನ ಕುಡಿಯುವ ನೀರಿನ ಏಕಮಾತ್ರ ಆಸರೆ ಇದೇ ಎಂದು ಬೊಟ್ಟು ಮಾಡಿ ತೋರಿಸುತ್ತಾರೆ. ಪರ ಊರಿನಿಂದ ಹೋದವರಿಗೆ ಆ ಹೊಳೆಯನ್ನು, ಅಲ್ಲಲ್ಲಿ ನೀರು ನಿಂತು ನಾರುತ್ತಿರುವ ಹೊಂಡಗಳನ್ನು ನೋಡುತ್ತಾ ನೋಡುತ್ತಾ ಹೊಟ್ಟೆಯೊಳಗಿನದೆಲ್ಲಾ ಹೊರ ಬರುವ ಹಾಗಾಗುತ್ತದೆ. ಆ ಊರ ನಾಗರಿಕರ ಸಂಕಷ್ಟದ ಬಗ್ಗೆ ಸರಿಯಾದ ಚಿತ್ರ ಮೂಡುತ್ತದೆ.

ಸುತ್ತಮುತ್ತೆಲ್ಲಾ ಯಥೇಚ್ಛವಾಗಿ ಹರಿಯುವ ನೀರಿನ ಮಧ್ಯೆಯೂ ಕುಡಿಯುವ ನೀರಿಗೆ ಯಾತನೆ. ಅಶುದ್ಧ ನೀರನ್ನು ಯಾವ ಅಳುಕೂ ಇಲ್ಲದೇ ಊರಿಗೆ ಸರಬರಾಜು ಮಾಡುತ್ತದೆ ಇಲ್ಲಿಯ ಪುರಸಭೆ. ಕುಡಿಯುವ ನೀರಿಗಾಗಿ ಇಲ್ಲಿ ನಡೆದ ಚಳುವಳಿಗಳು ಅಸಂಖ್ಯ. ಅನೇಕಬಾರಿ ಬಂದ್ ಆಚರಿಸಲಾಗಿದೆ. ಊರಿನ 'ಸಮುದಾಯ' ಘಟಕ ಗಲ್ಲಿಗಲ್ಲಿಗಳಲ್ಲಿ ತಿರುಗಿ ನಾಟಕವಾಡಿ ತಾವೂ ಹೋರಾಟದ ಭಾಗವಾಗಿ ಬಿಟ್ಟಿದ್ದಾರೆ. ಮೇಲಧಿಕಾರಿಗಳಿಗೆ ಸಲ್ಲಿಸಿದ ಮನವಿಗಳಿಗೆ ಲೆಕ್ಕವಿಲ್ಲ. ಹೋರಾಟ ತುದಿಘಟ್ಟ ಮುಟ್ಟಿದಾಗ ಜಿಲ್ಲಾಧಿಕಾರಿಗಳು ಮೊದಲುಗೊಂಡು ಎಲ್ಲರೂ ನೀಡಿದ ಆಶ್ವಾಸನೆಗಳಿಗೂ ಲೆಕ್ಕವಿಲ್ಲ. ಆದರೆ ಅಲ್ಲಿಯ ಜನಕ್ಕೆ ಇನ್ನೂ ನೀರಿನ ಶಾಪದಿಂದ ವಿಮೋಚನೆಯಾಗಿಲ್ಲ.

ಕರ್ನಾಟಕದಲ್ಲಿ ಇಂತಹ ಪಟ್ಟಣಗಳು ನಗರಗಳು ಅಸಂಖ್ಯ. ನೀರು ಮಾತ್ರವೇ ಅಲ್ಲ. ರಸ್ತೆ, ಒಳಚರಂಡಿ, ವಸತಿ ಸಾರಿಗೆ, ಶಾಲೆ ಆಸ್ಪತ್ರೆಗಳು ಮೊದಲಾದ ಎಲ್ಲಾ ನಾಗರಿಕ ವ್ಯವಸ್ಥೆಗಳ ಪಾಡೂ ಇದೇ.

ಬೆಳೆಯುತ್ತಿರುವ ದೇಶವೊಂದರಲ್ಲಿ ಅತಿ ಶೀಘ್ರವಾಗಿ ಬೆಳೆಯುತ್ತಿರುವ ಪಟ್ಟಣ ನಗರಗಳ ಪ್ರಜೆಗಳ ಬದುಕಿನ ಸಂಕಷ್ಟಗಳು ಅಪರಿಮಿತ. ಬೆಂಗಳೂರಿನಂತಹ ನಗರವನ್ನೇ ತೆಗೆದುಕೊಳ್ಳಿ, ಇಲ್ಲಿ ವಾಸಕ್ಕಾಗಿ ನಾಗರಿಕರು ಪಡುವ ಪರಿಪಾಟಲುಗಳೆಷ್ಟು, ತೆರುವ ಅಡ್ವಾನ್ಸ್‌ಗಳೆಷ್ಟು, ಬಾಡಿಗೆಯೆಷ್ಟು? ಜೀವವನ್ನೇ ಹಿಂಡುವಷ್ಟು ಬಾಡಿಗೆ ತೆತ್ತ ಮೇಲೂ ನೀರಿಗಾಗಿ, ದಿನನಿತ್ಯದ ಓಡಾಟಕ್ಕಾಗಿ ಪಡುವ ಕಷ್ಟಗಳೆಷ್ಟು. ಭಾರತದಲ್ಲಿಯೇ ಅತೀ ಶೀಘ್ರವಾಗಿ ಬೆಳೆಯುತ್ತಿರುವ ಬೆಂಗಳೂರುನಗರದ ಮೇಲೆ ಹೌಸಿಂಗ್ ಸೊಸೈಟಿಗಳ ಪುಢಾರಿಗಳು, ಬಾಂಬೆ ಗುಜರಾತಿನ ಮಾರವಾಡಿಗಳು ಹದ್ದಿನಂತೆರಗಿ ಚಿನ್ನದಂತಹ ಜಾಗವನ್ನು ಕೊಳ್ಳೆ ಹೊಡೆದು ರಾತ್ರೋರಾತ್ರಿ ಸಾಹುಕಾರರಾಗುತ್ತಿರುವಾಗ 15–20 ಕಿ.ಮೀ. ದೂರದ ರವೆನ್ಯೂ ಸೈಟುಗಳಲ್ಲಿ ಮನೆಕಟ್ಟಿ ದಿನವೂ ಬೆಳಗಾಗುವ ಮೊದಲೇ ಮನೆಬಿಟ್ಟು ಮಧ್ಯರಾತ್ರಿಯ ವೇಳೆಗೆ ಮನೆಸೇರುವ ಲಕ್ಷಾಂತರ ಮಂದಿಯ ಪಾಡೇನು? ನಗರದ ಒಳಭಾಗದಲ್ಲಿ ಎಲ್ಲೆಡೆಯೂ ಎದ್ದು ನಿಂತಿರುವ ಕೊಳಚೆಪ್ರದೇಶಗಳ ಗುಡಿಸಲು ವಾಸಿಗಳ ಬದುಕಿನ ಪರಿಯೇನು? ಇದಕ್ಕೆ ಉತ್ತರ ನೀಡುವವರೇ ಇಲ್ಲವಾಗಿದೆ. ಸಿಂಧನೂರಿನ ನೀರಿನ ಬಗ್ಗೆ ಅಲ್ಲಿಯ ಪುರಸಭೆಯ ಬಳಿ ಯಾವ ಅಧಿಕಾರವೂ ಇಲ್ಲ. ಬೆಂಗಳೂರಿನಲ್ಲಿ ಜನ ಆರಿಸಿದ ನಗರಸಭೆಗೆ ಇಲ್ಲಿಯ ವಸತಿ ಹಂಚಿಕೆ, ಸಾರಿಗೆ ವ್ಯವಸ್ಥೆ, ಆಸ್ಪತ್ರೆ, ಶಾಲೆಗಳ ಮೇಲೆ ಕಿಂಚಿತ್ತು ನಿಯಂತ್ರಣವೂ ಇಲ್ಲ. ಎಲ್ಲಕ್ಕೂ ನಿಧಾನಸೌಧವಾಗಿರುವ ವಿಧಾನ ಸೌಧವೇ ಉತ್ತರ ಹೇಳಬೇಕು.

ಇಂತಹ ಪರಿಸ್ಥಿತಿ ಏಕೆ? ಪರಿಹಾರವೇನು? ಎಂಬುದು ಎಲ್ಲರ ಮನದಲ್ಲಿ ದಿನದಿನವೂ ಮೂಡುವ ಪ್ರಶ್ನೆ. ಈ ಪೌರಸಂಸ್ಥೆಗಳ ಚುನಾವಣೆಗಳು ನಡೆಯುವಾಗಂತೂ ಎಲ್ಲರ ಮುಂದೆ ಏಳಬೇಕಾದ ಪ್ರಶ್ನೆ. ಅನೇಕ ಪುರಸಭೆಗಳಲ್ಲಿ ಬೀದಿಯ ಕಸಗುಡಿಸುವವರನ್ನೂ ಇಟ್ಟುಕೊಳ್ಳುವ ಆರ್ಥಿಕ ಸಾಮರ್ಥ್ಯವಿಲ್ಲ. ಇನ್ನು ರಸ್ತೆ ರಿಪೇರಿ, ನೀರಿನ ವ್ಯವಸ್ಥೆಯಂತಹ ದುಬಾರಿ ನಾಗರಿಕ ವ್ಯವಸ್ಥೆಗಳ ಮಾತೆಲ್ಲಿ ಬಂತು. ಪುರಸಭೆ, ನಗರಸಭೆಗಳಿಗೆ ಒದಗಿರುವ ದುರ್ಗತಿಯ ಬಗ್ಗೆ ಬಂಡವಾಳಶಾಹಿ ರಾಜಕೀಯ ಪಕ್ಷಗಳು ಪ್ರಶ್ನೆ ಎತ್ತುತ್ತಿವೆಯೇ? ಇಂದು ರಾಜ್ಯದಲ್ಲಿ ಆಳುತ್ತಿರುವ ಕಾಂಗ್ರೆಸ್ (ಐ) ಪಕ್ಷ, ಲೋಕಸಭಾ ಚುನಾವಣೆಗಳಿಗೆ ಮೊದಲು ಅಧಿಕಾರ ವಿಕೇಂದ್ರೀಕರಣ, ನಗರ ಪಾಲಿಕಾ ಮಸೂದೆ ಎಂದು ದೇಶದ ತುಂಬೆಲ್ಲಾ ಅಬ್ಬರ ಮಾಡಿದ್ದು ಈಗ ಎಲ್ಲಿ ಹೋಯಿತು? ಈ ಚುನಾವಣೆಗಳಲ್ಲಿ ರಾಜ್ಯದಲ್ಲಿ ತಮ್ಮ ಹಿಡಿತದಲ್ಲಿರುವ ಅಧಿಕಾರವನ್ನು ನಗರಸಭೆ, ಪುರಸಭೆಗಳಿಗೆ ಹಂಚುವ ಘೋಷಣೆ ಏಕೆ ಮಾಡಿಲ್ಲ? ಪ್ರಮುಖ ಕಾಂಗ್ರೆಸ್ ವಿರೋಧಿ ಪಕ್ಷವಾದ ಜನತಾದಳವೂ ಇನ್ನೂ ನಗರಸಭೆ, ಪುರಸಭೆಗಳ ಅಧಿಕಾರದ ಮಿತಿಯ ಪ್ರಶ್ನೆಯನ್ನು ಎತ್ತಿಯೇ ಇಲ್ಲ. ಸಿ.ಪಿ.ಐ. ಹಾಗೂ ಸಿ.ಪಿ.ಐ.(ಎಂ) ಪಕ್ಷಗಳ ಹೊರತಾಗಿ ಬೇರಾವ ಪಕ್ಷವೂ ಇದನ್ನೊಂದು ಪ್ರಶ್ನೆಯನ್ನಾಗಿ ಪರಿಗಣಿಸಿಲ್ಲ ಏಕೆ? ಇದರಲ್ಲಿಯೇ ಬಂಡವಾಳ ಪಕ್ಷಗಳ ವರ್ಗ ಗುಣ ಅಡಗಿದೆ. ಒಂದು ನೈಜವಾದ ನಗರಸಭೆ, ಪುರಸಭೆ ಹೇಗಿರಬೇಕು, ಅದರ ಪೂರ್ಣ ಪ್ರಮಾಣದ ಅಧಿಕಾರದ ಚಿತ್ರ ಎಂತಿರಬೇಕು ಎಂಬುದನ್ನು ಕಣ್ಣ ಮುಂದೆ ರೂಪಿಸಿಕೊಂಡರೆ ಮಾತ್ರ ನಮ್ಮ ಪುರಸಭೆ, ನಗರಸಭೆಗಳ ದೌರ್ಬಲ್ಯ ಸ್ಪಷ್ಟವಾಗುವುದು.


ಮಹಾನಗರಪಾಲಿಕೆಯೊಂದು (ಅಥವಾ ಪುರಸಭೆಯೊಂದು) ಆ ಹೆಸರಿಗೆ ನಿಜವಾಗಿ ಅರ್ಹವಾಗಬೇಕಾದರೆ ತನ್ನನ್ನು ಆಯ್ಕೆ ಮಾಡುವ ಜನತೆಯ ಎಲ್ಲಾ ಆಗುಹೋಗುಗಳಿಗೆ ಹೊಣೆಯಾಗಿರಬೇಕು. ಇಡೀ ರಾಜ್ಯದ ಒಟ್ಟು ಅಭಿವೃದ್ಧಿಯ ಪ್ರಶ್ನೆಗಳಲ್ಲಿ ಮಾತ್ರ ರಾಜ್ಯ ಸರ್ಕಾರದ ಅಧಿಕಾರವಾಗಿರಬೇಕು. ಎಂದರೆ ಊಹಿಸಿಕೊಳ್ಳಿ, ಬೆಂಗಳೂರು ಮಹಾನಗರಪಾಲಿಕೆ ನಗರದ ಜನರ ಎಲ್ಲಾ ಸಮಸ್ಯೆಗಳಿಗೆ ಹೊಣೆಯಾಗುವುದೆಂದರೆ ಎಂಥಹ ಶಕ್ತ, ಸದೃಢ ಸಂಸ್ಥೆ–ಯಾಗಬೇಕಾಗುತ್ತದೆ ಎಂಬುದನ್ನು. ನಗರದ ರಸ್ತೆ, ಸಂಪರ್ಕ ವ್ಯವಸ್ಥೆ ಆಸ್ತಿ ವ್ಯವಹಾರದ ದಾಖಲಾತಿ, ಉಪವನಗಳು ಮೊದಲಾದವುಅಲ್ಲದೇ ನಗರದ ಸಾರಿಗೆ, ನಗರ ನೀರು ಸರಬರಾಜು ಮತ್ತು ಒಳಚರಂಡಿ, ನಿವೇಶನ ಹಂಚಿಕೆ ಮತ್ತು ವಸತಿ ನಿರ್ಮಾಣ, ನಗರಯೋಜನೆ, ವಿದ್ಯುತ್ ವ್ಯವಸ್ಥೆ ಇಂತಹ ನಾಗರಿಕ ವ್ಯವಸ್ಥೆ ಮಾತ್ರವಲ್ಲದೇ ಭೂಮಿಯ ಎಲ್ಲಾ ವ್ಯವಹಾರಗಳೂ, ಕಾನೂನು, ಸುವ್ಯವಸ್ಥೆ, ಕೆಲವು ಕೈಗಾರಿಕೆಗಳ ಸ್ಥಾಪನೆ ಅವುಗಳ ಲೈಸನ್ಸಿಂಗ್, ಶಿಕ್ಷಣ, ಆರೋಗ್ಯ ಇವೆಲ್ಲವೂ ಬೆಂಗಳೂರು ಮಹಾನಗರ–ಪಾಲಿಕೆಯ ನಿಯಂತ್ರಣ–ಕ್ಕೊಳಪಟ್ಟಿರಬೇಕೆಂಬುದೇ ಅಧಿಕಾರ ವಿಕೇಂದ್ರೀಕರಣದ ನಿಜವಾದ ಅರ್ಥ. ಇಂದು ಇವೆಲ್ಲ ಅಧಿಕಾರ ಮತ್ತು ಕರ್ತವ್ಯಗಳ ಪಾಡು ಏನಾಗಿದೆ? ನಗರಸಾರಿಗೆ ಬಿ.ಟಿ.ಎಸ್. ಎಂಬ ಉಪಸಂಸ್ಥೆಯ ಹೆಸರಿನಲ್ಲಿ ಕರ್ನಾಟಕ ರಾಜ್ಯ ರಸ್ತೆಸಾರಿಗೆ ಸಂಸ್ಥೆಯಡಿ ನೀರು ಸರಬರಾಜು, ಒಳಚರಂಡಿ ವ್ಯವಸ್ಥೆಗೆ ಒಂದು ಪ್ರತ್ಯೇಕ ಸಂಸ್ಥೆ–ಬೆಂಗಳೂರು ಜಲ ಮತ್ತು ಒಳಚರಂಡಿ ಮಂಡಳಿ, ನಿವೇಶನ ಹಂಚಿಕೆಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ನಗರ ಯೋಜನೆಗೆ ಮೆಟ್ರೋಪಾಲಿಟನ್ ಡೆವಲಪ್‌ಮೆಂಟ್ ಕೌನ್ಸಿಲ್, ಶಾಲೆ, ಕಾಲೇಜುಗಳು ಕರ್ನಾಟಕ ಸರ್ಕಾರದ ಶಿಕ್ಷಣ ಇಲಾಖೆ, ಕಾಲೇಜು ಶಿಕ್ಷಣ ಇಲಾಖೆ, ಆಸ್ಪತ್ರೆಗಳು, ಪಶು ಚಿಕಿತ್ಸಾಲಯಗಳು ಅವುಗಳಿಗೆ ಸಂಭಂಧಿಸಿದ ಇಲಾಖೆಗಳ ಹಿಡಿತದಲ್ಲಿ (ಕೆಲವು ಪ್ರೌಢ ಶಾಲೆಗಳು ಹಾಗೂ ಲೋಕಲ್ ಫಂಡ್ ಆಸ್ಪತ್ರೆಗಳನ್ನು ಹೊರತುಪಡಿಸಿ) ಪ್ರಮುಖ ಉದ್ಯಾನವನಗಳು ತೋಟಗಾರಿಕೆ ಇಲಾಖೆಯಡಿ ಹಾಲು ಸರಬರಾಜು ಒಂದು ಪ್ರತ್ಯೇಕ ಕಾರ್ಪೋರೇಶನ್ನಿನಡಿ ಬೆಂಗಳೂರು ಡೈರಿ. ಹೀಗೆ ಬೆಂಗಳೂರು ನಗರದಲ್ಲಿ ಏನು ನಡೆದಿದೆ ಅದರಲ್ಲಿ ಕೇವಲ ಒಂದು ದಶಮಾಂಶಕ್ಕೂ ಕಡಿಮೆ ಭಾಗ ಮಾತ್ರ ಬೆಂಗಳೂರು ಮಹಾನಗರಪಾಲಿಕೆಯ ನಿಯಂತ್ರಣದಲ್ಲಿ.

ಇನ್ನು ಭೂವ್ಯವಹಾರ, ಮತ್ತು ಕಾನೂನು ಸುವ್ಯವಸ್ಥೆ ನಿಯಂತ್ರಣ, ಅಪರಾಧ ವಿಭಾಗಗಳ ಬಗ್ಗೆ ಹೇಳಬೇಕಾಗಿಯೇ ಇಲ್ಲ. ಅವು ನೇರವಾಗಿ ರಾಜ್ಯ ಸರಕಾರದ ಮೂಗಿನಂಚಿಯಲ್ಲಿ. ಬೆಂಗಳೂರು ನಗರ ಪೋಲೀಸ್ ಕಮಿಷನರ್‌ರಿಗೂ ಮೇಯರ್‌ರಿಗೂ ಅಥವಾ ನಗರಪಾಲಿಕೆಗೂ ಯಾವ ಸಂಪರ್ಕವೂ ಇಲ್ಲ. ಬೆಂಗಳೂರಿನಲ್ಲಿ ಎಲ್ಲಿ ದರೋಡೆ ಅತ್ಯಾಚಾರಗಳಾದರೂ ಏನು ಮಾಡಲೂ ಸಾಧ್ಯವೂ ಇಲ್ಲ ಹೆಚ್ಚೆಂದರೆ ನಿರ್ಣಯ ಪಾಸು ಮಾಡಿ ಸಂಭಂಧಪಟ್ಟ ಅಧಿಕಾರಿಗಳ ಗಮನಕ್ಕೆ ಸಲ್ಲಿಸಬಹುದು. ಅವರು ಅದನ್ನು ಕಣ್ಣೆತ್ತಿ ನೋಡುವ ಕೃಪೆ ಮಾಡಲೂಬಹುದು.

ಈ ಅಸಂಖ್ಯ ನಿಗಮಗಳು ಮಂಡಳಿಗಳು ತಾವು ಸ್ವಪರಿಪೂರ್ಣರೆಂದೂ ಸ್ವಯಂ ಪ್ರಭುದ್ಧರೆಂದೂ ಕಲ್ಪಿಸಿಕೊಂಡಿರುವ ಅಧಿಕಾರಿಗಳ ಕೈಯಲ್ಲಿ ಅವರ ಇಚ್ಛೆಗನುಸಾರವಾಗಿ. ಈ ಅಧಿಕಾರಿಗಳ ಕೈಯಲ್ಲಿ ನಾಗರಿಕರು ಹರಿಹಂಚಾಗಿ ಹೋಗಬೇಕು. ತಮ್ಮ ಅತೃಪ್ತಿಯನ್ನು ವ್ಯಕ್ತಪಡಿಸುವ ಚುನಾಯಿತ ಪ್ರತಿನಿಧಿಗಳ ಮೂಲಕ ನಿಯಂತ್ರಿಸುವ ಸಾಧ್ಯತೆ ಇಲ್ಲದೆ ಈ ನಾಗರಿಕ ಅಸಹಾಯಕ. ಇದನ್ನೇ ಕಾಂ. ಇ.ಎಂ.ಎಸ್. ರವರು– ಕೇಂದ್ರ ಮತ್ತು ರಾಜ್ಯಮಟ್ಟದಲ್ಲಿ ಪ್ರಜಾಸತ್ತೆ ಕೆಳಗಿನ ಮಟ್ಟದಲ್ಲಿ ಅಧಿಕಾರಿ ಸತ್ತೆ– ಇದೇ ನಮ್ಮ ಸಂವಿಧಾನದಲ್ಲಿ ಹೇಳಲ್ಪಟ್ಟಿರುವ ಭಾರತದ ರಾಜ್ಯ ರಚನೆಯನುಸಾರ ಎಂದು ಹೇಳುವುದು.

ಇವೆಲ್ಲ ಸಂಸ್ಥೆಗಳೂ, ನಿಗಮಗಳೂ ಬೆಂಗಳೂರು ಮಹಾನಗರಪಾಲಿಕೆಯಡಿ, ನಾವು ಆರಿಸುವ ಕಾರ್ಪೋರೇಟರ್ ಮತ್ತು ಅವರೆಲ್ಲರೂ ಕೂಡಿದ ಚುನಾಯಿತ ಸಂಸ್ಥೆಯಡಿ ಬಂದಾಗ ಬೆಂಗಳೂರು ಮಹಾನಗರಪಾಲಿಕೆಯ ಸ್ಥಾನಮಾನಗಳು ಉನ್ನತ ಮಟ್ಟಕ್ಕೇರುತ್ತವೆ. ನಿಜವಾದ ಅಧಿಕಾರ ಹೊಂದಿರುತ್ತವೆ. ಇದು ರಾಜ್ಯದ ಎಲ್ಲಾ ನಗರಸಭೆಗಳಿಗೆ ಅನ್ವಯಿಸುತ್ತದೆ. ಪುರಸಭೆಗಳಿಗೂ ಕೆಲವು ಮಟ್ಟಿಗಾದರೂ ಅನ್ವಯಿಸುತ್ತದೆ. ಇಂತಹ ನೈಜ ಅಧಿಕಾರ ಹೊಂದಿದಾಗ ಮಾತ್ರ ನಗರದ ನಾಗರಿಕರ ನಿರಾಸಕ್ತಿ ಮಾಯವಾಗಿ ದಿನದಿನವೂ ತನ್ನನ್ನು ಭಾದಿಸುವ ಹಲವು ಹದಿನೆಂಟು ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಇದೇ ಸಮಯ ಎಂದು ಚುನಾವಣೆಯಲ್ಲಿ ಕ್ರಿಯಾಶೀಲರಾಗಿ ಭಾಗವಹಿಸುತ್ತಾರೆ. ವಿವಿಧ ರಾಜಕೀಯ ಪಕ್ಷಗಳು ತನ್ನ ಆಗುಹೋಗುಗಳ ಬಗ್ಗೆ ಏನು ಹೇಳುತ್ತಿವೆ ಅವುಗಳ ಧೋರಣೆ ಏನು? ತಮ್ಮ ಮೇಲೆ ಅದರಿಂದುಂಟಾಗುವ ಪರಿಣಾಮಗಳೇನು ಎಂದು ಗಾಢವಾಗಿ ಚಿಂತಿಸತೊಡಗುತ್ತಾರೆ. ಜಾತಿ, ಧರ್ಮ, ವ್ಯಕ್ತಿ, ಸಂಬಂಧಗಳಿಗಿಂತ ಧೋರಣೆ ನೀತಿ ರಾಜಕೀಯ ಪಕ್ಷಗಳ ಆಧಾರದ ಮೇಲೆ ಮತ ನೀಡಲು ಆರಂಭಿಸುತ್ತಾರೆ. ಒಟ್ಟಿನಲ್ಲಿ ರಾಜಕೀಯ ಪ್ರಜ್ಞೆಯತ್ತ ಒಂದು ಮಹತ್ವದ ಹೆಜ್ಜೆ ಹಾಕಲಾರಂಭಿಸುತ್ತಾರೆ. ಆದ್ದರಿಂದಲೇ ಪ್ರಜಾಸತ್ತಾತ್ಮಕ ಅಧಿಕಾರ ವಿಕೇಂದ್ರೀಕರಣ ವರ್ಗ ಹೋರಾಟದ ಮುಖ್ಯ ಭಾಗವಾಗಿರುವುದು. ಆಳುವವರ್ಗಗಳು ಅಧಿಕಾರ ವಿಕೇಂದ್ರೀಕರಣ ಮಾಡಲು ನಿಜವಾದ ಪ್ರಭುಗಳಾದ ಜನತೆಯ ಕೈಯಲ್ಲಿ ಅಧಿಕಾರ ಕೊಡಲು ಹಿಂಜರಿದು ಕೇವಲ ಬಾಯಿಪ್ರಚಾರದ ವಿಕೇಂದ್ರೀಕರಣ ಮಾಡಲು ಪ್ರಯತ್ನಿಸುವುದು. ಆದ್ದರಿಂದಲೇ ಕಾರ್ಮಿಕ ವರ್ಗದ ಪಕ್ಷವಾದ ನಾವು ಪ್ರಜಾಸತ್ತಾತ್ಮಕ ಅಧಿಕಾರವಿಕೇಂದ್ರೀಕರಣಕ್ಕಾಗಿ ಹೋರಾಡುತ್ತಿರುವುದು. ಆದುದರಿಂದಲೇ ಈ ಚುನಾವಣೆಗಳಲ್ಲಿ ಅಧಿಕಾರ ವಿಕೇಂದ್ರೀಕರಣದ ಪ್ರಶ್ನೆಯನ್ನು ಬಂಡವಾಳಶಾಹಿ ಪಕ್ಷಗಳು ಮುಚ್ಚಿಡಲು ಪ್ರಯತ್ನಿಸಿದಷ್ಟೂ ನಾವು ಅದನ್ನು ಇಂದಿನ ಚುನಾವಣೆಗಳ ಕೇಂದ್ರಪ್ರಶ್ನೆ–ಗಳಲ್ಲೊಂದಾಗಿಸಲು ಜನರನ್ನು ಅದರತ್ತ ಸೆಳೆಯಲು ಹೋರಾಟ ನಡೆಸಬೇಕು.

ಇದನ್ನೇ ಕಾಂ. ಇ.ಎಂ.ಎಸ್. ರವರು— ಕೇಂದ್ರ ಮತ್ತು ರಾಜ್ಯಮಟ್ಟದಲ್ಲಿ ಪ್ರಜಾಸತ್ತೆ ಕೆಳಗಿನ ಮಟ್ಟದಲ್ಲಿ ಅಧಿಕಾರಿ ಸತ್ತೆ— ಇದೇ ನಮ್ಮ ಸಂವಿಧಾನದಲ್ಲಿ ಹೇಳಲ್ಪಟ್ಟಿರುವ ಭಾರತದ ರಾಜ್ಯ ರಚನೆಯ ನುಸಾರ ಎಂದು ಹೇಳುವುದು.



ಪಿ. ರಾಮಚಂದ್ರ ರಾವ್

ಬೀಡಿ ಕಾರ್ಮಿಕರಿಗೆ ಏಕೆ ಕೇವಲ ಎರಡು ದಿನಗಳ ಕೆಲಸ

ಕಾಂಗ್ರೆಸ್(ಐ) ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ನಂತರ ಕರ್ನಾಟಕ ರಾಜ್ಯದಲ್ಲಿ ಬೀಡಿ ಕಾರ್ಮಿಕರ ಪರಿಸ್ಥಿತಿ ಹಿಂದಿಗಿಂತ ತೀವ್ರವಾಗಿ ಹದಗೆಟ್ಟಿದೆ. ಅವರಿಗೆ ವಾರ ಒಂದಕ್ಕೆ ಕೇವಲ ಎರಡು ದಿನಗಳ ಕೆಲಸ ಮಾತ್ರ ದೊರೆಯುತ್ತಿದೆ ಸರಕಾರವು ಮೂಕವಾಗಿ ನಿಂತು ಇದನ್ನು ನೋಡುತ್ತಾ ಕಾಂಗ್ರೆಸ್ಸಿಗರು ಹಲವರು ಅಲ್ಲಲ್ಲಿ "ಮೊಸಳೆ ಕಣ್ಣೀರು" ಸುರಿಸುತ್ತಾ ಇರುವುದನ್ನು ಕಾಣುತ್ತೇವೆ. ಇಂದಿನ ಈ ವಿಶೇಷ ಪರಿಸ್ಥಿತಿಗೆ ಕಾರಣರು ಯಾರು? ಈ ಪರಿಸ್ಥಿತಿಯಲ್ಲಿ ಏನು ಪರಿಹಾರ? ಇದನ್ನು ನಾವು ಪರಿಶೀಲಿಸಬೇಕಾಗಿದೆ.

ಕಾಂಗ್ರೆಸ್(ಐ) ಸರಕಾರಗಳ ಧೋರಣೆ ಮತ್ತು ಸಾಹುಕಾರರ ಲಾಭದಾಹ ಇವೇ ಈ ಪರಿಸ್ಥಿತಿಗೆ ಪ್ರಮುಖ ಕಾರಣಗಳು.

ಮಧ್ಯ ಪ್ರದೇಶದಿಂದ ಬೀಡಿ ಕೈಗಾರಿಕೆಗೆ 80 ಪೈಸೆ ದರದಲ್ಲಿ "ತೆಂಡು ಎಲೆ" ಬರಬೇಕಾಗಿರುವುದು ಎಲ್ಲರಿಗೂ ತಿಳಿದ ವಿಷಯವಷ್ಟೆ. ಈ ತೆಂಡು ಎಲೆ ಮಧ್ಯಪ್ರದೇಶದ ಕಾಡು ಉತ್ಪತ್ತಿ. ಏಕಾಏಕಿ ಮಧ್ಯಪ್ರದೇಶದಲ್ಲಿ ಕಾಂಗ್ರೆಸ್(ಐ) ಮುಖ್ಯಮಂತ್ರಿ ಅರ್ಜುನ್‌ಸಿಂಗ್ ಚುನಾವಣೆಗೆ ನಿಂತರು. ಗೆದ್ದರು. ಆದರೆ ಅವರಿಗೆ ಒಬ್ಬ ಪ್ರಮುಖ ತೆಂಡು ಎಲೆ ಸಾಹುಕಾರ ಚುನಾವಣೆಯಲ್ಲಿ ಸಹಾಯ ಮಾಡಲಿಲ್ಲ. (ಬದಲು ವಿರೋಧ ಪಕ್ಷ ವೊಂದಕ್ಕೆ ಸಹಾಯ ಮಾಡಿದ). ಆತನ ವಿರುದ್ಧ ಹಗೆ ಸಾಧಿಸಲು ಕಾಡಿನಲ್ಲಿ ತೆಂಡು ಎಲೆ ಹೆಕ್ಕುವ ಆದಿವಾಸಿಗಳನ್ನು ಮುಂದಿಟ್ಟು ಇಡೀ ತೆಂಡು ಎಲೆ ವ್ಯಾಪಾರವನ್ನೇ ಸಿಂಗ್ ರಾಷ್ಟ್ರೀಕರಿಸಿದರು. ಅರ್ಜುನ್‌ಸಿಂಗ್ ಹೋಗಿ ವೋರಾ ಬಂದರು. ವೋರಾ ಕೂಡಾ ಹೋದರು. ಆದರೆ ಬೀಡಿ ತೆಂಡು ಎಲೆ ಸಮಸ್ಯೆ ಬಗೆ ಹರಿಯಲಿಲ್ಲ.

ಅಂದರೆ ರಾಷ್ಟ್ರೀಕರಣ ಅಥವಾ ಸಹಕಾರೀಕರಣ ತಪ್ಪೆ ಎಂದು ಯಾರಾದರೂ ಕೇಳಬಹುದು ಇಲ್ಲ. ತಪ್ಪಲ್ಲ. ಆದರೆ ಕೈಗಾರಿಕೆಯ ಹಿತ ರಕ್ಷಣೆ ಮಾಡಬೇಡವೇ? ಈ ಕೈಗಾರಿಕೆಯಲ್ಲಿ ಇಂದು ದುಡಿದು ಅಲ್ಪ ಸ್ವಲ್ಪ ಜೀವನ ಸಾಗಿಸುತ್ತಿರುವ 40 ಲಕ್ಷ ಬೀಡಿ ಕಾರ್ಮಿಕರ ಹಿತರಕ್ಷಣೆ ಮಾಡಬೇಡವೇ? ಕಾಂಗ್ರೆಸ್(ಐ) ಮಾಡಿದ ರಾಷ್ಟ್ರೀಕರಣ ಅಥವಾ ಸಹಕಾರೀಕರಣದಲ್ಲಿ ತೆಂಡು ಎಲೆ ಸಾಹುಕಾರರ ವಿರುದ್ಧ ದ್ವೇಷವಲ್ಲದೆ ಮತ್ತೇನನ್ನೂ ನೀವು ಕಾಣಲಾರಿರಿ.

90 ಲಕ್ಷ ಬಂಡಲು ತೆಂಡು ಎಲೆ ಸಂಗ್ರಹವಾಗುವ ಬದಲು 50-55 ಲಕ್ಷ ಬಂಡಲು ಮಾತ್ರ ಸಂಗ್ರಹವಾಗುತ್ತಿದೆ. ಅದರಲ್ಲಿ 10-15 ಲಕ್ಷ ಬಂಡಲು ಸಕಾಲದಲ್ಲಿ ಮಾರಾಟವಾಗದೆ ಹಾಳಾಗಿ ಹೋಗುತ್ತಿವೆ. 5-10 ಲಕ್ಷ ಬಂಡಲು ಮೋಸದಿಂದ ಅಡ್ಡ ದಾರಿಯಲ್ಲಿ ಹೊರಹೋಗುತ್ತಿದೆ.

ಬೀಡಿ ಕಾರ್ಮಿಕರ ಶೋಷಣೆಗೆ ತಡೆಯಿಲ್ಲವೇ?

ಭಾರತದೇಶ ಜಗತ್ತಿನ ಬಡರಾಷ್ಟ್ರಗಳಲ್ಲಿ ಒಂದು. ಒಂದೆಡೆ ಕೃಷಿ ಕೂಲಿಗಾರರು, ಬಡರೈತರು. ಇನ್ನೊಂದೆಡೆ ಬೀಡಿ, ತೆಂಗಿನನಾರು, ಗೋಡಂಬಿ ಇತ್ಯಾದಿ ಕಾರ್ಮಿಕರು. ಕಡು ಬಡವರು. ಬೀಡಿ ಕೈಗಾರಿಕೆ ದೇಶದ ರಾಜ್ಯಗಳಲ್ಲಿ ಹರಡಿದೆ. ಸುಮಾರು ಲಕ್ಷಕ್ಕಿಂತಲೂ ಅಧಿಕ ಬೀಡಿ ಕಾರ್ಮಿಕರು ಇದರಲ್ಲಿ ದುಡಿಯುತ್ತಿದ್ದಾರೆ. 6-7 ಲಕ್ಷ ಕಾರ್ಮಿಕರು ಕರ್ನಾಟಕ ರಾಜ್ಯವೊಂದರಲ್ಲಿ ದುಡಿಯುತ್ತಿದ್ದಾರೆ. ಇವರಲ್ಲಿ 3 ಲಕ್ಷಕ್ಕಿಂತಲೂ ಹೆಚ್ಚು ಮಂದಿ ದಕ್ಷಿಣ ಕನ್ನಡ ಜಿಲ್ಲೆಯೊಂದರಲ್ಲೇ ಇದ್ದಾರೆ. ತೀರಾ ಕಡಿಮೆ ಆದಾಯವುಳ್ಳ ಕಾರ್ಮಿಕರು ಇವರು. ಹೆಚ್ಚಿನೆಡೆಗಳಲ್ಲಿ ಅಲ್ಪ ಸಂಖ್ಯಾತ ವಿಭಾಗಕ್ಕೆ ಸೇರಿದ ಕಾರ್ಮಿಕರು ಈ ಉದ್ದಿಮೆಯಲ್ಲಿ ದುಡಿಯುತ್ತಿದ್ದಾರೆ. ಇದರಲ್ಲಿ ಶೇಕಡಾ 90 ಮಹಿಳೆಯರು.

ಸಂಘಟಿತ್ತು (1936 ರಿಂದ) ದಶಕಗಳ ಕಾಲ ಹೋರಾಟ ಮಾಡಿ, ಕಾಂ. ಎ.ಕೆ. ಗೋಪಾಲನ್‌ರಂತವರು ಲೋಕಸಭೆಯಲ್ಲಿ ಹತ್ತಾರು ವರ್ಷ ಕಾಲ ಹೋರಾಡಿದ್ದ ಫಲವಾಗಿ 1966 ರಲ್ಲಿ ಲೋಕಸಭೆಯಲ್ಲಿ 'ಬೀಡಿ ಅಂಡ್ ಸಿಗಾರ್ ಕಂಡೀಶನ್ಸ್ ಆಫ್ ವರ್ಕ್' (ಬೀಡಿ ಸಿಗಾರ್ ಕೆಲಸದ ಶರತ್ತುಗಳು) ಎಂಬ ಮಸೂದೆ ಅಂಗೀಕಾರಗೊಂಡಿತು. ಮನೆಗಳಲ್ಲಿ ದುಡಿಯುವ ಬೀಡಿ ಕಾರ್ಮಿಕರನ್ನು ಈ ಕಾನೂನಿನೊಳಗೆ ತಂದು, ಅವರಿಗೆ ಕೆಲವೊಂದು ಅನುಕೂಲತೆಗಳನ್ನು ಕೊಡಬೇಕೆಂದು ಸಂಸತ್ತು ನಿರ್ಧರಿಸಿತು.

ನಮ್ಮ ದೇಶದಲ್ಲಿ ಇಂತಹ ಕಾನೂನು ಅಂಗೀಕರಿಸಲ್ಪಡುವುದೇ ಅಪರೂಪ. ಅಂಗೀಕಾರವಾದ ನಂತರ ಜ್ಯಾರಿಗೆ ಬರುವುದಾದಂತೂ ಇನ್ನೂ ಅಪರೂಪ.

ಆದರೂ ಕೇಂದ್ರ ಸಂಘಟನೆಯಾದ ಸಿ.ಐ.ಟಿ.ಯು. ವಿನ ಸತತ ಪ್ರಯತ್ನದ ಫಲವಾಗಿ ಆ ಕಾಯ್ದೆಯ ಕೆಲವಂಶಗಳು ಕೇರಳ ಮತ್ತು ಕರ್ನಾಟಕಗಳಲ್ಲಿ, ತಮಿಳು ನಾಡು ಮತ್ತು ಮಹಾರಾಷ್ಟ್ರಗಳಲ್ಲಿ ಜ್ಯಾರಿಗೆ ಬಂದವು. ಉತ್ತರ ಭಾರತದಲ್ಲಿ ಹೆಚ್ಚಿನೆಡೆಗಳಲ್ಲಿ, ರಾಜಸ್ಥಾನ, ಮಧ್ಯಪ್ರದೇಶ, ಬಿಹಾರ, ಉತ್ತರ ಪ್ರದೇಶ - ಜ್ಯಾರಿಗೆ ಬರಲೇ ಇಲ್ಲ.

ಪ್ರಮುಖ ಬೀಡಿ ಸಾಹುಕಾರರಿಗೆ ಅವರಿಗೆ ಬೇಕಾದ ಪ್ರಮಾಣದಲ್ಲಿ, ಬೇಕಾದ ಗುಣಮಟ್ಟದ ಎಲೆ ಸಿಗುತ್ತಿಲ್ಲ.

ದಕ್ಷಿಣ ಭಾರತದ ಬೀಡಿ ಕಾರ್ಮಿಕರು ಇವರಲ್ಲಿ ಬಹಳಷ್ಟು ತೊಂದರೆಗೊಳಗಾಗಿದ್ದಾರೆ. ದಕ್ಷಿಣ ಭಾರತದ ಬೀಡಿ ಕಾರ್ಮಿಕರು, ಸಿ.ಐ.ಟಿ.ಯು ಮೊದಲಾದ ಸಂಘಟನೆಗಳು ಮಧ್ಯ ಪ್ರದೇಶದ ಕಾಂಗ್ರೆಸ್(ಐ) ಸರಕಾರವನ್ನು ಕೇಂದ್ರದಲ್ಲಿದ್ದ ರಾಜೀವ ಸರ್ಕಾರವನ್ನು ಈ ಬಗ್ಗೆ ಎಷ್ಟು ಕೇಳಿ ಕೊಂಡರೂ ಎಲ್ಲವೂ ಅರಣ್ಯ ರೋದನವಾಯಿತು. ಖುದ್ದಾಗಿ ಆಗಿನ ಮಂತ್ರಿ ಮಂಗಳೂರಿನವರೇ ಆದ ಜನಾರ್ಧನ ಪೂಜಾರಿಯವರಿಗೇ ಅರಿಕೆ ಮಾಡಿಕೊಂಡಾಗ ಅವರು ಮೊಸಳೆ ಕಣ್ಣೀರು ಸುರಿಸಿದರೇ ವಿನಹ ಬೇರೇನನ್ನೂ ಮಾಡಲಿಲ್ಲ. ಈಗ ಬೀಡಿ ಕಾರ್ಮಿಕರಿಗೆ ಕೆಲಸವಿಲ್ಲದಿದ್ದಾಗ ಅವರ ಕಷ್ಟದ ಕುರಿತು ಅನೇಕ ಠರಾವು ಮಾಡುವವರಲ್ಲಿ ಅವರೂ ಒಬ್ಬರು! ಏನೊಂದು ವಿಪರ್ಯಾಸ !

ಈಗಲೂ ಮಧ್ಯಪ್ರದೇಶದ ಸರಕಾರ ಕಾಂಗ್ರೆಸ್ಸಿನದ್ದು ಎಂದು ಮಾತ್ರ ಮರೆ ಮಾಡಲು ಅವರೆಲ್ಲಾ ಪ್ರಯತ್ನಿಸುತ್ತಿದ್ದಾರೆ

ಇದೊಂದು ಕಾಂಗ್ರೆಸ್(ಐ) ಕೃತಕವಾಗಿ ಸೃಷ್ಟಿಸಿದ ಬಿಕ್ಕಟ್ಟಿನ ಪರಿಸ್ಥಿತಿಯಾಗಿದೆ. ರಾಷ್ಟ್ರೀಕರಣ ಅಥವಾ ಸಹಕಾರೀಕರಣವನ್ನು ತೆಂಡು ಎಲೆಗಳ ವಿಷಯದಲ್ಲಿ ರದ್ದು ಮಾಡಿ ಹಿಂದಿನ 'ಸಾಹುಕಾರಿ, ವ್ಯಾಪಾರಿ ವ್ಯವಸ್ಥೆ' ತರುವುದು ಅಥವಾ ರಾಷ್ಟ್ರೀಕರಣ ಸಹಕಾರೀಕರಣವನ್ನು ಶುದ್ಧವಾಗಿ ಮತ್ತು ಚಾಕಚಕ್ಯತೆಯಿಂದ ನಡೆಸುವುದು - ಇವೆರಡೇ ಈ ಬಿಕ್ಕಟ್ಟಿನ ಪರಿಹಾರಕ್ಕೆ ಇರುವ ದಾರಿಗಳು. ಯಾವ ದಾರಿಯನ್ನು ತುಳಿಯಬೇಕು ಎಂಬುದು ಮಧ್ಯಪ್ರದೇಶದ ಸರಕಾರಕ್ಕೆ ಬಿಟ್ಟದ್ದು. ಬೀಡಿ ಕೈಗಾರಿಕೆಗೆ ಅವಶ್ಯಕವಾಗಿರುವ ತೆಂಡು ಎಲೆಗಳನ್ನು ಒದಗಿಸುವುದು ಅವರ ರಾಷ್ಟ್ರೀಯ ಕರ್ತವ್ಯವಾಗಿದೆ.

ಅದೇ ವೇಳೆಯಲ್ಲಿ ಕೈಗಾರಿಕೆಯ ಈಗಿನ ಪರಿಸ್ಥಿತಿಗೆ, ಬೀಡಿ ಕಾರ್ಮಿಕರಿಗೆ ಎರಡು ದಿನಗಳ ಕೆಲಸ ಮಾತ್ರ ಕೊಟ್ಟು ಅವರನ್ನು ಸಾಯಿಸುತ್ತಿರುವುದಕ್ಕೆ ಸಾಹುಕಾರರು ಕೂಡಾ ಅಷ್ಟೇ ತಪ್ಪಿತಸ್ಥರು ಎಂದು ಸ್ಪಷ್ಟವಾಗಿ ಹೇಳಬೇಕಾಗಿದೆ.

ತೆಂಡು ಎಲೆ ಬೀಡಿ ಕೈಗಾರಿಕೆಯ ಕಚ್ಚಾಮಾಲು. ಈ ಕಚ್ಚಾಮಾಲಿಗೆ ಕ್ರಯ ರೂ. 10 ರಿಂದ 40 ಕ್ಕೆ ಏರಿದ್ದರೆ ಅದರಲ್ಲಿ ಕಾರ್ಮಿಕರ ತಪ್ಪೇನಿದೆ? ಈ ಬೀಡಿ ತೆಂಡು ಎಲೆಯಲ್ಲಾದ ದರ ಹೆಚ್ಚಳವನ್ನು ಬೀಡಿ ಕಾರ್ಮಿಕರ ಮೇಲೆ ಹೇರಿ ಈ ಬೀಡಿ ಮಾಲಿಕರು (ಇವರಲ್ಲಿ ಹಲವಾರು ಮಹಾ ದೈವಭಕ್ತರು!) ಅತ್ಯಂತ ಅಮಾನುಷ ಅನ್ಯಾಯ ಮಾಡಿದ್ದಾರೆ.

ಈ ಹೆಚ್ಚಳದ ಭಾರವನ್ನು ಕಾರ್ಮಿಕರ ಮೇಲೆ ಹಾಕುವುದೆಂದರೆ ಹೇಗೆ? ಕಾರ್ಮಿಕರು ಕಟ್ಟಿಕೊಡಲು ಸಾಧ್ಯವಿಲ್ಲದಷ್ಟು ಸಂಖ್ಯೆಯಲ್ಲಿ ಬೀಡಿಗಳನ್ನು ಕಟ್ಟಿಕೊಡಬೇಕೆಂದು ಕಾರ್ಮಿಕರಿಗೆ ಶರ್ತ ಹಾಕುವುದು. ಅದು ಸಾಧ್ಯವಾಗಲಿಲ್ಲವೆಂದರೆ ಕಡಿಮೆಯಾದ ಬೀಡಿಗಳಿಗೆ ಹೆಚ್ಚಿನ ದರದಲ್ಲಿ ದಂಡ ವಸೂಲು ಮಾಡುವುದು ಇದು ಅನ್ಯಾಯವಲ್ಲದೆ ಮತ್ತೇನು?

ನಮ್ಮ ಕಾಂಗ್ರೆಸ್(ಐ) ಸರಕಾರ, ಕಾರ್ಮಿಕ ಇಲಾಖೆ ಅಧಿಕಾರಿಗಳು ಇದನ್ನು ಕಂಡೂ ಕಾಣದಂತೆ ಮೂಕರಂತೆ ಇದ್ದಾರೆ. ಕಿರುಬೆರಳಿನಷ್ಟೂ ಆಕ್ಷೇಪ ಎತ್ತುತ್ತಿಲ್ಲ.

ಬೀಡಿ ಮಾಲಿಕರ ಈ ಶರ್ತಕ್ಕೆ ಪ್ರತಿಯಾಗಿ ಕಾರ್ಮಿಕರ ವಾದ ಹೇಗಿದೆ -

ಬೀಡಿ ಎಲೆ, ತಂಬಾಕು, ನೂಲು ಒದಗಿಸುವವರು ನಾವು. ಅದರಲ್ಲಿ ಎಷ್ಟು ಬೀಡಿ ಕಟ್ಟಿ ಕೊಡಲು ಸಾಧ್ಯವೋ ಅಷ್ಟನ್ನು ಮಾತ್ರ ಕೊಡಲು ನಾವು ಕಾರ್ಮಿಕರು ಬದ್ಧರು. ನಾವು ಕಟ್ಟಿದ ಬೀಡಿಗಳಿಗೆ ಕೂಲಿಕೊಡಲು ನೀವು ಬದ್ಧರು. ನಾವು ಕಟ್ಟಿಕೊಡದ ಬೀಡಿಗಳಿಗೆ ಅಷ್ಟು ಬೀಡಿ ಕಟ್ಟಿಕೊಡಬೇಕಿತ್ತು ಎಂದು ನೆಪಮಾಡಿ ನಾವು ಸಂಪಾದಿಸಿದ ಕೂಲಿಯಲ್ಲಿ ಕಡಿತ ಮಾಡಲು ನಿಮಗೆಲ್ಲಿದೆ ಹಕ್ಕು? ಈ ರೀತಿ ಕಡಿತ ಮಾಡುವುದು ಅನ್ಯಾಯವಲ್ಲದೆ ಮತ್ತೇನು?

ಈ ಪ್ರಶ್ನೆಯಲ್ಲಿ ಅಡಕವಾಗಿರುವ ತತ್ವ ಕಾನೂನಿನ ಅಂಶ ಇಡೀ ಕಾರ್ಮಿಕ ವರ್ಗಕ್ಕೆ ಸಂಬಂಧಪಟ್ಟದ್ದು ಆದ್ದರಿಂದ ಇಂದು ಬೀಡಿ ಕಾರ್ಮಿಕರಿಗೆ ಆಗುತ್ತಿರುವ ಅನ್ಯಾಯವನ್ನು ಇಡೀ ಕಾರ್ಮಿಕ ವರ್ಗ ವಿರೋಧಿಸಿ ಸೋಲಿಸಬೇಕಾಗಿದೆ ಮುಂದಕ್ಕೆ ಈ ನೀತಿ ಇತರ ಕೈಗಾರಿಕೆಗಳಿಗೂ ಲಗ್ತಾದರೆ! ಇಂತಹ ಅಪಾಯದ ವಿರುದ್ಧ ಹೋರಾಡಲು ಕಾರ್ಮಿಕ ವರ್ಗ ಬೀಡಿ ಕೈಗಾರಿಕೆಗೆ ಸಹಾಯ ಮಾಡಬೇಕಾಗಿದೆ.

ಇಷ್ಟೇ ಅಲ್ಲ, ಇದೇ ಸಂದರ್ಭದಲ್ಲಿ ಬೀಡಿ ಮಾಲಿಕರು ಬೀಡಿ ಬಂಡಲ್ ಒಂದರ ಮಾರಾಟ ಕ್ರಯವನ್ನು ರೂ. 50-55 ರಿಂದ ರೂ 65/- ಕ್ಕೇರಿಸಿ ಬಹಳಷ್ಟು ಲಾಭ ಮಾಡಲು ಹವಣಿಸಿದರು. ಇದರಲ್ಲಿ ಕಾರ್ಮಿಕರಿಗೆ ಒಂದೇ ಒಂದು ಪೈಸೆ ಅಧಿಕ ಕೂಲಿಯಾಗಲಿ, ಬೋನಸ್ಸಾಗಲಿ ಮಾಲಿಕರು ಕೊಡಲಿಲ್ಲ.

ಬೀಡಿ ಕಂಟ್ರಾಕ್ಟರರು, ಕೋಟಾ ಬೀಡಿ ಸಾಹುಕಾರರು, ದಲ್ಲಾಳಿಗಳು ಎಲ್ಲರೂ ಈ ಸಂದರ್ಭವನ್ನು ಉಪಯೋಗಿಸಿ ಕೊಂಡು ಒಂದೆಡೆ ಸಾಹುಕಾರರನ್ನು ಇನ್ನೊಂದೆಡೆ ಕಾರ್ಮಿಕರನ್ನು ಮೋಸ ಮಾಡುತ್ತಿದ್ದಾರೆ. ಇದರಿಂದ ಬಿಕ್ಕಟ್ಟು ಇನ್ನಷ್ಟು ಹೆಚ್ಚುತ್ತಾ ಬರುತ್ತಿದೆ.

ಲಕ್ಷಾಂತರ ಬೀಡಿ ಕಾರ್ಮಿಕರಿಗೆ ಕೆಲಸ ಒದಗಿಸುವ ಜವಾಬ್ದಾರಿ ಕಾನೂನಿನಿಂದ ನಿರ್ದಿಷ್ಟ ಪಡಿಸಲ್ಪಟ್ಟ ಜವಾಬ್ದಾರಿಯನ್ನು ಬೀಡಿ ಮಾಲಿಕರು ಸಂಪೂರ್ಣ ಮರೆತು ಕೂತಿದ್ದಾರೆ. ಅವರನ್ನು ಬಲಾತ್ಕರಿಸಿಯಾದರೂ ಅವರಿಂದ ಈ ಜವಾಬ್ದಾರಿ ನಿರ್ವಹಿಸುವಂತೆ ಈಗ ನಿರ್ಧರಿಸಬೇಕಾಗಿದೆ.

ಕನಿಷ್ಟ ಕೂಲಿ ಕಾನೂನಿನನ್ವಯ "ದಿನವೊಂದಕ್ಕೆ ಕನಿಷ್ಟ ಬೀಡಿ ಕಟ್ಟಲು ಕಚ್ಚಾ ಮಾಲುಗಳನ್ನು ಒದಗಿಸದೇ ಇದ್ದರೆ ಕಾರ್ಮಿಕರಿಗೆ ಸಾಹುಕಾರರು Fall-back wages (ಫಾಲ್-ಬೇಕ್-ವೇಜಸ್) ಕೊಡಬೇಕು" ಎಂಬ ಒಂದು ಕಲಮು ಇದೆ.

ಇದರ ಪ್ರಕಾರ ಸಾಹುಕಾರರು ಬೀಡಿ ಕಾರ್ಮಿಕರಿಗೆ ವಾರ ಒಂದರ 6 ದಿನಗಳಿಗೆ ಅವಶ್ಯವಾದ ಕನಿಷ್ಟ ಬೀಡಿ ಕಟ್ಟಲು ಕಚ್ಚಾ ಮಾಲುಗಳನ್ನು ಒದಗಿಸದೇ ಇದ್ದರೆ ಅವರಿಗೆ 6 ದಿನಗಳಷ್ಟು ಭರ್ತಿಮಾಡಿ ಕನಿಷ್ಟ ಫಾಲ್ ಬೇಕ್ ಕೂಲಿ ಕೊಡಬೇಕಾಗಿದೆ.

ಈ ಬಗ್ಗೆ ಸಾಹುಕಾರರು ಕಣ್ಣಿದ್ದು ಕುರುಡಾಗಿ ಕೂತಿದ್ದಾರೆ- ಕಾಂಗ್ರೆಸ್(ಐ) ಸರಕಾರ ಕೂಡಾ ತೀರಾ ಕುರುಡರಂತೆ ವರ್ತಿಸುತ್ತಿದೆ.

ಕಾನೂನು ಕೈಗೆ ತೆಗೆದುಕೊಳ್ಳುತ್ತೀರಾ? ಎಂದು ಬೆದರಿಸಿ ದಲಿತರು ಮತ್ತು ಸಮಾಜದ ಅತ್ಯಂತ ಕೆಳವಿಭಾಗದ ಕೃಷಿ ಕೂಲಿಗಾರರು, ಬಡರೈತರು ಶಿವಮೊಗ್ಗೆಯಲ್ಲಿ ಸರಕಾರೀ ಕೃಷಿ ಯೋಗ್ಯ ಬಂಜರು ಭೂಮಿಯಲ್ಲಿ ನೆಲೆಸಲು ಹೋದವರನ್ನ ಒಂದೆಡೆ ಒದ್ದು, ಹೊಡೆದು, ಅಶ್ರುವಾಯು ಬಿಟ್ಟು, ಓಡಿಸುತ್ತಿರುವ, ಅವರ ಮನೆ ಸಾಮಾನುಗಳನ್ನು ಲೂಟಿ ಮಾಡುತ್ತಿರುವ ಕಾಂಗ್ರೆಸ್ಸ್ ಸರಕಾರ ಇನ್ನೊಂದೆಡೆ ನಿಜವಾಗಿ ವ್ಯಾಪಕವಾಗಿ ಕಾನೂನಿನ ಉಲ್ಲಂಘನೆಯಾಗುತ್ತಿರುವಾಗ, ಅದರಿಂದ ಲಕ್ಷಾಂತರ ಬಡ ಬೀಡಿ ಕಾರ್ಮಿಕರು ಉಪವಾಸದಿಂದ ನರಳುತ್ತಿರುವಾಗ ಸುಮ್ಮನೆ ಕೂತಿದೆ!

ಇದು ನಮ್ಮ ಸಮಾಜದ ವಿಪರ್ಯಾಸ! ಇದು ನಮ್ಮ ಪ್ರಜಾಪ್ರಭುತ್ವ ಅಲಲೇ!

ಲಕ್ಷ ಲಕ್ಷ ಸಂಖ್ಯೆಯ ಬೀಡಿ ಕಾರ್ಮಿಕರು ಮತ್ತೆ "ಸಂಘಟನೆ ಮತ್ತು ಹೋರಾಟ"ದ ದಾರಿಯನ್ನು ಹಿಡಿದರೆ ಮಾತ್ರ ಈ ಬಿಕ್ಕಟ್ಟಿಗೆ

ಫೆಡರಲ್ ಸಂರಚನೆ ಮತ್ತು ಭಾರತೀಯ ಪ್ರಭುತ್ವ

– ಭಾವತೋಷ್ ರಾಯ್,

– ಅನುವಾದ: ಓ. ಆರ್. ಆರ್.

ಭಾರತ ದೇಶದಲ್ಲಿ ಇಂದು ವಿಚ್ಛಿದ್ರಕಾರಿ ಶಕ್ತಿಗಳು ತಾಂಡವವಾಡುತ್ತಿದ್ದು, ಅವು ದೇಶದ ಐಕ್ಯತೆ ಮತ್ತು ಸಮಗ್ರತೆಗೆ ಸವಾಲಾಗಿ ನಿಂತಿವೆ. ಈ ದುಷ್ಟ ಶಕ್ತಿಗಳಿಗೆ ಭಾರತದ ಸಂವಿಧಾನದ ಫೆಡರಲ್(2) ಸಂರಚನೆಗೆ ಹೇಗೆ ಸಹಾಯಕವಾಗಿದೆ ಎಂಬುದನ್ನು ಪರಿಶೀಲಿಸೋಣ.

ನಮ್ಮ ಸಂವಿಧಾನವು ಜನವರಿ 26, 1950ರಂದು ಅಸ್ತಿತ್ವಕ್ಕೆ ಬಂತು. ಅದು ಜಗತ್ತಿನಲ್ಲಿ ಅತಿ ವಿಸ್ತಾರವಾದ ಸಂವಿಧಾನವಾಗಿದೆ. ಅದನ್ನು ಇಡಿಯಾಗಿ ಪರಿಶೀಲನೆ ಮಾಡುವುದು ಬಹಳ ಕಷ್ಟಕರ. ಆದರೆ ಒಂದು ಅಂಶದ ಕುರಿತು–ಫೆಡರಲ್ ಸಂರಚನೆಯ ಕುರಿತು ನಾವು ಪರಿಶೀಲಿಸಲಿರುವುದರಿಂದ ಅದು ಅಷ್ಟು ಕಷ್ಟಕರವಾಗಲಾರದು.

ಭಾರತದ ಸಂವಿಧಾನವು 'ಕಾನ್ಸ್ಟಿಟುಯೆಂಟ್ ಅಸೆಂಬ್ಲಿ'ಯ ಮೂಲಕ ಅಂಗೀಕೃತವಾಯಿತು. ಆದರೆ, ಈ ಅಸೆಂಬ್ಲಿಯು ವಯಸ್ಕರ ಮತದಾನದ ಆಧಾರದಲ್ಲಿ ಆರಿಸಲ್ಪಟ್ಟ ಪ್ರತಿನಿಧಿಗಳಿಂದ ಕೂಡಿದಾಗಿರಲಿಲ್ಲ. ಆದಕಾರಣ ಅಲ್ಲಿ ನಡೆದ ಚರ್ಚೆ ಮತ್ತು ಅನುಭವ ವಿನಿಮಯ ತೃಪ್ತಿಕರವಾಗಲು ಸಾಧ್ಯವಿಲ್ಲ. ವಯಸ್ಕರ ಮತದಾನದ ಆಧಾರದಲ್ಲಿ 'ಕಾನ್ಸ್ಟಿಟುಯೆಂಟ್ ಅಸೆಂಬ್ಲಿ' ಕರೆದು ಸಂವಿಧಾನ ರಚಿಸಿ ಆ ಮೂಲಕ ಸಂವಿಧಾನ ಅಂಗೀಕಾರ ಮಾಡಬೇಕೆಂದು ರಾಷ್ಟ್ರೀಯ ಸ್ವಾತಂತ್ರ್ಯ ಹೋರಾಟದ ತೀರ್ಮಾನವಾಗಿದ್ದರೂ, ರಾಷ್ಟ್ರೀಯ ಕಾಂಗ್ರೆಸ್ಸು ತಮ್ಮ ಸ್ವಂತ ಕಾರಣಗಳಿಗಾಗಿ ಹಾಗೆ ಮಾಡಲಿಲ್ಲ.

ಒಂದು ಫೆಡರಲ್ ಪ್ರಭುತ್ವದಲ್ಲಿ ಅದು ಅಂಗಗಳಿಗೆ ತಮ್ಮನ್ನು ಆಳುವ ಹಕ್ಕು ಸ್ವಯಂ ನಿರ್ಧಾರಿತವಾಗಿರುತ್ತವೆ. ಎಲ್ಲಾ ಅಂಗಗಳಿಗೆ ಸರ್ವಸಮಾನವಾದ ಹಿತಗಳಿಗೆ ಸಂಬಂಧಪಟ್ಟು ನಿರ್ಧಿಷ್ಟ ವಿಷಯಗಳ ಮಟ್ಟಿಗೆ ಮಾತ್ರ ಅವುಗಳ ಬೆಳವಣಿಗೆಗೆ ಸಹಾಯಕವಾಗುವ ನಿರ್ದಿಷ್ಟ ವಿಷಯಗಳ ಮಟ್ಟಿಗೆ ಮಾತ್ರ ಫೆಡರಲ್ ಸರ್ಕಾರದಲ್ಲಿ ಅಧಿಕಾರವಿರುತ್ತದೆ. ಇದು ಫೆಡರಲ್ ಸಂರಚನೆಗೆ ಸಂಭಂಧಪಟ್ಟ ಸಾಮಾನ್ಯ ತಿಳುವಳಿಕೆಯಾಗಿರುತ್ತದೆ. ಆದರೆ ಭಾರತದ ಸಂವಿಧಾನದಲ್ಲಿ ಈ ತಿಳುವಳಿಕೆಯು ಒಳ ಗೊಂಡಿರುವುದಿಲ್ಲ. ಅಂಗಗಳಾದ ರಾಜ್ಯಗಳು ತಮ್ಮ ಹೆಸರು ಮತ್ತು ವಿಸ್ತೀರ್ಣಗಳ ಮಟ್ಟಿಗೂ ಸ್ವತಂತ್ರವಾಗಿಲ್ಲ. ಅಂಗಗಳ ಅಂದರೆ ರಾಜ್ಯಗಳ ಒಪ್ಪಿಗೆ ಇಲ್ಲದೆ ಅವುಗಳ ಹೆಸರು ಮತ್ತು ವಿಸ್ತೀರ್ಣ ಇತ್ಯಾದಿಗಳನ್ನು ವ್ಯವಸ್ಥೆ ಮಾಡುವ ಅಧಿಕಾರವನ್ನು ಲೋಕಸಭೆಯು ಒಳಗೊಂಡಿದೆ ಭಾರತದ ಸಂವಿಧಾನದಲ್ಲಿ!

ಕೇಂದ್ರದ ಅಧಿಕಾರ ಹೀಗೆ ಹತ್ತು ಹಲವು ಕಡೆಗಳಲ್ಲಿ ಸಂವಿಧಾನದಲ್ಲಿ ಅಲ್ಲಲ್ಲಿ ಸೇರಿಕೊಂಡಿದ್ದು ಅಂಗಗಳ(ರಾಜ್ಯಗಳ) ಅಧಿಕಾರವನ್ನು ಮೀರಿರುತ್ತದೆ. ಪಾರ್ಲಿಮೆಂಟರಿ ಪ್ರಜಾಪ್ರಭುತ್ವದ ಪದ್ಧತಿಯಲ್ಲಿ ಲೋಕಸಭೆ ಅಂದರೆ ಅಧಿಕಾರದಲ್ಲಿರುವ ಪಕ್ಷವೆಂದರ್ಥ, ಎಂಬುದನ್ನು ಮರೆಯಬಾರದು. ಅಂದರೆ ಅಧಿಕಾರವು ಕಾರ್ಯಾಂಗದಲ್ಲಿ ಸೇರ್ಪಡೆಯಾಗಿರುತ್ತದೆ!

ಭಾರತ ಸಂವಿಧಾನವು ಹೇಗೆ ರಚಿಸಲ್ಪಟ್ಟಿದೆ ಎಂದರೆ ರಾಜ್ಯಗಳ ಮಂತ್ರಿಮಂಡಲಗಳು ಮತ್ತು ವಿಧಾನಸಭೆಗಳು ಎಷ್ಟು ಕಾಲ ಆ ರಾಜ್ಯಗಳ ಜನತೆಯಿಂದ ಆರಿಸಲ್ಪಟ್ಟಿರುತ್ತವೆಯೋ ಅಷ್ಟು ಕಾಲ ಅಧಿಕಾರದಲ್ಲಿಲ್ಲದಂತೆ ಕೇಂದ್ರ ಸರ್ಕಾರವು ಅಂದರೆ ಕೇಂದ್ರದಲ್ಲಿ ಆಳುವ ಪಕ್ಷ ತಮ್ಮ ಕಾರ್ಯಾಂಗದ ಮೂಲಕ ಮಾಡಬಹುದು. ಇದನ್ನೇ ಸಂವಿಧಾನವು ಅಧ್ಯಕ್ಷರ ಆಡಳಿತ ಹೇರುವಿಕೆಯೆಂದು ಕರೆಯುತ್ತದೆ.

ಕೇಂದ್ರದಲ್ಲಿ ಲೋಕಸಭೆಯ ಪ್ರತಿನಿಧಿಗಳು ಯಾವರೀತಿಯಲ್ಲಿ ಆರಿಸಲ್ಪಡುತ್ತಾರೊ ಅದೇ ರೀತಿಯಾದ ವಿಧಾನಸಭೆಯ ಪ್ರತಿನಿಧಿಗಳನ್ನು ಜನತೆ ವಿಧಿಪ್ರಕಾರ ಆರಿಸುವುದಾದರೂ ರಾಜ್ಯ ವಿಧಾನಸಭೆಯು ಅಂಗೀಕರಿಸಿದ ಮಸೂದೆಯು ರಾಜ್ಯದ ರಾಜ್ಯಪಾಲರಿಂದ ಒಪ್ಪಿಗೆ ಪಡೆಯದೆ ವಿನಃ ಕಾನೂನು ಎಂದು ಪರಿಗಣಿಸಲ್ಪಡುವುದಿಲ್ಲ. ವಿಚಿತ್ರವೇನೆಂದರೆ, ಈ ರಾಜ್ಯಪಾಲರಿಗೆ ಒಪ್ಪಿಗೆ ನಿರಾಕರಿಸುವ ಅಥವರ ಅಧ್ಯಕ್ಷರ ಅನುಮತಿಗೆ ಕಳುಹಿಸಿಕೊಡುವ ಅಧಿಕಾರ ಕೊಡಲಾಗಿದೆ.

ಈ ರಾಜ್ಯಪಾಲರು ಯಾರು? ಇದು ಭಾರತದ ಸಂವಿಧಾನವು ಬ್ರಿಟೀಷ್ ಪರಂಪರೆಯನ್ನೇ ಮುಂದುವರಿಸಿ ಸೃಷ್ಟಿಸಿದ ಸ್ಥಾನವಾಗಿರುತ್ತದೆ. ರಾಜ್ಯಪಾಲರನ್ನು ಜನತೆ ಆರಿಸುವುದಿಲ್ಲ. ಅವರು ಭಾರತ ಸರ್ಕಾರವು ನೇಮಕ ಮಾಡುವ ಒಬ್ಬ ಅಧಿಕಾರಿ ಮಾತ್ರ. ಅವರು ರಾಜ್ಯಸರಕಾರಗಳ ಚಟುವಟಿಕೆಗಳ ಕುರಿತು ಕೇಂದ್ರ ಸರ್ಕಾರಕ್ಕೆ ವರದಿ ಮತ್ತು ಮಾಹಿತಿ ಇತ್ಯಾದಿ ಒದಗಿಸಲು ರಾಜ್ಯಗಳ ವಿಧಾನಸಭೆಗಳು ಅಂಗೀಕರಿಸಿದ ಮಸೂದೆಗಳಿಗೆ ಒಪ್ಪಿಗೆ ಕೊಡಲು ಅಥವಾ ಒಪ್ಪಿಗೆ ನಿರಾಕರಿಸಲು ಅಥವಾ ರಾಷ್ಟ್ರಾಧ್ಯಕ್ಷರ ಸಮ್ಮತಿಗೆ ಕಳುಹಿಸಿ ಕೊಡಲು ಬದ್ಧರು.

ಈ ರಾಜ್ಯಪಾಲರ ಅಧಿಕಾರಗಳಿಂದಾಗಿ ರಾಜ್ಯಗಳು ಕೇಂದ್ರಸರಕಾರದ ಇಚ್ಛೆಗೊಳಗಾಗಿರಬೇಕಾಗಿರುತ್ತದೆ. ವಸ್ತುಸ್ಥಿತಿಯು ಊಹಾಪೋಹಕ್ಕಿಂತಲೂ ಆಶ್ಚರ್ಯಕರ. ಈ 40 ವರ್ಷಗಳಲ್ಲಿ ರಾಜ್ಯಮಂತ್ರಿಮಂಡಲಗಳನ್ನು ಮತ್ತು ವಿಧಾನಸಭೆಗಳನ್ನು 77 ಕ್ಕಿಂತಲೂ ಅಧಿಕ ಬಾರಿ ರಾಜ್ಯಪಾಲರು ವಿಸರ್ಜಿಸಿದ್ದಾರೆ ಎಂಬುದಂತೂ ಸತ್ಯ. ಸೇರ್ಪಡೆಯಾದ ಫೆಡರಲ್ ಪ್ರಭುತ್ವದ ಅಂಗಗಳು ರಾಜ್ಯಗಳು–ತಮ್ಮ ಜನತೆಯ ಇಚ್ಛೆ ಪ್ರಕಾರ ನಡೆಯಲು ಸಾಧ್ಯವಿಲ್ಲವೆಂದಾದರೆ ಫೆಡರಲ್ ತತ್ವಕ್ಕೆ ಏನು ಅರ್ಥವಿದೆ. ಜನತೆಯ ತೀರ್ಪಿಗೆ ವಿರುದ್ಧವಾದ ತೀರ್ಪನ್ನು ಕೊಡುವ ಅಧಿಕಾರ ಬೇರೊಂದು ಅಧಿಕಾರಿಗೆ ಇದೆ ಎಂದರೆ ಫೆಡರಲ್ ತತ್ವಕ್ಕೆ ಏನು ಅರ್ಥವಿದೆ?

ಭಾರತದ ಸಂವಿಧಾನದಲ್ಲಿ ವಿಷಯಗಳನ್ನು ರಾಜ್ಯ, ಕೇಂದ್ರ ಮತ್ತು ಸಂಯುಕ್ತ ಪಟ್ಟಿಯಾಗಿ ಸೇರಿಸಿದ್ದಾರೆ. ಒಂದು ಫೆಡರಲ್ ಪ್ರಭುತ್ವದಲ್ಲಿ ಈ ಪಟ್ಟಿಗಳಿಲ್ಲದ ವಿಷಯಗಳು ಆಯಾಯ ಅಂಗಗಳಾದ ರಾಜ್ಯಗಳಿಗೆ ಸೇರಿರುತ್ತದೆ. ಆದರೆ ಭಾರತದ ಸಂವಿಧಾನದಲ್ಲಿ ಅವು ಕೇಂದ್ರ ಸರಕಾರಕ್ಕೆ ಸೇರಿದ್ದಾಗಿರುತ್ತವೆ.

ಇನ್ನೊಂದು ವಿಚಿತ್ರ ಅಂಶವು ಭಾರತದ ಸಂವಿಧಾನದಲ್ಲಿ ಇರುತ್ತದೆ. ಒಂದು ರಾಜ್ಯದ ಕಾನೂನು ಕೇಂದ್ರದ ಕಾನೂನಿಗೆ ವ್ಯತಿರಿಕ್ತವಾಗಿದ್ದರೆ ರಾಜ್ಯದ ಕಾನೂನು ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುತ್ತದೆ. ಅಲ್ಲಿ ಕೇಂದ್ರದ ಕಾನೂನೇ ಜಾರಿಗೆ ಬರುತ್ತದೆ. ಇದರ ಅರ್ಥ ಸಂಯುಕ್ತ ಪಟ್ಟಿಯಲ್ಲಿರುವ ಯಾವುದೇ ವಿಷಯಕ್ಕೆ ಸಂಬಂಧಪಟ್ಟ ಫೆಡರಲ್ ಪ್ರಭುತ್ವದ ಅಂಗಗಳಿಗೆ ಸಂಬಂದ ಪಟ್ಟ ಯಾವುದೇ ಕಾನೂನನ್ನು ಕೇಂದ್ರ ಸರಕಾರವು ನಿರ್ವೀರ್ಯಗೊಳಿಸಲೂಬಹುದು.

ಇವೆಲ್ಲವುದರಿಂದ ಒಂದಂಶ ಸ್ಪಷ್ಟವಾಗುತ್ತದೆ. ಭಾರತದ ಸಂವಿಧಾನವು ತನ್ನಲ್ಲಿ ಸೇರ್ಪಡೆಯಾದ ಅಂಗಗಳನ್ನು ತನ್ನ ಇಸ್ಪೀಟು ರಾಜರಾಗಿ ಮಾರ್ಪಡಿಸಿಕೊಂಡಿದೆ.

ಇನ್ನು ಹಣಕಾಸಿಗೆ ಸಂಬಂಧಪಟ್ಟ ಏರ್ಪಾಡುಗಳು ರಾಜ್ಯ ಮತ್ತು ಕೇಂದ್ರಗಳ ನಡುವೆ ಹೇಗಿದೆ ಎಂಬುದನ್ನು ಪರಿಶೀಲಿಸೋಣ.

ರಾಜ್ಯಸರ್ಕಾರಗಳು ಸಂಗ್ರಹಿಸುವ ಹಣದ ಸಿಂಹಪಾಲು ಕೇಂದ್ರ ಸರಕಾರಕ್ಕೆ ಸೇರುತ್ತವೆ. ರಾಜ್ಯಸರಕಾರಗಳ ಪಾಲಿಗೆ ಅತ್ಯಲ್ಪ ಹಣ ಮಾತ್ರ ಸೇರುತ್ತದೆ. ಹೀಗಿದೆ ಭಾರತದ ಸಂವಿಧಾನದಲ್ಲಿ ಹಣದ ಏರ್ಪಾಡು. ರಾಜ್ಯ ಸರಕಾರಗಳು, ಆದಕಾರಣ ಕೇಂದ್ರಸರ್ಕಾರದ 'ಗ್ರ್ಯಾಂಟು' ಅಥವಾ 'ಸಾಲ'ಕ್ಕೆ ಅವಲಂಬಿಸಿರಬೇಕಾಗಿದೆ.

ಯಾವುದೇ ವಿಷಯಕ್ಕಾಗಲಿ, ಯೋಜನೆಗಳ ಜಾರಿಗಾಗಲಿ, ನೈಸರ್ಗಿಕ ಆಘಾತಗಳಿಗಾಗಲಿ ರಾಜ್ಯಸರ್ಕಾರಿ ಸಿಬ್ಬಂಧಿಗಳಿಗೆ ತುಟ್ಟಿಭತ್ತೆ, ಕೊಡಲಿಕ್ಕಾಗಲಿ, ಹಾಗೆಯೇ ಇತರ ಖರ್ಚಿನ ಬಾಬ್ತಿಗಳಿಗಾಗಲಿ ರಾಜ್ಯಸರಕಾರಗಳು ಯಾವಾಗಲೂ ಸಹಾಯಕ್ಕಾಗಿ ಕೇಂದ್ರ ಸರಕಾರವನ್ನು ಯಾಚಿಸಬೇಕಾಗಿರುತ್ತದೆ. ಸಂವಿಧಾನದ ಕಲಮುಗಳಲ್ಲಿ ನಿರ್ದಿಷ್ಟವಾದ ಹಣದ ಮೂಲಗಳ ವಿಂಗಡನೆಯ ಪದ್ಧತಿ ಆಗಿರುತ್ತದೆ.

ಇನ್ನು ತಮ್ಮ ಯೋಜನೆಗಳ ಗಾತ್ರ ಮತ್ತು ನಿರ್ಧಿಷ್ಟತೆಯನ್ನು ರಾಜ್ಯಸರಕಾರಗಳಿಗೆ ನಿರ್ಧರಿಸಲು ಅಧಿಕಾರವಿರುವುದಿಲ್ಲ. ಅವುಗಳು ಈ ವಿಷಯದಲ್ಲಿ ಕೇಂದ್ರ ಸರಕಾರದ ಒಂದು ಡಿಪಾರ್ಟಮೆಂಟಿನಂತಿರುವ ಯೋಜನಾ ಆಯೋಗದ ನಿರ್ದೇಶನಗಳಿಗೆ ಬಾಗಿಕೊಂಡಿರಬೇಕಾಗಿದೆ. ರಾಜ್ಯಸರಕಾರಗಳು. ಈ ರೀತಿ ಹಣ ಕಾಸಿನ ವಿಷಯದಲ್ಲಿ ಕೇಂದ್ರಸರಕಾರದ ಮೇಲೆ ಹೊಂದಿಕೊಂಡಿರುವ ಸ್ಥಿತಿ ಫೆಡರಲ್ ತತ್ವವನ್ನೇ ಹಾಸ್ಯಾಸ್ಪದ ಮಾಡಿದೆ. ಆರ್ಥಿಕ ಅವಲಂಬನೆ ಎಂದರೆ ಇತರ ಎಲ್ಲ ವಿಷಯಗಳಲ್ಲಿ ಅವಲಂಬನೆ ಎಂದರ್ಥ. ಆರ್ಥಿಕ ಅಧಿಕಾರವು ಇತರ ಎಲ್ಲಾ ತರದ ಅಧಿಕಾರಗಳನ್ನು ತನ್ನಲ್ಲಿ ಸೇರ್ಪಡೆ ಮಾಡಿಕೊಂಡಿರುತ್ತದೆ.

ಇನ್ನು ಆಡಳಿತೆಗೆ ಸಂಬಂಧಪಟ್ಟು....

ರಾಜ್ಯದ ಉನ್ನತ ಅಧಿಕಾರ ಸ್ಥಾನಗಳ... ಅಲಂಕರಿಸುವ ಅಖಿಲ ಭಾರತ ಸರ್ವಿ... ಅಧಿಕಾರಿಗಳು ಐ.ಎ.ಎಸ್. ಐ.ಪಿ.ಎ... ಇತ್ಯಾದಿ., ರಾಜ್ಯಸರಕಾರಗಳ ನಿಯಂತ್ರಣ... ಕಾರ ಮತ್ತು ಶಿಸ್ತಿನೊಳಗೆ ಸೇರ್ಪಡೆಯ... ರುವುದಿಲ್ಲ. ಈ ಅಧಿಕಾರಿಗಳ ಪ್ರೈಡೆಗ... ಸಂಬಂಧಪಟ್ಟು ನೇಮಿಸುವ ಮತ್ತು ಶಿಸ್... ಕ್ರಮ ಕೈಗೊಳ್ಳುವ ಅಧಿಕಾರ ಕೇಂ... ಸರಕಾರದ್ದಾಗಿದೆ.

ಆದಕಾರಣ ಭಾರತದ ಸಂವಿಧಾನದ... ಅಧಿಕಾರದ ಕೇಂದ್ರಿಕರಣಕ್ಕೇನೆ ಅಧಿಕ ಒತ್ತು... ಬಿದ್ದಿದೆ ಎಂಬುದನ್ನು ನಾವುಗಳು ಕಾ... ಬಹುದು. ದಿನಗಳು ಉರುಳುತ್ತಾ ಹೋದ... ಹೆಚ್ಚೆಚ್ಚು ಅಧಿಕಾರಗಳನ್ನು ರಾಜ್ಯಗಳಿ... ಕೇಂದ್ರಕ್ಕೆ ಕೊಡುತ್ತಾ ಬರಲಾಗುತ್ತಿ... ಆದಕಾರಣ, ಪ್ರವೃತ್ತಿಯು ರಾಜ್ಯಸರಕಾ... ಗಳು ಹೆಚ್ಚೆಚ್ಚಾಗಿ ಕೇಂದ್ರಸರಕಾರದ ಮೇ... ಅವಲಂಬಿಸಿರಬೇಕಾದ ಪ್ರವೃತ್ತಿ ಬೆಳೆಯುತ್ತಾ... ಬರುತ್ತಿದೆ.

1950ರಲ್ಲಿ ಅಂಗೀಕರಿಸಲ್ಪಟ್ಟ ಸಂವಿಧಾ... ನದ ಕಲಮುಗಳು ಮತ್ತು ಅವುಗಳಿಗೆ ಈ 4... ವರ್ಷಗಳಲ್ಲಿ ಮಂಡಿಸಲಾದ ತಿದ್ದು ಪಡಿಗ... ಇವುಗಳನ್ನು ತುಲನಾತ್ಮಕವಾಗಿ ಅಭ್ಯಸಿಸಿದ... ಈ ಪ್ರವೃತ್ತಿಯು ಎದ್ದುತೋರುತ್ತದೆ. ಅ... ರಾಜಕೀಯ ಅಧಿಕಾರಕ್ಕೆ ಸಂಬಂಧಿಸಿಯ... ಹೌದು. ಆಡಳಿತ ಅಧಿಕಾರಕ್ಕೆ ಸಂಬಂಧಿಸಿಯ... ಹೌದು.

ಅದ್ದರಿಂದ ಕೇಂದ್ರವು ಬಲಿಷ್ಠವಾಗುತ್ತಾ... ರಾಜ್ಯಗಳು ಬಲಹೀನವಾಗುತ್ತಾ ಹೋಗು... ದನ್ನು ನಾವು ಕಾಣಬಹುದು. ರಾಜ್ಯಗಳನ್ನು... ಕಡೆಗಣಿಸಿ ಕೇಂದ್ರವು ತನ್ನ ಕೈಗಳಲ್ಲಿ... ಹೆಚ್ಚೆಚ್ಚು ರಾಜಕೀಯ ಮತ್ತು ಆರ್ಥಿ... ಅಧಿಕಾರಗಳು ಕೇಂದ್ರೀಕೃತವಾಗುವಂ... ನೋಡಿಕೊಳ್ಳಲಾಗುತ್ತಾ ಬಂದಿದೆ.

ಈ ಪ್ರವೃತ್ತಿಯು ದೇಶದ ಐಕ್ಯತೆ ಮತ್ತು... ಸಮಗ್ರತೆಗೆ ಭಾಧಕವಾಗಿದೆ. ಭಾರತವ... ವೈವಿಧ್ಯತೆಗಳನ್ನೊಳಗೊಂಡ ವಿಶಾಲ ದೇ... ವಾಗಿದೆ. ಭಾರತದ ವಿವಿಧ ಭಾಗಗಳಲ್ಲಿ ಜೀ... ಸುತ್ತಿರುವ ಜನರಲ್ಲಿ ಭಾಷೆ, ಸಂಸ್ಕೃ... ಅಭ್ಯಾಸ, ರೂಢಿ–ರಿವಾಜುಗಳು ಜಾತಿ, ಮ... ಗಳು ವಿಭಿನ್ನವಾಗಿರುತ್ತವೆ. ಈ ವೈವಿಧ್ಯತೆಗ... ಮತ್ತು ವಿಶಿಷ್ಟತೆಗಳು ವಿಕಾಸಗೊಳ್ಳ... ಅಧಿಕಾರದ ಕೇಂದ್ರೀಕರಣ ಒಂದು ತಡೆಯಾ... ಬರುತ್ತಿದೆ. ಭಾರತದ ಐಕ್ಯತೆ ಮತ್ತು ಸಮಗ್ರ... ಗ್ಯಾರಂಟಿಯಾಗಬೇಕಾದರೆ ಈ ವೈವಿಧ್ಯ... ಮತ್ತು ವಿಶಿಷ್ಟತೆಗಳು ಸಂಪೂರ್ಣವಾಗಿ ವಿಕಾ... ಗೊಳ್ಳಲು ಸಂಪೂರ್ಣ ಅವಕಾಶಗಳಿರಬೇಕಾ... ಗಿದೆ. ಭಾರತದ ಸಮಗ್ರತೆ ವೈವಿಧ್ಯತೆಯಲ್ಲಿ... ಐಕ್ಯತೆ ಇದ್ದರೆ ಮಾತ್ರ ಸಾಧ್ಯ.

ಅಧಿಕಾರದ ಕೇಂದ್ರೀಕರಣ ಮತ್ತು... ಹಣದ ಕೇಂದ್ರೀಕರಣ ಜೊತೆಯಲ್ಲಿ... ಪ್ರಾದೇಶಿಕ ತಾರ ತಮ್ಮ ಧೋರಣೆ ಅತ್ಯುಟ... ಎಡವಿತ್ತು. ಪ್ರತ್ಯೇಕವಾದಿ ಚಿಂತನೆಗೆ ಅವಕಾ... ಮಾಡಿ ಕೊಡುತ್ತದೆ. ಅಸ್ಸಾಂ ಮತ್ತು... ಪಂಜಾಬಿನ ಘಟನೆಗಳು ಇದಕ್ಕೆ ಉದಾ... ಹರಣೆಗಳು. ಈ ಪರಿಸ್ಥಿತಿಯ ಲಾಭವನ್ನು... ವಿದೇಶಿ ಸಾಮ್ರಾಜ್ಯ ಶಾಹಿಗಳು ಪಡೆದ... ಭಾರತದ ಸಮಗ್ರತೆಗೆ ಹಾಗೂ... ಸಾರ್ವಭೌಮತ್ವಕ್ಕೆ ಸವಾಲಾಗಿ... ಪರಿಣಮಿಸುತ್ತಿದೆ.

ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ... ಸಂಕಲ್ಪವಾದಂತೆ–ರಾಜ್ಯಗಳಿಗೆ ಹೆಚ್ಚೆಚ್ಚು... ಸ್ವಾಯತ್ತತೆ ಭಾರತದ ಸಂವಿಧಾನ ನಿರ್ಮಾ... ಕರು ಭಾರತ ಸಂವಿಧಾನದಲ್ಲಿ ಏರ್ಪಾಡು... ಮಾಡಲಿಲ್ಲ. ಅವರು ಬಲಿಷ್ಠವಾದ ಕೇಂದ್ರ... ಮತ್ತು ಬಲಹೀನವಾದ ರಾಜ್ಯಗಳಿಗೆ ಏರ್ಪಾಟು... ಮಾಡಿ ಹೋಗಿದ್ದಾರೆ. ಕೇಂದ್ರವನ್ನು ಬಲಿಷ್ಠ... ಗೊಳಿಸುವ ತಮ್ಮ ಪ್ರಯತ್ನದಲ್ಲಿ ಅವ... ಎಲ್ಲಾ ವಿಷಯಗಳಲ್ಲಿ ರಾಜ್ಯಗಳು ಕೇಂದ್ರ... ಮೇಲೆ ಹೊಂದಿಕೊಂಡಿರುವಂತೆ ಮಾಡಿ... ದ್ದಾರೆ. ಇದರಿಂದಾಗಿ ಸ್ವಾಯತ್ತತೆಯ ಕಲ್ಪ... ಯಲ್ಲಿ ವಿಕಲ್ಪನೆ ಉಂಟಾಯಿತು.

ಅವರ ಕಲ್ಪನೆ ಸರಿಯಾಗಿಲ್ಲ ಎಂಬುದ... ಈ 40ವರ್ಷಗಳ ಅನುಭವದಲ್ಲಿ ತೋ... ಬಂದಿದೆ. ಭಾರತದ ಸಂವಿಧಾನದ ಈ ಕಲಮು... ಗಳು ಭಾರತ ಜನಾಂಗವನ್ನು ಬಲಿಷ್ಠಗೊಳಿಸಲು... ಸಹಾಯಕವಾಗಿಲ್ಲ. ಬದಲು ಭಾರತ ಜನಾಂ... ವು ಬಲಹೀನವಾಗಿದೆ.

ಆದಕಾರಣ ಬಲಿಷ್ಠವಾದ ಭಾರತವನ್ನು...

ಸಂಪಾದಕೀಯ....

ಪುಟ 1 ರಿಂದ

ಕೇಂದ್ರ ಸರಕಾರದ ನೀತಿ ನಿರೂಪಣೆಯ ಕುರಿತು ವಿವರ ತಿಳಿಯುವ ತನಕ ರಾಜ್ಯದಲ್ಲಿ ರೈತರಿಂದ ಸಾಲ ರದ್ಧತಿಯಿಲ್ಲವೆಂದು ವಿಧಾನ ಸಭೆಯಲ್ಲಿ ಹೇಳಿ ಅನಂತರ ಆಜ್ಞೆ ಹೊರಡಿಸಿದ ವೀರೇಂದ್ರ ಪಾಟೀಲರು ಈದೀಗ ಆ ಆಜ್ಞೆಯನ್ನು ಹಿಂತೆಗೆದುಕೊಂಡು ರಾಜ್ಯದಲ್ಲಿ ರೈತರಿಂದ ಎಲ್ಲಾ ಸಾಲಗಳನ್ನು ವಸೂಲಿ ಮಾಡಲು ಬಲಾತ್ಕಾರ ಕ್ರಮಗಳೂ ಸೇರಿದಂತೆ ಎಲ್ಲಾ ಕ್ರಮಗಳನ್ನು ಕೈಗೊಂಡಿದೆ. "ಸಾಲ ಮನ್ನಾ ಬೇಕಾದರೆ ಕೇಂದ್ರ ಸರ್ಕಾರವನ್ನು ಕೇಳಿರಿ" ಎಂಬ ಲೇವಡಿಯ ಮಾತುಗಳಿಂದ ವಿಧಾನ ಸಭೆಯಲ್ಲೂ ಹೊರಗೂ ತನ್ನ ಬುದ್ಧಿವಂತಿಕೆಯ ಪ್ರದರ್ಶನ ಮಾಡುತ್ತಿದ್ದಾರೆ. ಅವರ ಭಟರು ಹಳ್ಳಿ ಹಳ್ಳಿಗೆ ಹೋಗಿ ರೈತರ ಸಾಲವನ್ನು ಬಲಾತ್ಕಾರವಾಗಿ ವಸೂಲು ಮಾಡಲು ಕ್ರಮ ತೆಗೆದುಕೊಳ್ಳುತ್ತಿದ್ದಾರೆ.

ಕರ್ನಾಟಕ ಪ್ರಾಂತ ರೈತ ಸಂಘದಿಂದ ಹಿಡಿದು ಎಲ್ಲಾ ರೈತ ಸಂಘಟನೆಗಳು ಕಾಂಗ್ರೆಸ್(ಐ) ಸರಕಾರದ ಈ ರೈತ-ವಿರೋಧಿ ನೀತಿಯನ್ನು ತೀವ್ರವಾಗಿ ವಿರೋಧಿಸಿದ್ದಾರೆ. ಸರಕಾರಕ್ಕೆ ಎಚ್ಚರಿಕೆ ನೀಡಿದ್ದಾರೆ.

ರಾಜ್ಯದಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದಿಂದ ಹಿಡಿದು ಎಲ್ಲಾ ವಿರೋಧ ಪಕ್ಷಗಳು ಮಾತ್ರವಲ್ಲ, ಕಾಂಗ್ರೆಸ್(ಐ)ನ ಒಂದು ವಿಭಾಗದ ಮುಂದಾಳುಗಳೂ ವೀರೇಂದ್ರ ಪಾಟೀಲರ ಚುನಾವಣೆಯ ನಂತರದ ಆಟವನ್ನು ತೀವ್ರವಾಗಿ ವಿರೋದಿಸಿದ್ದಾರೆ.

ವಿಧಾನ ಸಭೆಯ ವಿರೋಧ ಪಕ್ಷದ ಮುಂದಾಳು ಶ್ರೀ ಬಿ. ಚಂದ್ರೇಗೌಡರು ಹೇಳಿದ ಮಾತುಗಳು ಅತ್ಯಂತ ಸಮಂಜಸ- "ರೈತರ ಸಾಲ ಮನ್ನಾ ಮಾಡಲು ಸಾಧ್ಯವಿಲ್ಲದಿದ್ದರೆ ಕುರ್ಚಿ ಬಿಟ್ಟು ನಡೆಯಿರಿ".

ಸಾಲ ಮನ್ನಾ ಮಾಡುವ ವಿಷಯದಲ್ಲಿ ಕಾಂಗ್ರೆಸ್(ಐ) ಧೋರಣೆ ಹೀಗಿದ್ದರೆ ರೈತರಿಗೆ ಸರಾಗವಾಗಿ ಸಹಕಾರಿ ಸಂಘಗಳಿಂದ ಸಾಲ ಪೂರೈಕೆಯಾಗಿರುವ ವಿಷಯದಲ್ಲಿ ರಾಜ್ಯ ಸರಕಾರದ ಧೋರಣೆಯೇನು? ರಾಜ್ಯ ಸರಕಾರದ ಜವಾಬ್ದಾರಿ ಇದರಲ್ಲಿ ಏನೂ ಇಲ್ಲವೇ?

ಏನೇನು ಇಲ್ಲವೆಂಬಂತೆ ವರ್ತಿಸುತ್ತಿದೆ ವೀರೇಂದ್ರ ಪಾಟೀಲರ ಕಾಂಗ್ರೆಸ್(ಐ) ಸರಕಾರ.

ನೇಬಾರ್ಡ್ (NABARD) ಜತೆ ಶ್ರೀಮಾನ್ ಪಾಟೀಲರು ರಾಜ್ಯದ ಮುಖ್ಯಮಂತ್ರಿಯಾಗ ವರ್ತಿಸಿದ ರೀತಿ ತೀರಾ ಬೇಜವಾಬ್ದಾರಿತನದ್ದು.

ರಾಜ್ಯ ಸರಕಾರ ಅಂದರೆ ಹಿಂದಿನ ಸರ್ಕಾರ ನೇಬಾರ್ಡ್‌ನೊಡನೆ ಸರಾಗ ಸಾಲ ಒದಗುವುದಕ್ಕೆ ರಾಜ್ಯದ ವಿಶಿಷ್ಟ ಪರಿಸ್ಥಿತಿಯನ್ನು ಪರಿಗಣನೆಗೆ ತಗೊಂಡು ಕೈಗೊಂಡ ತೀರ್ಮಾನದ ಪ್ರಕಾರ ನಡೆಯಲು ನಿರಾಕರಿಸಿ ರಾಜ್ಯದ ರೈತರಿಗೆ ಅನ್ಯಾಯ ಮಾಡಿದೆ.

ಬೊಮ್ಮಾಯಿ ಸರಕಾರ ನೇಬಾರ್ಡ್‌ಗೆ ಡಿಸೆಂಬರ್ 31, 1989 ರೊಳಗೆ ಕೊಡಲು ಒಪ್ಪಿಕೊಂಡ ರೂ. 40 ಕೋಟಿ ಹಣವನ್ನು ಸಂದಾಯ ಮಾಡದೆ ರಾಜ್ಯದ ಎಲ್ಲಾ ರೈತರಿಗೆ ಈಗ ಸಾಲಗಳು ಸಹಕಾರಿ ಸಂಘಗಳಿಂದ ದೊರೆಯದಂತೆ ಶ್ರೀ ವೀರೇಂದ್ರ ಪಾಟೀಲರು ಮಾಡಿದ್ದಾರೆ. ನಂತರ ನೇಬಾರ್ಡ್, ಕೇಂದ್ರ ಸರ್ಕಾರ, ಜನತಾದಳ ಎಂದೆಲ್ಲಾ ಬೊಟ್ಟು ತೋರಿಸುತ್ತಿದ್ದಾರೆ.

ಈ ನೀತಿ ಖಂಡನೀಯ.

ರಾಜ್ಯದ ರೈತರು ಇದಕ್ಕೆ ಸರಿಯಾದ ಸಮಯದಲ್ಲಿ ಸರಿಯಾದ ಉತ್ತರ ಕೊಡುವರು.

ಶರಣಾಗತಿಯ ಮೊದಲ ಹೆಜ್ಜೆ

ಪುಟ 1 ರಿಂದ

ನಡೆಯುತ್ತಲೇ ಇದೆ. ಕರಿಯರನ್ನು ತುಳಿಯುವ ಬಿಳಿಯರ ಪ್ರಭುತ್ವದ ಬದಲಾಗಿ ಬಿಳಿಯರನ್ನು ಹಿಂಸಿಸುವ ಕರಿಯರ ಪ್ರಭುತ್ವವಲ್ಲ ನಮ್ಮ ಬೇಡಿಕೆ ಕರಿಯರು, ಬಿಳಿಯರೆಂಬ ಬೇಧವಿಲ್ಲದ ಸಮಾನ ಹಕ್ಕಿನ ಪ್ರಜಾಪ್ರಭುತ್ವ, ಅಲ್ಪಸಂಖ್ಯಾಕರ ಪ್ರಜಾಸತ್ತಾತ್ಮಕ ಹಕ್ಕುಗಳಿಗೆ ಎಲ್ಲಾ ರಕ್ಷಣೆಯಿರುವ ನೈಜ ಪ್ರಜಾಪ್ರಭುತ್ವ ಎಂಬ ಮಾನವೀಯ ಬೇಡಿಕೆಗಳನ್ನು, ತಮ್ಮ ಅಸುರೀ ಹಿಂಸೆಯ ಮೂಲಕ್ಕೆ ರಕ್ತ ಸೋರುತ್ತಿರುವ ಡಾಲರುಗಳ ಗಳಿಕೆಯ ಬೇರಿಗೇ ಕೊಡಲಿ ಪೆಟ್ಟಾದ ಈ ಬೇಡಿಕೆಗಳನ್ನು ಈಡೇರಿಸಲು ಇನ್ನೂ ಹಿಂದೆ ಮುಂದೆ ನೋಡುತ್ತಿದೆ. ಆದರೆ ಜನಾಭಿಪ್ರಾಯದ ಒತ್ತಡವನ್ನು ತಡೆಯಲಾರದೆ ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್, ದ.ಆ.ಕಮ್ಯುನಿಸ್ಟ್ ಪಕ್ಷ ಮೊದಲಾದ ರಾಜಕೀಯ ಪಕ್ಷಗಳನ್ನು, ಆಫ್ರಿಕದ ಕಾರ್ಮಿಕರ ಒಟ್ಟು ಪ್ರತಿನಿಧಿಯಾದ ಕೋಸಾಟು (COSATU) ಎಂಬ ಕಾರ್ಮಿಕರ ಒಕ್ಕೂಟದ ಮೇಲೆ ಹೇರಿದ್ದ ನಿಷೇಧವನ್ನು ರದ್ದು ಮಾಡಿದೆ. ನೆಲ್ಸನ್ ಮಂಡೇಲಾರನ್ನು ಬೇಷರತ್ತಾಗಿ ಬಿಡುಗಡೆ ಮಾಡುತ್ತೇವೆಂದು ಏಕಪಕ್ಷೀಯ ಘೋಷಣೆ ಮಾಡಿದೆ.

ದಕ್ಷಿಣ ಆಫ್ರಿಕಾದ ಜನತೆಯ ವೀರ ಹೋರಾಟಕ್ಕೆ, ವಿವಾ ಮಂಡೇಲಾ, ವಿವಾ ಮಂಡೇಲಾ(ಮಂಡೇಲಾರಿಗೆ ವಿಜಯ) ಎಂಬ ಕೂಗು ದಿಕ್ಕು ದಿಕ್ಕುಗಳಲ್ಲಿ ಪ್ರತಿಧ್ವನಿಸಿ ಮೊರೆದು ವಿಶ್ವದೆಲ್ಲೆಡೆ ಹಬ್ಬಿ ಬಯಲಾದುದಕ್ಕೆ ದೊರೆತ ಅಪೂರ್ವ ಜಯ

ಬಂದೀಖಾನೆಯಲ್ಲಿ ಹಲವಾರು ವರ್ಷಗಳಿಂದ ಕೊಳೆಯುತ್ತಿರುವ ಕೂಸುಗಳೂ, ಬಾಲಕರೂ ಸೇರಿ ಇನ್ನೂ ಸಾವಿರಾರು ಜನ ಹೋರಾಟಗಾರರನ್ನು ಬಿಡುಗಡೆ ಮಾಡದೆ, ಮಾತುಕತೆಗೆ ತಕ್ಕ ಪರಿಸ್ಥಿತಿ ನಿರ್ಮಾಣವಾಗುವುದಿಲ್ಲ ಎಂಬ ಎ.ಎನ್.ಸಿ.ಯ ಮಾತನ್ನು ಗಮನದಲ್ಲಿಟ್ಟುಕೊಳ್ಳಬೇಕು. ವಿಶ್ವದ ಜನತೆ, ಭಾರತದ ದುಡಿಯುವ ಜನ ಸಮುದಾಯಗಳು ಆಫ್ರಿಕಾದಲ್ಲಿ ಸಂಪೂರ್ಣ ಪ್ರಜಾಸತ್ತೆಯೊಂದೇ ಅಂತಿಮ ಗುರಿ ಎಂದು ಘೋಷಿಸಬೇಕು. ಇದು ಸಾಧಿತವಾಗುವವರೆಗೂ

ಬದುಕುಳಿಯಬಹುದಾಗಿದ್ದ 40 ಸಾವಿರ ಮಕ್ಕಳು ನಮ್ಮೀ ಜಗತ್ತಿನಲ್ಲಿ ಪ್ರತಿದಿನ ಸಾಯುತ್ತಿದ್ದಾರೆ. ಇದು ಹಿರೋಶಿಮಾ, ನಾಗಾಸಾಕಿಯ ಮೇಲೆ ಹಾಕಿದ ತರಹೆಯ ಬಾಂಬುಗಳನ್ನು ಪ್ರತಿ ಮೂರು ದಿನಕ್ಕೊಮ್ಮೆ ವಿಶ್ವದ ಬಡಮಕ್ಕಳ ಮೇಲೆ ಹಾಕಿದಂತೆ. ಇವೆಲ್ಲ ಇದೇ ರೀತಿಯಲ್ಲಿ ಸಾಗಿದ್ದರೆ, ನಾವು ಯಾವ ರೀತಿಯ ಹೊಸ ಚಿಂತನೆ ಬಗ್ಗೆ ಮಾತನಾಡಲು ಸಾಧ್ಯ ಎಂದು ಕ್ಯೂಬಾದ ಫಿಡೆಲ್ ಕಾಸ್ಟ್ರೋ ಪ್ರಶ್ನಿಸಿದ್ದು ನಮ್ಮ ಓದುಗರಿಗೆ ನೆನಪಿರಬಹುದು (ಐಕ್ಯರಂಗ, ಜನವರಿ 28). ಇದೇ ಪ್ರಶ್ನೆ ವಿಶ್ವದ ರಾಜಕಾರಣಿಗಳು ಹಾಗೂ ವಿಜ್ಞಾನಿಗಳಿಗೂ ಬಂದಿದೆ. ಮೂರನೆಯ ಜಗತ್ತಿನ ಸಮಸ್ಯೆಗಳು ಪರಮಾಣು ಶಸ್ತ್ರಗಳ ಅಪಾಯದಷ್ಟೆ ವಿಸ್ಫೋಟಕಾರಿ ಸಾಧ್ಯತೆಗಳನ್ನು ಹುದುಗಿಸಿಕೊಂಡಿವೆ ಎಂಬ ಅಭಿಪ್ರಾಯಕ್ಕೆ ಅವರು ಬಂದಿದ್ದಾರೆ. 'ನಾವು ಬದುಕುಳಿಯಬಹುದೇ' ಎಂಬುದು ಇಂತಹುದೇ ವಿಶ್ಲೇಷಣೆಗಳನ್ನೊಳಗೊಂಡ ಒಂದು ಪುಸ್ತಕ. ಈಜಿಪ್ಟಿನ ವಿದೇಶಾಂಗ ಮಂತ್ರಿ ಬೊತ್ರೋಸ್ ಘಾಲಿ, ಸೋವಿಯತ್ ಒಕ್ಕೂಟ ವಿಜ್ಞಾನ ಅಕಾಡೆಮಿಯ ಆಫ್ರಿಕಾ ಸಂಸ್ಥೆಯ ನಿರ್ದೇಶಕ ಅನಾತೋಲಿ ಗ್ರೊಮಿಕೋ, ಐ.ಎಂ.ಎಫ್.ನ ಮಾಜಿ ಅಧ್ಯಕ್ಷ ಮತ್ತು ಮಾಜಿ ಅಮೆರಿಕನ್. ರಕ್ಷಣಾಸಚಿವ ರಾಬರ್ಟ್ ಮ್ಯಾಕ್ನಮಾರಾ, ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದಲ್ಲಿ ರಾಜಕೀಯ ಶಾಸ್ತ್ರದ ಪ್ರಾಧ್ಯಾಪಕ ರಿಚರ್ಡ್ ಸ್ಕಾರ್. ಮೆಕ್ಸಿಕೋ ಅಧ್ಯಕ್ಷ ಲೂಯಿ ಈಚೆವೆರಿಯಾ ಹೀಗೆ ವಿವಿಧ ಸೈದ್ಧಾಂತಿಕ ಒಲವುಗಳ, ವಿರುದ್ಧ ದೇಶಗಳು ಮಾತ್ರವಲ್ಲ ವಿವಿಧ ಖಂಡಗಳಿಗೂ ಸೇರಿದ ಈ ವ್ಯಕ್ತಿಗಳು ಏನು ಹೇಳುತ್ತಾರೆ? ಈ ಬಗ್ಗೆ "ಸೋವಿಯತ್ ರಿವ್ಯೂ' ಪತ್ರಿಕೆಯಲ್ಲಿ ಪ್ರಕಟವಾದ ಲೇಖನ ನಮ್ಮ. ಓದುಗರಿಗಾಗಿ ಇಲ್ಲಿದೆ.

ಮೂರನೆ ಜಗತ್ತಿನ ಸಮಸ್ಯೆಗಳು

ಟಿಕ್ ಟಿಕ್ ಎನ್ನುತ್ತಿರುವ ಟೈಂಬಾಂಬ್

ಇಂದಿನ ಬದುಕಿನ ಸಮಸ್ಯೆಗಳನ್ನು ಅಧ್ಯಯನ ಮಾಡುವ ಅರ್ಥಶಾಸ್ತ್ರಜ್ಞರು, ಚರಿತ್ರಕಾರರು, ಸಮಾಜ ಶಾಸ್ತ್ರಜ್ಞರು, ಮತ್ತು ಭವಿಷ್ಯಶಾಸ್ತ್ರಜ್ಞರು, ಜಗತ್ತಿನ ಬೆಳವಣಿಗೆಯ ದಿಕ್ಕುಗಳನ್ನು ತಿಳಿಯ ಬಲ್ಲವರು ವಿವಿಧ ದೇಶಗಳಿಗೆ ವಿವಿಧ ಸೈದ್ಧಾಂತಿಕ ಪಂಥಗಳಿಗೆ ಸೇರಿದ ವಿಶೇಷಜ್ಞರು ಜಗತ್ತಿನ ಬೆಳವಣಿಗೆಯಲ್ಲಿ ಮೂರು ಅಪಾಯಕಾರಿ ಎಳೆಗಳ ಬಗ್ಗೆ ಒಮ್ಮತ ವ್ಯಕ್ತಪಡಿಸುತ್ತಾರೆ. ಇದರಲ್ಲಿ ಪ್ರತಿಯೊಂದೂ ಟಿಕ್ ಟಿಕ್ ಎನ್ನುತ್ತಿರುವ ಟೈಂ ಬಾಂಬ್‌ನಷ್ಟೇ ಅಪಾಯಕಾರಿಯಾದದ್ದು ಇಡೀ ಮಾನವಕುಲಕ್ಕೆ -
1) ಶಸ್ತ್ರಾಸ್ತ್ರ ಸ್ಫೋಟ, 2) ಅಭಿವೃದ್ಧ ಮತ್ತು ಅಭಿವೃದ್ಧಿ ಹೊಂದುತ್ತಿರುವ ದೇಶಗಳ ನಡುವಣ ಬೆಳೆಯುತ್ತಿರುವ ಕಂದಕ, ಮತ್ತು 3) ಪರಿಸರ ಪರಿಸ್ಥಿತಿ ವಿಕೋಪಕ್ಕೆ ಹೋಗುತ್ತಿರುವುದು.

ಈ ಮೂರು ಎಳೆಗಳು - ಜಗತ್ತಿನಲ್ಲಿ ಭೀಕರ ದುರಂತಕ್ಕೆಡೆ ಮಾಡಿ ಕೊಡಬಹುದಾದ ಅಪಾಯಕಾರಿ ಸಂಗತಿಗಳು. ಒಂದಕ್ಕೊಂದು ತಳಕು ಹಾಕಿಕೊಂಡಿರುವಂಥವು. ಇದರಲ್ಲಿ ಜಗತನ್ನು ನಾಶದತ್ತ ಒಯ್ಯುತ್ತಿರುವಂಥದ್ದು ಅತ್ಯಂತ ಅಪಾಯಕಾರಿಯಾದದ್ದು ಯಾವುದು?

ಸಾಮಾನ್ಯವಾಗಿ ಪರಿಸರ ಅಪಾಯ ಮತ್ತು ರೋಗಗಳು ಅತ್ಯಂತ ಅಪಾಯಕಾರಿ ಎಂದು ಜನ ಭಾವಿಸುತ್ತಾರೆ. ಅಮ್ಲಮಳೆಗಳು, ಬರ, ಭೂಕುಸಿತ, ಫಲವತ್ತಾದ ಪ್ರದೇಶಗಳ ನಾಶ, ಕುಡಿಯುವ ನೀರಿನ ಕೊರತೆ, ಪರಿಸರ ಮಾಲಿನ್ಯ, ಅಂಟಾರ್ಟಿಕಾದ ಮೇಲಿನ ಓಝೋನ್ ಪದರದಲ್ಲಿ ರಂಧ್ರ ಮತ್ತು ಕೊನೆಯದಾಗಿ 20 ನೇ ಶತಮಾನದ ಪ್ಲೇಗ್ ಎಂದು ಕರೆಯಲ್ಪಡುತ್ತಿರುವ ಏಡ್ಸ್ ನಮ್ಮ ಮೇಲೆ ಎರಗಿವೆ ನಿಜ.

ಜೀವನ ಗುಣಮಟ್ಟದಲ್ಲಿ ಕುಸಿತ

ಆದರೆ ಕೋಟ್ಯಾಂತರ ಜನರನ್ನು ಬಾಧಿಸುತ್ತಿರುವ ಸಮಸ್ಯೆಗಳಲ್ಲಿ, ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಆರ್ಥಿಕ ದಾರಿದ್ರ್ಯ ಮತ್ತು ಆಹಾರ ದುಸ್ಥಿತಿ ಪ್ರಮುಖವಾದದ್ದು. ಕೋಟ್ಯಾಂತರ ಏಶಿಯನ್ನರು, ಆಫ್ರಿಕನ್ನರು, ಲ್ಯಾಟಿನ್ ಅಮೆರಿಕನ್ನರು - ಇವರು ತಮ್ಮ ಪಾಲಿನ ಆರ್ಥಿಕ ಮತ್ತು ಸಾಮಾಜಿಕ ಸವಲತ್ತುಗಳಿಂದ ವಂಚಿತರಾಗುವುದರ ಪರಿಣಾಮ ಏನು - ಎಂಬುದನ್ನು ಅವರ ದುಸ್ಥಿತಿ ದಿನಾ ಜ್ಞಾಪಿಸುತ್ತದೆ.

ಸೋವಿಯೆಟ್ - ಅಮೆರಿಕಾ ನಡುವೆ ಹಲವು ವರ್ಷಗಳ ಕಹಿ ಸಂಬಂಧಗಳ ಅವಧಿಯಲ್ಲಿ ಮನುಕುಲವನ್ನು ಕಾಡುತ್ತಿರುವ ಹಲವು ಹತ್ತು ಸಮಸ್ಯೆಗಳ ಬಗ್ಗೆ ರಾಜಕಾರಣಿಗಳು, ವಿಜ್ಞಾನಿಗಳು ಕುರುಡಾಗಿದ್ದರು. ಅಂತರಾಷ್ಟ್ರೀಯ ಕಲಹಗಳ ಕಾರಣಗಳನ್ನು ಹುಡುಕುವುದರಲ್ಲಿ, ಇನ್ನೊಂದು ಪಕ್ಷದ ಪಿತೂರಿಗಳನ್ನು ವಿಶ್ಲೇಷಿಸುವುದರಲ್ಲಿ ಮಗ್ನರಾದ ರಾಜಕಾರಣಿಗಳಿಗೆ, ವಿಜ್ಞಾನಿಗಳಿಗೆ ಇತರ ಸಮಸ್ಯೆಗಳ ಬಗ್ಗೆ ಗಮನಹರಿಸಲಾಗುತ್ತಿರಲಿಲ್ಲ. "ನಾವು ಬದುಕುಳಿಯಬಹುದೇ ಪುಸ್ತಕದಲ್ಲಿ ಅಡಕವಾಗಿರುವ ಚರ್ಚೆಯಲ್ಲಿ ಭಾಗವಹಿಸಿರುವವರು ಮೂರನೇ ಜಗತ್ತಿನ ಜನತೆಯ ಕುಸಿಯುತ್ತಿರುವ ಜೀವನ ರಾಜಕೀಯಕ್ಕೆ ಪೂರ್ವ - ಪಶ್ಚಿಮ ದೇಶಗಳ ನಡುವಣ ತಿಕ್ಕಾಟದಷ್ಟೇ ಅಸ್ಥಿರತೆಯನ್ನು ತಂದಿದೆ ಎಂದು ಅಭಿಪ್ರಾಯ ಪಡುತ್ತಾರೆ. ಈ ಕುಸಿತ ಹೀಗೆ ಮುಂದುವರಿದರೆ ಅಣು ವಿನಾಶದಷ್ಟೇ ಭೀಕರವಾದ ಭವಿಷ್ಯ ಮನುಕುಲಕ್ಕೆ ಕಾದಿದೆ.

ವಿಶ್ವ ಸಂಸ್ಥೆಯ ಅಂಕಿಸಂಖ್ಯೆಗಳ ಪ್ರಕಾರ ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಜನರ ನಿಜವಾದ ತಲಾ ಆದಾಯ 1970 ರಲ್ಲಿ ಇದ್ದುದಕ್ಕಿಂತಲೂ ಕಡಿಮೆ ಆಗಿದೆ. ತೀವ್ರ ಸಾಮಾಜಿಕ ಆರ್ಥಿಕ ಬೆಳವಣಿಗೆಯ ಕನಸುಗಳು, ಹೆಚ್ಚಿನ ಮೂರನೇ ಜಗತ್ತಿನ ದೇಶಗಳಲ್ಲಿ ಕನಸಾಗೇ ಉಳಿದಿವೆ. ಹೆಚ್ಚಿನ ದೇಶಗಳು ಬೆಳವಣಿಗೆ ಹೊಂದುವ ಬದಲು ಹಿನ್ನಡೆದಿವೆ. ಕಳೆದ 20 ವರ್ಷಗಳಲ್ಲಿ ಅವು ಸಾಧಿಸಿರುವ ಸಾಮಾಜಿಕ- ಆರ್ಥಿಕ ಸಾಧನೆಗಳು ವಿಫಲವಾಗುವ ಅಪಾಯ ಈ ದೇಶಗಳಿಗೆ ಕಾದಿದೆ. ಶೇಕಡಾ 75 ರಷ್ಟು ಜನ ಅತಿ ಉಪವಾಸದ ದುಃಸ್ಥಿತಿಯಲ್ಲಿರುವ ಪರಿಸ್ಥಿತಿಯನ್ನು 'ಸಾಮಾನ್ಯ' ಎಂದು ಭಾವಿಸುವುದಕ್ಕಿಂತ ಹೆಚ್ಚಿನ ಅನೈತಿಕತೆ ಇನ್ನಿರಲಾರದು. ತುರ್ತು ಕ್ರಮ ಏನನ್ನೂ ಕೈಗೊಳ್ಳದಿದ್ದರೆ ಈ ಸಂಖ್ಯೆ 2000 ದಷ್ಟು ಹೊತ್ತಿಗೆ ಶೇಕಡಾ 79 ಆದೀತು.

ಮೂರನೇ ಜಗತ್ತಿನ ದೇಶಗಳಲ್ಲೇ, ಕೆಲವು ಏಶ್ಯನ್ ಮತ್ತು ಆಫ್ರಿಕನ್ ದೇಶಗಳ ಸಮಸ್ಯೆಗಳು ಇನ್ನೂ ಭೀಕರವಾಗಿವೆ. ಇಲ್ಲಿ ಜನರ ಜೀವನ ಗುಣಮಟ್ಟದ ಕುಸಿತ ಗಂಭೀರ ಸ್ವರೂಪದ್ದಾಗಿದೆ. ಇದನ್ನು ತಜ್ಞರು "ನಾಲ್ಕನೇ ಜಗತ್ತು" ಎಂದು ಕರೆಯಲಾರಂಭಿಸಿದ್ದಾರೆ. 'ನಾಲ್ಕನೇ ಜಗತ್ತಿನ' ಭವಿಷ್ಯದ ಬಗ್ಗೆ ಭವಿಷ್ಯ ಶಾಸ್ತ್ರಜ್ಞರ ಅನುಮಾನ ನಿಜವಾಗುವ ಸೂಚನೆಗಳೆಲ್ಲಾ ಕಾಣುತ್ತಿವೆ.

ಅಂತರಾಷ್ಟ್ರೀಯ ಬ್ಯಾಂಕ್‌ನ ಅಂಕಿ ಸಂಖ್ಯೆಗಳ ಪ್ರಕಾರ ವಾರ್ಷಿಕ ತಲಾ ಆದಾಯ ಕೇವಲ 280 ಡಾಲರ್‌ಗಳಿರುವ 35 ಅತ್ಯಂತ ಬಡದೇಶಗಳಿವೆ. ಈ 35 ದೇಶಗಳ ಜನಸಂಖ್ಯೆ (1985ರಲ್ಲಿ) 200 ಕೋಟಿಗಳಷ್ಟಿತ್ತು. ಇದಕ್ಕಿಂತ ಸ್ವಲ್ಪ ಮೇಲಿನ ಹಂತದ 47 ದೇಶಗಳ ತಲಾ ವಾರ್ಷಿಕ ಆದಾಯ 780 ಡಾಲರ್‌ಗಳಷ್ಟಿದೆ. ಈ ದೇಶಗಳ ಜನಸಂಖ್ಯೆ ಸುಮಾರು 67.3 ಕೋಟಿಗಳು. ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಸರಾಸರಿ ತಲಾ ವಾರ್ಷಿಕ ಆದಾಯ ಸುಮಾರು 1000 ಡಾಲರ್‌ಗಳು. ಅತ್ಯಂತ ದರಿದ್ರ ದೇಶಗಳಲ್ಲಿ 26 ಆಫ್ರಿಕನ್ ದೇಶಗಳು 9 ಏಶಿಯನ್ ಮತ್ತು ಒಂದು ಲ್ಯಾಟಿನ್ ಅಮೆರಿಕಾ ದೇಶ (ಹೈತಿ)

ಆಫ್ರಿಕನ್ ದೇಶಗಳು ಈ ನಾಲ್ಕನೆಯ ಜಗತ್ತಿನ ಬಹುಸಂಖ್ಯಾತ ದೇಶಗಳು. 1960 ರಿಂದ ಸಮಾಜವಾದೇತರ ದೇಶಗಳ ಒಟ್ಟು ಉತ್ಪನ್ನದಲ್ಲಿ ಆಫ್ರಿಕಾದ ಪಾಲು ಶೇಕಡಾ 3 ಕ್ಕಿಂತ ಹೆಚ್ಚಾಗಿಲ್ಲ. 1988 ರಲ್ಲಿ ಆಫ್ರಿಕಾದ ಜನಸಂಖ್ಯೆ 55.57 ಕೋಟಿ ಇದ್ದು 2000 ದಷ್ಟು ಹೊತ್ತಿಗೆ 80 ಕೋಟಿ ಆಗ ಬಹುದು. ಆಫ್ರಿಕಾದ ತಲಾ ವಾರ್ಷಿಕ ಆದಾಯ 700 ಡಾಲರು. ಆಫ್ರಿಕಾದ ಶೇಕಡಾ 32 ಜನ ಅಕ್ಷರಸ್ತರು. ಜಗತ್ತಿನಲ್ಲೇ ಅತ್ಯಂತ ಹೆಚ್ಚಿನ ಬಾಲ್ಯಾವಸ್ಥೆಯ ಮರಣ -1000 ದಲ್ಲಿ 140-ಆಫ್ರಿಕಾದಲ್ಲಿದೆ. ಸರಾಸರಿ ಜೀವಿತಾವಧಿ 49 ವರ್ಷಗಳು. ಆಫ್ರಿಕಾದಲ್ಲಿದೆ. ಸರಾಸರಿ ಜೀವಿತಾವಧಿ ವರ್ಷಗಳು. ಆಫ್ರಿಕಾದ ಕೋಟ್ಯಾಂತರ ಜನ ಸಾವಿನ ಅಂಚಿನಲ್ಲಿ ಬದುಕುತ್ತಿದ್ದಾರೆ.

ಹಸಿವಿನಿಂದ ಬಳಲುತ್ತಿರುವ 50 ಕೋಟಿ ಜನರಲ್ಲಿ ಬಹುಸಂಖ್ಯಾತರು ಆಫ್ರಿಕಾದ ಈ 'ನಾಲ್ಕನೇ ಜಗತ್ತಿನ' ದೇಶಗಳಲ್ಲಿದ್ದಾರೆ. ಆಫ್ರಿಕಾದ ಶೇಕಡಾ 30 ಜನ ಪೌಷ್ಟಿಕ ಆಹಾರದ ತೀವ್ರ ಕೊರತೆಯಿಂದ ಬಳಲುತ್ತಿದ್ದಾರೆ. ಪ್ರತಿ ವರ್ಷ 4 ಕೋಟಿ ಜನ ಹಸಿವಿನಿಂದ ಸಾಯುತ್ತಾರೆ. ಇದರಲ್ಲಿ ಬಹುತೇಕ ಮಕ್ಕಳು. ಎಲ್ಲಾ ಅನುಮಾನಗಳ ಪ್ರಕಾರ ಈ ಸಂಖ್ಯೆ ಕಡಿಮೆಯಾಗುವ ಬದಲು, ಇನ್ನೂ 15 ಕೋಟಿಗಳಷ್ಟು ಹೆಚ್ಚಾಗುವ ಸಾಧ್ಯತೆ ಇದೆ.

ಸಾಲದ ಜಾಲ

ಕನಿಷ್ಟ ಅಭಿವೃದ್ಧಿ ಹೊಂದಿದ ಈ ದೇಶಗಳ ದುಸ್ಥಿತಿಗೆ ಹಲವು ಕಾರಣಗಳಿವೆ. ಅದರಲ್ಲಿ ಅತ್ಯಂತ ಪ್ರಮುಖವಾದ ಕಾರಣ ಸತತವಾಗಿ ನಡೆಯುತ್ತಿರುವ ನವ-ವಸಾಹತುಶಾಹಿ ಶೋಷಣೆ. 1970 ರಿಂದ 82 ರ ಅವಧಿಯಲ್ಲಿ ಬಹುರಾಷ್ಟ್ರೀಯ ಸಂಸ್ಥೆಗಳು ಆಫ್ರಿಕಾದಿಂದ ಲಾಭ ಮತ್ತು ಡಿವಿಡೆಂಡ್‌ಗಳ ರೂಪದಲ್ಲಿ 2400 ಕೋಟಿ ಡಾಲರುಗಳನ್ನು ಒಯ್ದಿವೆ. (ದ. ಆಫ್ರಿಕಾ ಬಿಟ್ಟು). ಈ ಸಂಸ್ಥೆಗಳು ತಾವು ಆರಂಭದಲ್ಲಿ ಹೂಡಿದ ಬಂಡವಾಳದಮೊತ್ತ ಆಗಲೇ ಸರಿದೂಗಿಸಿಕೊಂಡಿದ್ದಾರೆ -ಲಾಭದ ರೂಪದಲ್ಲಿ.

ಬಹುರಾಷ್ಟ್ರೀಯ ಸಂಸ್ಥೆಗಳ ವ್ಯಾಪಾರ ನೀತಿಯಿಂದಾಗಿ ಆಫ್ರಿಕಾಕ್ಕೆ ಅಪಾರ ನಷ್ಟವುಂಟಾಗುತ್ತದೆ. ಈ ಸಂಸ್ಥೆಗಳ ಬೆಲೆ ನೀತಿಯಿಂದಾಗಿ ಆಫ್ರಿಕಾ ಬಾಕ್ಸೈಟ್, ಕಬ್ಬಿಣದ ಅದಿರು ಮತ್ತು ಹತ್ತಿಯ ರಫ್ತಿನಿಂದ ಬಂದ ಆದಾಯದ ಶೇಕಡಾ 10 ರಷ್ಟು ಕೂಡಾ ಇಟ್ಟುಕೊಳ್ಳಲು ಸಾಧ್ಯವಿಲ್ಲ. ಚಹ, ಕಾಫಿ, ಕೋಕೋ, ಬೀನ್ಸ್ ಮತ್ತು ಹಣ್ಣುಗಳ ರಫ್ತಿನ ಆದಾಯದಲ್ಲಿ ಶೇಕಡಾ 20 ರಿಂದ 40 ರಷ್ಟು ಮಾತ್ರ ಉಳಿಸಿಕೊಳ್ಳಲು ಸಾಧ್ಯವಾಗುತ್ತವೆ. ಉಳಿದದ್ದನ್ನು ಈ ಗುತ್ತೇದಾರಿ ಕಂಪನಿಗಳು ಗುಳುಂ ಮಾಡುತ್ತವೆ. ಅನ್ಯಾಯಯುತ ವಿನಿಮಯದಿಂದ ಉಂಟಾದ ದುಷ್ಪರಿಣಾಮಗಳು ಯಂತ್ರಗಳು, ಉಪಕರಣಗಳು ಮತ್ತು ತಂತ್ರವಿಜ್ಞಾನಕ್ಕೆ ಗುತ್ತೇದಾರಿ ಬೆಲೆ ಕಟ್ಟುವುದರಿಂದ ವಿಕೋಪಕ್ಕೆ ಹೋಗುತ್ತವೆ. 1980-85ರ ಅವಧಿಯಲ್ಲಿ ಆಫ್ರಿಕನ್ ರಫ್ತು ಆದಾಯ ಶೇಕಡಾ 25 ರಷ್ಟು ಕುಸಿಯಿತು.

ವಿದೇಶಿ ಸಾಲದ ಹೆಚ್ಚಳ ಮೂರನೇ ಜಗತ್ತಿನ ಕಷ್ಟಗಳನ್ನು ಹೆಚ್ಚಿಸುತ್ತದೆ. ಬಡ್ಡಿದರಗಳನ್ನು ಹೆಚ್ಚಿಸುವುದರಿಂದ ಶ್ರೀಮಂತ ದೇಶಗಳು ಬಡದೇಶಗಳ ಆದಾಯವನ್ನು ನುಂಗಿ ಹಾಕುತ್ತವೆ. ಮೂರನೇ ಜಗತ್ತನ್ನು ಶೋಷಿಸಿ ಹೀಗೆ ಕೊಬ್ಬಿದ ಶ್ರೀಮಂತ ರಾಷ್ಟ್ರಗಳು, ಪುನಃ ಇದೇ ದೇಶಗಳಿಗೆ ಸಾಲ ಕೊಡುತ್ತವೆ. ಪಾಶ್ಚಿಮಾತ್ಯ ಸಾಲಗಳು ಈ ದೇಶಕ್ಕೆ ಪ್ರಯೋಜನಕಾರಿಯಾಗಿರುವುದಿಲ್ಲ. ಸಾಲ ಮರುಪಾವತಿ ಅಳಿದುಳಿದ 'ಹೆಚ್ಚುವರಿ' ಯನ್ನು ನುಂಗಿ ಹಾಕುತ್ತದೆ.

ಬಹಳ ದೇಶಗಳು ಈಗಾಗಲೇ ಸಾಲದ ವಿಷ ವರ್ತುಲದಲ್ಲಿ ಸಿಕ್ಕಿ ಹಾಕಿಕೊಂಡಿವೆ. ಇದರಿಂದ ಆರ್ಥಿಕತೆ ಪುನರುಜ್ಜೀವನಗೊಳಿಸುವ ಎಲ್ಲಾ ಪ್ರಯತ್ನಗಳು ವ್ಯರ್ಥವಾಗುತ್ತಿವೆ. ಆರ್ಥಿಕ ಚಟುವಟಿಕೆಗಳು ಇನ್ನೂ ಸಾಲವನ್ನು ಹೆಚ್ಚಿಸುತ್ತಿವೆ.

ಆಫ್ರಿಕಾದ ಒಟ್ಟು ಸಾಲ, ದ.ಅಮೇರಿಕಾದ ಸಾಲಗಳಿಗಿಂತ ಕಡಿಮೆ. ಆದ್ದರಿಂದ ಆಫ್ರಿಕಾದ ಸಾಲದ ಸಮಸ್ಯೆ ಬಗ್ಗೆ ಹೆಚ್ಚು ಅಂತರಾಷ್ಟ್ರೀಯ ಗಮನ ಹರಿದಿಲ್ಲ. ಎಲ್ಲಾ ಆಫ್ರಿಕನ್ ದೇಶಗಳ ಒಟ್ಟು ಸಾಲ (1987ರಲ್ಲಿ) 20,000 ಕೋಟಿ ಡಾಲರ್‌ಗಳು- ಬ್ರೆಜಿಲ್ ಮತ್ತು ಅರ್ಜೆಂಟಾನಾದ ಸಾಲಕ್ಕೆ ಸಮವಾಗಿದೆ. ಆದ್ದರಿಂದ ಒಟ್ಟು ಸ್ವದೇಶಿಯ ಉತ್ಪನ್ನದ ಶೇಕಡಾವಾರಾಗಿ ವಿದೇಶಿ ಸಾಲ ಆಫ್ರಿಕಾದಲ್ಲಿ ಶೇಕಡಾ 50 ಕ್ಕಿಂತಲೂ ಹೆಚ್ಚಿದ್ದರೆ ಏಶಿಯಾದಲ್ಲಿ ಇದು ಶೇಕಡಾ 25 ಮತ್ತು ಲ್ಯಾಟಿನ್ ಅಮೆರಿಕಾದಲ್ಲಿ ಶೇಕಡಾ 45.

ಸಾಲದ ಮರುಪಾವತಿಯ ಸಮಸ್ಯೆಗೆ IMF ನ ಪರಿಹಾರ ಈ ಕಾರಣದಿಂದಲೇ ಕೆಲಸ ಮಾಡಿಲ್ಲ. IMFನ ಪರಿಹಾರ ಜನ ಇನ್ನಷ್ಟು ಮಿತಜೀವನ ಮಾಡುವುದರ ಮೇಲೆ ಅವಲಂಬಿಸಿದೆ. ಜನತೆಗೆ ಇನ್ನಷ್ಟು ಹೆಚ್ಚು ಆರ್ಥಿಕ ದಾರಿದ್ರ್ಯ ಮತ್ತು ಜೀವನ ಕುಸಿತವಷ್ಟೇ IMF ನ 'ಪರಿಹಾರ'ದ ಪರಿಣಾಮ.

ಸಾಲದ ಜಾಲದಿಂದ ಈ ದೇಶಗಳು ಹೊರಗೆ ಬರಬೇಕಾದರೆ ಅಂತರಾಷ್ಟ್ರೀಯ ಆರ್ಥಿಕ ಭದ್ರತೆಯ ವ್ಯವಸ್ಥೆಯೊಂದರ ನಿರ್ಮಾಣ, ಮತ್ತು ಅಂತರ್ರಾಷ್ಟ್ರೀಯ ಆರ್ಥಿಕ ಸಂಬಂಧಗಳ ಪುನರ್ ಸಂಘಟನೆ ಇವು ಅಗತ್ಯ. ಇದನ್ನು ಸಾಧ್ಯವಾಗಿಸಲು ಈ ಕೆಲವು ಕ್ರಮಗಳನ್ನು ಕೈಗೊಳ್ಳಬೇಕು.

★ ವಿದೇಶಿ ಸಾಲದ ಮರುಪಾವತಿ ಮೇಲೆ ಪ್ರತಿಬಂಧ

★ ಅಂತರ್ರಾಷ್ಟ್ರೀಯ ವ್ಯಾಪಾರದ ಪ್ರಜಾಪ್ರಭುತ್ವೀಕರಣ ಮತ್ತು ಶ್ರೀಮಂತ ದೇಶಗಳಲ್ಲಿ ಬಡದೇಶಗಳ ರಫ್ತಿಗೆ ಇರುವ ಪ್ರತಿಬಂಧಕ ವ್ಯವಸ್ಥೆಯ ತೆಗೆದು ಹಾಕುವಿಕೆ.


★ ಸಾಲ ಮರುಪಾವತಿ ಮುಂದೆ ಹಾಕಲು ಬಡ್ಡಿದರ ಹೆಚ್ಚಳದಲ್ಲಿ ಮನ್ನಾ

★ ಬ್ಯಾಂಕ್ ಸಾಲದ ಬಡ್ಡಿದರದಲ್ಲಿ ಕಡಿತ

★ ವಿನಿಮಯ ದರಗಳಲ್ಲಿ ಸ್ಥಿರತೆ

★ ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಹಿತಾಸಕ್ತಿಗೆ ಅನುಗುಣವಾಗಿ ಅಂತರಾಷ್ಟ್ರೀಯ ಹಣಕಾಸು ಮತ್ತು ಆರ್ಥಿಕ ವ್ಯವಸ್ಥೆಯ ಪುನಸ್ಥಾಪನೆ.

ನಾವು ಒಂದೇ ಜಗತ್ತಿನಲ್ಲಿ ಬದುಕುತ್ತಿದ್ದೇವೆ. ಹಲವು ದೇಶಗಳು ಆರ್ಥಿಕ ಕಷ್ಟ ಕಾರ್ಪಣ್ಯಗಳಲ್ಲಿ ಮುಳುಗಿರುವಾಗ ಕೆಲವು ದೇಶಗಳ ಆರ್ಥಿಕ ಕಷ್ಟಗಳು, ಇತರ ದೇಶಗಳಿಗೂ ಕ್ರಮೇಣ ಹಬ್ಬುತ್ತವೆ. ಸದ್ಯಕ್ಕೆ ಯಾವುದೇ ಅನುಕೂಲಗಳಿದ್ದರೂ, ಈ ದುರಂತ ಸಹ ಯಾವ ದೇಶಕ್ಕೂ ತಪ್ಪದೇ ಇರುವುದಿಲ್ಲ. ಆದ್ದರಿಂದ ಅಂತರಾಷ್ಟ್ರೀಯ ಸೌಹಾರ್ದತೇ ಮತ್ತು ಪರಸ್ಪರ ವಿಶ್ವಾಸ ಆರ್ಥಿಕ ರಂಗದಲ್ಲೂ ಅಗತ್ಯ. ಇದು ಇಂದಿನ ಜಗತ್ತಿನ ತುರ್ತು ಅಗತ್ಯ.



ಸಾಲ ಹೊರೆ (ಶತಕೋಟಿ ಡಾಲರುಗಳಲ್ಲಿ)

KRNW / BGS-312 MAG(2) PRB DECR 319-78/79

ಜಮ್ಮು-ಕಾಶ್ಮೀರ

ರಾಷ್ಟ್ರೀಯ ಸಮಸ್ಯೆಯ ಪರಿಹಾರಕ್ಕೆ ರಾಷ್ಟ್ರೀಯ ಪ್ರಯತ್ನಗಳೇ ಬೇಕು

ಜಮ್ಮು-ಕಾಶ್ಮೀರದಲ್ಲಿ ಬೆಳೆದು ಬರುತ್ತಿರುವ ಸನ್ನಿವೇಶದಲ್ಲಿ ಒಂದು ರಾಷ್ಟ್ರೀಯ ಒಟ್ಟಭಿಪ್ರಾಯ ಮೂಡಿಸಬೇಕೆಂಬ ಎಡಪಕ್ಷಗಳ ಸಲಹೆ ಮಹತ್ವಪೂರ್ಣವಾಗುತ್ತಿದೆ. ಸರಕಾರ ಇರುವರೆಗೆ ಮಾಡಿರುವ ಬಗ್ಗೆ ನಾವೀಗ ವಿಶ್ಲೇಷಿಸಬಯಸುವುದಿಲ್ಲ. ಆದರೆ ಈ ರಾಷ್ಟ್ರೀಯ ಸಮಸ್ಯೆ ಎದುರಿಸುವಲ್ಲಿ ನ್ಯಾಶನಲ್ ಕಾನ್ಫರೆನ್ಸ್ ಮತ್ತು ಕಾಂಗ್ರೆಸ್(ಐ) ನ ಬೆಂಬಲವನ್ನು ಪಡೆಯ ಬೇಕು. ಇದಿಲ್ಲದೆ ಪ್ರತ್ಯೇಕತಾವಾದಿ ಗಳಿಂದ ಭೀತರಾಗಿರುವ ಅಥವಾ ತಾತ್ಕಾಲಿಕವಾಗಿ ಪ್ರತ್ಯೇಕತಾವಾದಿ ಘೋಷಣೆಗಳಿಂದ ವಿಚಲಿತರಾಗಿರುವ ಜನತೆಯ ಬಳಿ ಸಾರಿ ಅವರನ್ನು ಅಣಿನೆರೆಸುವುದು ಸಾಧ್ಯವಿಲ್ಲ ಎಂದು ಸಿ.ಪಿ.ಐ.(ಎಂ) ಪಾಲಿಟ್ ಬ್ಯೂರೋ ಸದಸ್ಯ ಕಾಂ. ಹರ್ಕಿಶನ್ ಸಿಂಗ್ ಸುರ್ಜಿತ್ ಹೇಳಿದ್ದಾರೆ.

ಜನವರಿ 25, 1990ರಂದು ವಿದೇಶಾಂಗ ವ್ಯವಹಾರಗಳ ಮಂತ್ರಾಲಯಕ್ಕೆ ಸೇರಿದ ಸಂಸದೀಯ ಸಲಹಾ ಸಮಿತಿಯ ಸಭೆಯೊಂದು ಸರ್ವಾನುಮತದ ನಿರ್ಣಯ ಅಂಗೀಕರಿಸಿ "ಜಮ್ಮು ಕಾಶ್ಮೀರ ಭಾರತದ ಅವಿಭಾಜ್ಯ ಅಂಗ. ಭಾರತದ ಆಂತರಿಕ ವ್ಯವಹಾರಗಳಲ್ಲಿ ಯಾವುದೇ ಹಸ್ತಕ್ಷೇಪವನ್ನು ಯಾವುದೇ ದಾವೆಯನ್ನು ನಾವು ಸಹಿಸುವುದಿಲ್ಲ" ಎಂದು ಪುನರುಚ್ಚರಿಸಿರುವುದು ಭಾರತೀಯ ಜನತೆಯ ಇಚ್ಛೆಯನ್ನು ಸ್ಪಷ್ಟವಾಗಿ ಅಭಿವ್ಯಕ್ತಿಗೊಳಿಸಿದೆ. ಪಾಕಿಸ್ತಾನದ ವಿದೇಶಾಂಗ ಮಂತ್ರಿ ಯಾಕುಬ್ ಖಾನ್‌ರ ಭಾರತದ ಭೇಟಿಯ ಕಾಲದಲ್ಲಿ ಮತ್ತು ತಿರುಗಿ ಹೋದ ಮೇಲೆ ತಳೆದ ಆಕ್ರಾಮಣಕಾರಿ ನಿಲುವು. ಪ್ರಧಾನಿ ಬೆನಝಿರ್ ಭುಟ್ಟೋರವರು "ಕಾಶ್ಮೀರದ ಜನತೆಯ ಸ್ವಯಂ ನಿರ್ಧಾರದ ಹಕ್ಕಿನ" ಬಗ್ಗೆ ಹೇಳಿಕೆ, 'ಆಝಾದ ಕಾಶ್ಮೀರ' ಎಂದು ಹೇಳಿಕೊಳ್ಳುವ ಪ್ರತ್ಯೇಕತಾವಾದಿ ಮುಖಂಡರು ಇಸ್ಲಾಮಾ ಬಾದ್‌ನಲ್ಲಿ ನೀಡಿರುವ ಹೇಳಿಕೆ ಇವೆಲ್ಲಾ ಹಿನ್ನೆಲೆಯಲ್ಲಿ ಮೇಲೆ ಹೇಳಿದ ಸರ್ವಾನುಮತದ ನಿರ್ಣಯ ಮಹತ್ವಪೂರ್ಣವಾಗಿದೆ.

ಆದರೆ ಈ ಐಕ್ಯತೆಯ ಈ ನಿರ್ಣಯದೊಂದಿಗೇ ದೇಶದ ಜಾತ್ಯತೀತ ಮೌಲ್ಯಗಳನ್ನು ರಕ್ಷಿಸುತ್ತೇವೆ, ಕೋಮುವಾದಿ, ಛಿದ್ರಕಾರಿ ಶಕ್ತಿಗಳಿಗೆ ಯಾವ ಅವಕಾಶವನ್ನು ಕೊಡುವುದಿಲ್ಲವೆಂಬ ಭರವಸೆಯನ್ನು ಕೂಡಾ ನೀಡಬೇಕು ಎಂದು ಕಾಂ. ಸುರ್ಜಿತ್ ಪಕ್ಷದ ಕೇಂದ್ರ ಸಮಿತಿಯ ಪತ್ರಿಕೆ 'ಪೀಪಲ್ಸ್ ಡೆಮಾಕ್ರಸಿ'ಯಲ್ಲಿ ಬರೆದ ತಮ್ಮ ಲೇಖನದಲ್ಲಿ ಹೇಳಿದ್ದಾರೆ.

ತನ್ನ ದೇಶದೊಳಗೇ ವಿವಿಧ ದೇಶೀ ಗುಂಪುಗಳ ನಡುವೆ ತೀವ್ರ ಸಮಸ್ಯೆಗಳಿಂದ ತೊಳಲಾಡುತ್ತಿರುವ ಪಾಕಿಸ್ತಾನಕ್ಕೆ ಕಾಶ್ಮೀರದ ಜನತೆಯ ಗಮನವನ್ನು ತನ್ನೆಡೆಗೆ ಸೆಳೆಯಲು ಹೇಗೆ ಸಾಧ್ಯವಾಗಿದೆ ಎಂಬುದರ ಬಗ್ಗೆ ನಮ್ಮ ದೇಶದ ಪ್ರಜಾಪ್ರಭುತ್ವವಾದಿ ಜನಗಳು ಯೋಚಿಸಬೇಕು. ಇಂದು ಪಾಕಿಸ್ತಾನಿ ಆಳರಸರು ಕುಮ್ಮಕ್ಕಿನಿಂದ ಸಕ್ರಿಯರಾಗಿರುವ ಪ್ರತ್ಯೇಕತಾವಾದಿಗಳು ಒಂದು ಶಕ್ತಿಯಾಗಿ ಬೆಳೆದು ಬಂದಿದ್ದಾರೆ. ಅವರಿಗೆ ಜನತೆಯಿಂದ ರಕ್ಷಣೆಯೂ ದೊರೆಯುತ್ತಿದೆ. ವಿಶೇಷವಾಗಿ ನಗರಗಳಲ್ಲಿ ತೀವ್ರ ಸಮಸ್ಯೆಗಳನ್ನೆದುರಿಸಬೇಕಾಗಿ ಬಂದಿರುವ ವಿದ್ಯಾವಂತ ನಿರುದ್ಯೋಗಿ ಯುವಜನ ಅವರತ್ತ ಆಕರ್ಷಿಸಲ್ಪಡುತ್ತಿದ್ದಾರೆ.

ಪಾಕಿಸ್ತಾನ ಸರಕಾರ ಕೂಡಾ ಭಾರತ ತಮ್ಮ ಹಾಡಿಗೆ ಕುಣಿಯಬೇಕೆಂದು ಸದಾ ಪ್ರಯತ್ನಿಸುತ್ತಿರುವ ಅಮೆರಿಕನ್ ಸಾಮ್ರಾಜ್ಯಶಾಹಿಗಳ ನೇರ ಪ್ರೋತ್ಸಾಹವಿಲ್ಲದಿದ್ದರೆ ಹೀಗೆ ಮೂಗು ತೂರಿಸುವ ಧೈರ್ಯ ಮಾಡುತ್ತಿರಲಿಲ್ಲ ಎಂಬುದನ್ನು ಅರ್ಥಮಾಡಿಕೊಳ್ಳಬೇಕೆಂದೂ ಕಾಂ. ಸುರ್ಜಿತ್ ಎಚ್ಚರಿಸಿದ್ದಾರೆ.

ಕಾಶ್ಮೀರ ಬಹಳ ಏಳು-ಬೀಳುಗಳನ್ನು ಕಂಡಿದೆ. ಆದರೆ ಅದರ ಸಮಸ್ಯೆಗಳಿಗೆ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ ಸಮಸ್ಯೆಗಳಿಗೆ ಯಾವುದೇ ಪರಿಹಾರವನ್ನು ಪ್ರತ್ಯೇಕತಾವಾದ ನೀಡಲಾರದು ಎಂಬುದು ಕೂಡಾ ಈಗ ಸ್ಪಷ್ಟವಾಗಿರಲೇಬೇಕು. ಬದಲಿಗೆ ಪರಿಹಾರ ಬೇರೆಡೆ ಹುಡುಕಬೇಕಾಗುತ್ತದೆ. ಈ ದೌರ್ಬಲ್ಯಗಳನ್ನು ಪರಿಹರಿಸಲು ಕಾಶ್ಮೀರದ ಜನತೆ ದೇಶದ ಪ್ರಜಾಪ್ರಭುತ್ವವಾದಿ ಮತ್ತು ಜಾತ್ಯತೀತ ಶಕ್ತಿಗಳನ್ನು ಅವರು ನಂಬಬಹುದು.

ಅಂದರೆ ಪ್ರತ್ಯೇಕತಾವಾದಿಗಳ ಆಟವನ್ನು ನಿಷ್ಫಲಗೊಳಿಸಿ ಗಲಭೆಯನ್ನು ಹತ್ತಿಕ್ಕಿದರಷ್ಟೇ ಸಾಲದು. ಕಾಶ್ಮೀರದ ಜನತೆಯ ಮನಗೆದ್ದು ಅವರನ್ನು ದೇಶದ ಮುಖ್ಯ ಪ್ರವಾಹದೊಂದಿಗೆ ಪೂರ್ಣವಾಗಿ ಬೆಸೆಯಬೇಕು.

ಈ ಹಿನ್ನೆಲೆಯಲ್ಲಿ ಸಂವಿಧಾನದ 370ನೇ ಕಲಮನ್ನು ರದ್ದುಗೊಳಿಸಬೇಕೆನ್ನುವವರು ರಾಷ್ಟ್ರೀಯ ಐಕ್ಯತೆಯ ಧ್ಯೇಯ ಸಾಧನೆಯಲ್ಲಿ, ಈ ರಾಷ್ಟ್ರೀಯ ಸಮಸ್ಯೆಗೆ ರಾಷ್ಟ್ರೀಯ ಸರ್ವಸಮ್ಮತ ಅಭಿಪ್ರಾಯ ರೂಪಿಸುವಲ್ಲಿ ಎಂತಹ ಹಾನಿಯುಂಟು ಮಾಡುತ್ತಿದ್ದಾರೆ ಎಂಬುದರತ್ತ ಕಾಂ. ಸುರ್ಜಿತ್ ತಮ್ಮ ಲೇಖನದಲ್ಲಿ ಗಮನ ಸೆಳೆದಿದ್ದಾರೆ.

ಇಂದು 370 ನೇ ಕಲಮು ಎಂದರೆ ಕಾಶ್ಮೀರಿಗಳ ಆಸ್ತಿಯ ಹಕ್ಕಿನ ರಕ್ಷಣೆ. ಇದನ್ನು ರದ್ದು ಮಾಡಿದರೆ ತಕ್ಷಣ ಇತರ ಪ್ರದೇಶಗಳ ದುಡ್ಡಿದ್ದ ಜನ ಇಲ್ಲಿಗೆ ಅಪಾರ ಸಂಖ್ಯೆಯಲ್ಲಿ ಬಂದು ನೆಲೆಸಲಾರಂಭಿಸುತ್ತಾರೆ. ಕಾಶ್ಮೀರಿಗಳ ಸ್ವಂತಿಕೆಗೆ ಒಂದು ನಿಜವಾದ ದೊಡ್ಡ ಅಪಾಯ ಸೃಷ್ಟಿಸುತ್ತಾರೆ. ಇದನ್ನು ಕಾಶ್ಮೀರಿ ಜನತೆ ಎಂದೂ ಸಹಿಸರು. ಅಲ್ಪ ಸಂಖ್ಯಾತರ ಆಯೋಗದ ರದ್ಧತಿ, ಮಸೂದೆಗಳನ್ನು ಕೆಡವಿ ದೇವಸ್ಥಾನಗಳ ನಿರ್ಮಾಣ ಮುಂತಾದ ಘೋಷಣೆಗಳು ರಾಷ್ಟ್ರ-ವಿರೋಧಿ ಶಕ್ತಿಗಳ ಕೈಗಳನ್ನು ಇನ್ನಷ್ಟು ಬಲಪಡಿಸುತ್ತದೆ ಎಂಬುದನ್ನು ಎಲ್ಲಾ ದೇಶಪ್ರೇಮಿ ಶಕ್ತಿಗಳು ಮನಗಂಡು ಈ ಸಂದರ್ಭದಲ್ಲಿ ತಮ್ಮ ವಿಶೇಷ ಜವಾಬ್ದಾರಿಯನ್ನು ನಿರ್ವಹಿಸಲು ಮುಂದಾಗಬೇಕು ಎಂದಿರುವ ಕಾಂ. ಸುರ್ಜಿತ್ ಕಾಶ್ಮೀರದ ಸೇರ್ಪಡೆ ಅಂತಿಮ ಎಂದು ಮತ್ತೆ ಮತ್ತೆ ಘೋಷಿಸಿರುವ ಫರೂಕ್ ಅಬ್ದುಲ್ಲಾ ಹಾಗೂ ನ್ಯಾಶನಲ್ ಕಾನ್ಫರೆನ್ಸ್ ಪಕ್ಷವನ್ನು ರಾಷ್ಟ್ರೀಯ ಸರ್ವಸಮ್ಮತಿ ರೂಪಿಸುವ ಪ್ರಕ್ರಿಯೆಯಲ್ಲಿ ತೊಡಗಿಸುವುದು ಮಹತ್ವದ್ದು ಎಂದು ಮತ್ತೆ ಹೇಳಿದ್ದಾರೆ. ರಾಷ್ಟ್ರೀಯ ಹಿತಾಸಕ್ತಿಗಳ ರಕ್ಷಣೆಯಲ್ಲಿ ವೈಯುಕ್ತಿಕ ದ್ವೇಷ ಅಡ್ಡ ಬರಬಾರದು. ಪರಿಸ್ಥಿತಿ ಗಂಭೀರವಾಗಿದೆ. ಆದ್ದರಿಂದ ಎಲ್ಲಾ ರಾಜಕೀಯ ಶಕ್ತಿಗಳ ಐಕ್ಯ ಪ್ರಯತ್ನ ಅತ್ಯಗತ್ಯ ಎಂದು ಕಾಂ. ಹರ್ಕಿಶನ್ ಸಿಂಗ್ ಸುರ್ಜಿತ್ ಅತ್ಯಂತ ಕಳಕಳಿಯಿಂದ ಹೇಳಿದ್ದಾರೆ. ಪಾಕಿಸ್ತಾನದ ಹಸ್ತಕ್ಷೇಪ ಹಾಗೂ ಈ ಸಂದರ್ಭದಲ್ಲಿ ನಮ್ಮ ಕರ್ತವ್ಯದ ಬಗ್ಗೆ ಪಿ.ಡಿ. ಸಂಪಾದಕೀಯವನ್ನು ಮುಂದೆ ಕೊಡುತ್ತಿದ್ದೇವೆ.

ಪಾಕಿಸ್ತಾನ ಮೂಗು ತೂರಿಸುವುದನ್ನು ನಿಲ್ಲಿಸಬೇಕು.

(ಪಿ.ಡಿ. ಸಂಪಾದಕೀಯ)

ಜಮ್ಮು-ಕಾಶ್ಮೀರದಲ್ಲಿ ಗಲಭೆ ಸೃಷ್ಟಿಸಲು ನಮ್ಮೆರಡು ದೇಶಗಳ ನಡುವಿನ ಸಂಬಂಧಗಳನ್ನು ಉದ್ರೇಕಿಸಲು ಪಾಕಿಸ್ತಾನೀ ಆಳರಸರು ದೃಢ ನಿರ್ಧಾರ ಮಾಡಿದಂತಿದೆ. ಇತ್ತೀಚಿನ ಕೆಲವು ಬೆಳವಣಿಗೆಗಳಿಂದ ಇದು ಕಂಡು ಬರುತ್ತಿದೆ. ಒಂದೆಡೆ ಜಮ್ಮು-ಕಾಶ್ಮೀರದ ಗಲಭೆಯಲ್ಲಿ ತಮ್ಮ ಕೈವಾಡವಿಲ್ಲೆನ್ನುತ್ತಾ ಇನ್ನೊಂದೆಡೆ ಕಾಶ್ಮೀರಿ ಜನತೆ "ವಿಮೋಚನಾ ಹೋರಾಟ" ನಡೆಸುತ್ತಿದ್ದಾರೆ. ಪಾಕಿಸ್ತಾನಿ ಜನತೆ ಅವರಿಗೆ ಬೆಂಬಲಿಸಲು ಬದ್ಧರು ಎಂಬ ಬಹಿರಂಗ ನಿಲುವನ್ನು ಅವರು ತಳೆಯುತ್ತಿದ್ದಾರೆ. ಈ ಪ್ರಶ್ನೆ ಅಂತರಾಷ್ಟ್ರೀಯ ಪ್ರಶ್ನೆಯ ರೂಪ ಕೊಟ್ಟು ನಮ್ಮ ರಾಷ್ಟ್ರೀಯ ಐಕ್ಯತೆಗೆ ಅಪಾಯ ತರಲು ಪ್ರಯತ್ನಿಸುತ್ತಿದ್ದಾರೆ

ಪಾಕಿಸ್ತಾನೀ ಆಳರಸರಿಗೆ ತಮ್ಮ ಕ್ರಮಗಳ ಪರಿಣಾಮದ ಅರಿವಿದ್ದಂತಿಲ್ಲ. ತಮ್ಮ ವಿಶಿಷ್ಟತೆ ಹಾಗೂ ಪ್ರಜಾಪ್ರಭುತ್ವ ಹಕ್ಕುಗಳಿಗೆ ಭ-ಂಗ ತರಬಹುದಾದ ಅಗಾಧ ಸಮಸ್ಯೆಗಳಿಂದ ಅದು ಸಿಂಧ್‌ನಲ್ಲಾಗಲಿ, ಬಲೂಚಿಸ್ತಾನದಲ್ಲಾಗಲಿ-ವಾಯುವ್ಯ ಗಡಿ ಪ್ರಾಂತದಲ್ಲಾಗಲಿ ಪಾಕಿಸ್ತಾನೀ ಜನತೆಯ ಗಮನವನ್ನು ಬೇರೆಡೆ ಸೆಳೆಯಲು ಬಹುಶಃ ಹೀಗೆ ಮಾಡುತ್ತಿರಬಹುದು

ಪಾಕಿಸ್ತಾನೀ ಅಧ್ಯಕ್ಷ ಜನರಲ್ ಇಶಾಕ್ ಖಾನ್ ಹಿಂದಿನ ಝಿಯಾ ಆಳ್ವಿಕೆಯನ್ನು ಪ್ರತಿನಿಧಿಸುವ ವ್ಯಕ್ತಿ. ಆತನಿಗೆ ಸಾಕಷ್ಟು ಅಧಿಕಾರ ಈಗಲೂ ಇದೆ ಎಂಬುದನ್ನೂ ನೆನಪಿಸಿಕೊಳ್ಳುವುದು ಒಳ್ಳೆಯದು. ಇದೇ ರೀತಿ ಪಾಕಿಸ್ತಾನಿ ಸೇನಾಧಿಕಾರಿಗಳು ಹಳೆಯ ಸರ್ವಾಧಿಕಾರಿ ವಾತಾವರಣದಲ್ಲೇ ಇನ್ನೂ ಬದುಕಿದ್ದಾರೆ. ಪಾಕಿಸ್ತಾನದ ಪಂಜಾಬನ್ನು ಜಿಯಾ ಪರ ವ್ಯಕ್ತಿಗಳೇ ಆಳುತ್ತಿದ್ದಾರೆ. ಬೆನಝಿರ್ ಭುಟ್ಟೊ ಅಮೆರಿಕನ್ ಸಾಮ್ರಾಜ್ಯಶಾಹಿಗಳ ಒತ್ತಡಕ್ಕೂ ಹೊಂದಿಕೊಳ್ಳಬೇಕಾಗಿದೆ ಮತ್ತು ಆಕೆ ಅಧಿಕಾರದಲ್ಲಿರಬೇಕಾದರೆ ತನ್ನ ವಿದೇಶಾಂಗ ಮಂತ್ರಿ ಮತ್ತು ಅಧ್ಯಕ್ಷರ ಹಾಗೂ ಸೇನೆಯ ಒತ್ತಡಕ್ಕೂ ತಲೆಬಾಗಬೇಕಾಗಿದೆ.

ಖಂಡಿತಾ ಪಾಕಿಸ್ತಾನಿ ಆಳರಸರು ಒಂದು ಗಂಭೀರ ತಪ್ಪು ಲೆಕ್ಕಾಚಾರ ಮಾಡುತ್ತಿದ್ದಾರೆ.

ಸಮಸ್ಯೆಗಳಿಂದ ಆವರಿಸಲ್ಪಟ್ಟ ಕಾಶ್ಮೀರಿ ಜನತೆಯ ಬಗ್ಗೆ ಆತಂಕಿತರಾಗಿದ್ದರೂ ದೇಶದ ಐಕ್ಯತೆ ಕಾಪಾಡುವಲ್ಲಿ ಭಾರತದ ಎಲ್ಲಾ ರಾಜಕೀಯ ಶಕ್ತಿಗಳು ಸಂಪೂರ್ಣ ಒಗ್ಗಟ್ಟಾಗಿದ್ದಾರೆ ಎಂಬುದು ಅವರಿಗೆ ತಿಳಿದಿರಲಿಕ್ಕಿಲ್ಲ. ಭಾರತದ ಜನತೆ ಪಾಕಿಸ್ತಾನಿ ಜನತೆಯೊಂದಿಗೆ ಸಂಬಧ್ಧ ಸುಧಾರಿಸಿಕೊಳ್ಳ ಬಯಸುತ್ತಾರೆ. ಆದರೆ ಈ ಅಪೇಕ್ಷೆಯನ್ನು ಅಪಾರ್ಥ ಮಾಡಿಕೊಳ್ಳದಿರಲಿ.

ಇನ್ನು, ಭಾರತವನ್ನು ಅಸ್ಥಿರಗೊಳಿಸುವ ಕೆಲಸಗಳಲ್ಲಿ ಸದಾ ಪಾಕಿಸ್ತಾನಕ್ಕೆ ನೆರವಾದ ಅಮೆರಿಕನ್ ಸಾಮ್ರಾಜ್ಯಶಾಹಿಗಳ ಬೆಂಬಲದ ಭರವಸೆ ಈ ಆಳರಸರಿಗೆ ಇದೆ. ಆದರೆ ಈಗಿನ ವಿಶ್ವ ಸನ್ನಿವೇಶದಲ್ಲಿ 1965 ಅಥವಾ 1971 ರಲ್ಲಾದಂತೆ ಯಾವುದೇ ಒಂದು ವಿದೇಶೀ ಶಕ್ತಿ ಬಹಿರಂಗವಾಗಿ ತನ್ನ ನೆರವಿಗೆ ಬರಲು ಸಾಧ್ಯವಾಗಲಿಕ್ಕಿಲ್ಲ ಎಂಬುದು ಅವರಿಗೆ ತಿಳಿಯದಿರುವುದು ಅವರ ಇನ್ನೊಂದು ತಪ್ಪು ಲೆಕ್ಕಾಚಾರ.

ಅಂದರೆ ಜಮ್ಮು-ಕಾಶ್ಮೀರದ ಜನತೆ ಎದುರಿಸುತ್ತಿರುವ ಸಮಸ್ಯೆಗಳನ್ನು ಮರೆತು ಬಿಡಬಹುದೆಂದು ಅರ್ಥವಲ್ಲ. ನಮ್ಮ ದೇಶದೊಳಗೆ ತಮ್ಮ ಅದೃಷ್ಟವನ್ನು ಅವರು ಬೆಸೆದುಕೊಂಡಾಗ ಅವರಲ್ಲಿದ್ದ ನಿರೀಕ್ಷೆಗಳು ಈಡೇರಿಲ್ಲ. ಆರ್ಥಿಕ, ರಾಜಕೀಯ, ಸಾಂಸ್ಕೃತಿಕ ಮುನ್ನಡೆಯ, ತಮ್ಮ ಸ್ವಂತಿಕೆಯ ರಕ್ಷಣೆಯ ಗಂಭೀರ ಸಮಸ್ಯೆಗಳನ್ನು ಅವರು ಎದುರಿಸುತ್ತಿದ್ದಾರೆ ಎಂಬುದು ವಾಸ್ತವ ಸಂಗತಿ. ದೇಶದಲ್ಲಿ ಹೆಚ್ಚುತ್ತಿರುವ ಕೋಮುವಾದಿ ವಾತಾವರಣ ರಾಮಜನ್ಮಭೂಮಿ-ಬಾಬ್ರಿ ಮಸೀದೆಯಂತಹ ವಿವಾದಗಳು ಅವರಲ್ಲಿ ಮತ್ತಷ್ಟು ಸಂಶಯ ಎಬ್ಬಿಸುತ್ತಿವೆ. ಜಮ್ಮು-ಕಾಶ್ಮೀರ ನಮ್ಮೊಡನೆ ಸೇರಿಕೊಂಡಾಗ ಯಾವ ಹುರುಪಿತ್ತೋ ಅದೇ ಹುರುಪಿನಿಂದ ನಾವೀಗ ಈ ಸಮಸ್ಯೆಗಳನ್ನು ಎದುರಿಸಬೇಕು. ನಮ್ಮ ದೇಶದ ಸಾಮಾಜಿಕ, ಸಾಂಸ್ಕೃತಿಕ ಜೀವನದ ಭಿನ್ನತೆಯನ್ನು ಮಾನ್ಯ ಮಾಡಿದಾಗ ಮಾತ್ರವೇ ದೇಶದ ಐಕ್ಯತೆ ಬಲಗೊಳಿಸಲು ಸಾಧ್ಯ ಎಂಬುದನ್ನು ಪ್ರಜಾಪ್ರಭುತ್ವವಾದಿ ಶಕ್ತಿಗಳು ಪುನರುಚ್ಚರಿಸಬೇಕು.

ಆದರೆ ಇಂದಿನ ಗಳಿಗೆಯಲ್ಲಿ ಕಾಶ್ಮೀರಿ ಜನತೆಗೆ ಜಾತ್ಯತೀತ ಭಾರತ ಅವರ ಸ್ವಂತಿಕೆಯನ್ನು ರಕ್ಷಿಸುತ್ತದೆಂಬ ಸ್ಪಷ್ಟ ಭರವಸೆ ನೀಡುತ್ತಾ. ಅದೇ ವೇಳೆಗೆ ಭಾರತದ ಎಲ್ಲಾ ಜನಗಳು ಅಮೆರಿಕನ್ ಸಾಮ್ರಾಜ್ಯಶಾಹಿಗಳ ಬೆಂಬಲ ಪಡೆದಿರುವ ಪಾಕಿಸ್ತಾನೀ ಆಳರಸರ ದುಷ್ಟ ಆಟವನ್ನು ಸೋಲಿಸಲು ಒಗ್ಗಟ್ಟಾಗಿ ನಿಲ್ಲುವುದೂ ಅತ್ಯಗತ್ಯ.

ಪಾಕಿಸ್ತಾನದ ಜನತೆಯೂ ಯೋಚಿಸಬೇಕಾಗಿದೆ. ಇನ್ನೊಂದು ದೇಶದ ಆಂತರಿಕ ವ್ಯವಹಾರಗಳಲ್ಲಿ ತಮ್ಮ ಆಳರಸರು ಮೂಗು ತೂರಿಸುವುದು ತಮ್ಮ ಹಿತಾಸಕ್ತಿಗಳಿಗೇ ಒಳ್ಳೆಯದಲ್ಲ ಎಂಬುದನ್ನು ಅವರು ಅರಿಯಬೇಕು. ಪಾಕಿಸ್ತಾನದ ಜನತೆ ಭಾರತದ ಜನತೆಯೊಂದಿಗೆ, ಅದೇ ರೀತಿ ಭಾರತದ ಜನತೆ ಪಾಕಿಸ್ತಾನದ ಜನತೆಯೊಂದಿಗೆ ಮಿತ್ರತ್ವ ಬಯಸುತ್ತಾರೆ. ಎರಡು ದೇಶಗಳ ನಡುವಿನ ಸಮಸ್ಯೆಗಳನ್ನು ಶಿಮ್ಲಾ ಒಪ್ಪಂದದ ಚೌಕಟ್ಟಿನಲ್ಲಿ ಪರಿಹರಿಸಿಕೊಳ್ಳಬೇಕು ಎಂದು ನಿರೀಕ್ಷಿಸುತ್ತಾರೆ ಎಂಬುದು ನಿಸ್ಸಂಶಯ.

ದೇಶದ ಐಕ್ಯತೆ ಸಮಗ್ರತೆಯ ಪ್ರಶ್ನೆಯ ಮೇಲೆ ಯಾವುದೇ ರಾಜಿ ಸಾಧ್ಯವಿಲ್ಲ ಎಂಬ ದೃಢ ಘೋಷಣೆಯನ್ನು ದೇಶದ ಎಲ್ಲಾ ರಾಜಕೀಯ ಶಕ್ತಿಗಳು ಮಾಡಬೇಕು.

ತಿದ್ದುಪಡಿ

ಕಳೆದ ಸಂಚಿಕೆಯಲ್ಲಿ ಪ್ರಕಟವಾದ ಕಾಂ. ಸುರ್ಜಿತ್‌ರವರ ಜಮ್ಮು-ಕಾಶ್ಮೀರ ಕುರಿತಾದ ಲೇಖನದಲ್ಲಿ (ಪುಟ 4) ಮುದ್ರಣ ದೋಷದಿಂದಾಗಿ ಎರಡು ಗಂಭೀರ ತಪ್ಪುಗಳಾಗಿವೆ- ಮೂರನೆಯ ಕಾಲಂನಲ್ಲಿ 'ಜನತೆಯ ವಿಶ್ವಾಸ ಗೆಲ್ಲಲು ಸಾಧ್ಯವಾಗದ ಫಾರುಕ್ ಅಬ್ದುಲ್ಲಾ ನೇತೃತ್ವ ವಹಿಸಿಕೊಂಡರು ಎಂದಿದೆ ಇದು ಜನತೆಯ ವಿಶ್ವಾಸ ಗಳಿಸಲು ಸಾಧ್ಯವಾದ ಫಾರುಕ್ ಅಬ್ದುಲ್ಲಾ ನೇತೃತ್ವ ವಹಿಸಿಕೊಂಡರು ಎಂದಿರಬೇಕಿತ್ತು. ನಾಲ್ಕನೇ ಕಾಲಂನಲ್ಲಿ 'ಚುನಾವಣೆಗಳಲ್ಲಿ ಮೋಸ ನಡೆದಿರುತ್ತಿದ್ದರೆ ಅದು ಚುನಾವಣೆಗಳನ್ನು ಗೆಲ್ಲಲು ಸಾಧ್ಯವಾಗುತ್ತಿತ್ತು" ಎಂಬುದು ನೀವು ಈಗಾಗಲೇ ನಿರೀಕ್ಷಿಸಿರಬಹುದಾದಂತೆ 'ಚುನಾವಣೆಗಳಲ್ಲಿ ಮೋಸ ನಡೆದಿರದಿದ್ದರೆ...' ಎಂದಿರಬೇಕಿತ್ತು. ಈ ಪ್ರಮಾದಗಳಿಗಾಗಿ ಕ್ಷಮೆ ಕೋರುತ್ತೇವೆ.

ಬಿ.ಟಿ.ಆರ್. ಆಸ್ಪತ್ರೆಯಲ್ಲಿ

ಕಳೆದ ತಿಂಗಳು ವೈದ್ಯಕೀಯ ಪರಿಶೀಲನೆಗೆ ಮುಂಬೈಯ ಖಾಸಗಿ ಆಸ್ಪತ್ರೆಯೊಂದಕ್ಕೆ ಸೇರಿಸಲ್ಪಟ್ಟಿದ್ದ ಸಿ.ಪಿ.ಐ.(ಎಂ) ಪಾಲಿಟ್ ಬ್ಯೂರೋ ಸದಸ್ಯ ಕಾಂ. ಬಿ.ಟಿ. ರಣದಿವೆ ಈಗ ಟಾಟಾ ಮೆಮೋರಿಯಲ್ ಆಸ್ಪತ್ರೆಯಲ್ಲಿ ಶುಶ್ರೂಷೆ ಪಡೆಯುತ್ತಿದ್ದಾರೆ.

ಜನವರಿ 31,1990

ಸರೋಜ್ ಮುಖರ್ಜಿ ಗಂಭೀರ ಸ್ಥಿತಿಯಲ್ಲಿ

ಕಲ್ಕತ್ತೆಯ ಎಸ್.ಆರ್.ಎಸ್. ಮೆಡಿಕಲ್ ಕಾಲೇಜ್ ಆಸ್ಪತ್ರೆಯಲ್ಲಿರುವ ಸಿ.ಪಿ.ಐ.(ಎಂ) ಪಾಲಿಟ್ ಬ್ಯೂರೋ ಸದಸ್ಯ ಹಾಗೂ ಪಶ್ಚಿಮ ಬಂಗಾಳ ರಾಜ್ಯ ಸಮಿತಿ ಕಾರ್ಯದರ್ಶಿ ಕಾಂ. ಸರೋಜ ಮುಖರ್ಜಿಯವರ ದೇಹ ಸ್ಥಿತಿ ಗಂಭೀರವಾಗಿದೆ. ಕಳೆದ ಕೆಲವು ದಿನಗಳಿಂದ ಅವರು ಇದೇ ಸ್ಥಿತಿಯಲ್ಲಿದ್ದಾರೆ.

ಜನವರಿ 31, 1990

'ಐಕ್ಯರಂಗ' ದ ಪ್ರಸಾರ ಹೆಚ್ಚಿಸಿ

Printed and published by P.Ramachandra Rao on behalf of Communist party of India (Marxist), Karnataka State Committee L-56, K.V.Temple Street, Sultanpet, Bangalore - 560 053. Phone No. 75331. Editor: P.RAMACHANDRA RAO Managerial Office: C/o ... Road, Gandhinagar, Bangalore - 560 009